ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ಜೂನ್-೨೦೧೨ ಸಂಚಿಕೆ-೧೧

ಸಂಭವಿಸುತ್ತಿದೆ ದೇಶದ ಅಧೋಗತಿ, ಹೇಗೆ ಸಾಧ್ಯ ಊರ್ಧ್ವಗತಿ?

*

ಜನತೆ ಸರ್ವೋಚ್ಚ, ಪಾರ್ಲಿಮೆಂಟಲ್ಲ

*

ವೇದ ಬಿಂದು

*

ಗಾಂಧೀ ಆತ್ಮಕಥೆ ಮಾಡಿದ ಪವಾಡ

*

ಶಿಕ್ಷಣ ಕ್ಷೇತ್ರದಲ್ಲೊಂದು ಸಾಹಸ ಪ್ರಯೋಗ

*

ಚಿಪ್ಕೋ ಆಂದೋಲನದ ವಿಮರ್ಶೆ

ಜನಪದ ವಿಚಾರದಲ್ಲಿ

ಜೂನ್ - ೨೦೧೨

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್ - ೨೦೧೨
ಸಂಪುಟ - ೧೨
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ನಂದಾದೀಪ

ಆರದಿರು, ಆರದಿರು, ಓ ನನ್ನ ಬೆಳಕೆ!
ಒಳಗಿರುವ ಬೆಳಕೆ, ಬೆಳಕೇ!
ತಾರದಿರು ಕಾರಿರುಳನೆದೆಯ ಮಂದಿರಕೆ;
ಆಗು, ನಂದಾದೀಪವಾಗಿ ಬೆಳಗು,
ನನ್ನತನದೆಳಮೊಳಕೆ, ಬೆಳಕೇ!
ಓ ನನ್ನ ಬೆಳಕೇ!

ಒಮ್ಮೊಮ್ಮೆ ಭುಗಿಲೆದ್ದು ನೆಗೆದೆದ್ದು ಬಂದು
ಉನ್ನತದ ಸಿರಿನಾಡ ಸೊಬಗಿದೆಂದು
ತೆರೆದು ತೋರಿದೆ ಎದೆಗೆ; ಬಳೊಳೆಲ್ಲ
ಮೇಲುನಾಡಿನ ಕನಸ ಬೆಳೆದೆಯಲ್ಲ!
ಮಿಂಚುತನದೀ ಸಂಚು ಸಾಕು, ಸಾಕು!
ಆಗು, ನಂದಾದೀಪವಾಗಿ ಬೆಳಗು.

ನಂಬಿ ಕುಳಿತೆನು ನಿನ್ನ ದಿನವು, ದಿನವು,
ಹಂಬಲಿಸಿ ಸಣ್ಣಾಗುತಿರಲು ಮನವು;
ಕಿಡಿಯಾಗಿ ಬಗೆತಳದೊಳೇಕೆ ಕುಳಿತೆ?
ಇಡಿಯಾಗಿ ದಳ್ಳಿಸಲದೇಕೆ ಮರೆತೆ?

ಹೊನ್ನ ಬಲೆಯನು ಬೀಸಿ ಹೂವು ಹಾಸಿಗೆ
ಹಾಸಿ
ಸುಗ್ಗಿಸುಗ್ಗಿಯ ಚೆಲುವುನಲವುಗಳನಣಿಗೊಳಿಸಿ
ವಿಷಯ ಸುಖದಾಮಿಷವನೆತ್ತೆತ್ತಲೂ ಚೆಲ್ಲಿ
ತುತ್ತುಗೊಳಲೆಂದು ಸೆಳೆಯುವುದಿಂದು
ಕತ್ತಲು,
ತತ್ತರಿಸಿ ಬಾಳು ಕೈ ಚಾಚುತಿದೆ ಸುತ್ತಲೂ
ಎತ್ತು ಎತ್ತಲೆ ಎತ್ತು ಬೆಳಕಿನ ಪತಾಕೆ,
ಒಳಗಿರುವ ಬೆಳಕೆ, ಬೆಳಕೇ!

– *ಗೋಪಾಲಕೃಷ್ಣ ಅಡಿಗ*

ವಿಚಾರ ದೀಪ್ತಿ

ಹೇಳಿ ಕೇಳಿ ಕನ್ನಡ ಮೇಸ್ಟರಾದ ನಾನು ಅಮೇರಿಕಕ್ಕೆ ಅದೂ ನಾಲ್ಕು ಬಾರಿ ಹೋಗಿ ಸುತ್ತಾಡಿ ಬಂದದ್ದು ನನಗೂ ಒಂದು ಆಶ್ಚರ್ಯವೇ! ನನ್ನ ಭಾವಗೀತೆಗಳು ಹಾಡುಗಳಾಗಿ ರೂಪುಗೊಂಡು ಕ್ಯಾಸೆಟ್ಟಿನೊಳಗೆ ಸೇರಿದ್ದೇ ತಡ ಅವುಗಗಳಿಗೆ ರೆಕ್ಕೆ ಪುಕ್ಕ ಬಂದು ಅಮೇರಿಕಕ್ಕೂ ಹಾರಿ ಹೋದವು! ಅದನ್ನು ಕೇಳಿದ ಅಲ್ಲಿನ ಕನ್ನಡಿಗರಿಗೆ ನನ್ನ ಬಗ್ಗೆ ಪ್ರೀತಿ, ಅಭಿಮಾನ ಬೆಳೆದದ್ದು ಸಹಜ. ಹದಿನಾರು ವರ್ಷಗಳ ಕೆಳಗೆ ಲಾಸ್ ಏಂಜಲೀಸ್ ಕನ್ನಡ ಕೂಟದ ರಜತ ಮಹೋತ್ಸವವನ್ನು ಉದ್ಘಾಟಿಸಲು ನನಗೆ ಅಲ್ಲಿಂದ ಆಹ್ವಾನ ಬಂತು. ಹಾಗೆ ಹೋದಾಗ ಅಮೇರಿಕದ ಅನೇಕ ಕನ್ನಡ ಕೂಟಗಳಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ ಕುರಿತು ಉಪನ್ಯಾಸ ನೀಡುವ ಅವಕಾಶವೂ ಒದಗಿತು. ನ್ಯೂಜೆರ್ಸಿ, ನ್ಯೂಯಾರ್ಕ್, ಷಿಕಾಗೋ, ಸ್ಯಾನ್ ಫ್ರಾನ್ಸಿಸ್ಕೊ ಹೀಗೆ ಸುಮಾರು ಹದಿನಾರು ಪ್ರಾಂತ್ಯಗಳಲ್ಲಿ ಓಡಾಡಿ ಬಂದೆ. ಅದೇ ಕೆಲಸಕ್ಕಾಗಿ ಮತ್ತೆ ಮೂರು ಸಲ ಹೋಗಿ ಮೂರು ನಾಲ್ಕು ತಿಂಗಳು ಇದ್ದು ಭಾಷಣ ಕೊರೆದು ಬಂದಿದ್ದೇನೆ. ಅಮೆರಿಕ ಕನ್ನಡಿಗರ ಸಲುವಾಗಿಯೇ ಕನ್ನಡ ಸಾಹಿತ್ಯ ಪರಂಪರೆ ಕುರಿತು ನಾನು ಮಾಡಿರುವ ಉಪನ್ಯಾಸಗಳು 'ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ' ಎಂಬ ಹೆಸರಿನಲ್ಲಿ ನಾಲ್ಕು ಧ್ವನಿ ಮುದ್ರಿಕೆಗಳ ಸಂಪುಟವಾಗಿ ಹೊರ ಬಂದು ಅಲ್ಲಿನ ನೂರಾರು ಕನ್ನಡಿಗರ ಮನೆ ಸೇರಿವೆ. ಇಪ್ಪತ್ತು ವರ್ಷಗಳ ಹಿಂದೆಯೇ ಇಂಜಿನಿಯರ್ ಆಗಿ ಅಮೇರಿಕಕ್ಕೆ ಹೋಗಿ ದೊಡ್ಡ ಹುದ್ದೆಯಲ್ಲಿರುವ ನನ್ನ ಮಗ ಚೈತ್ರ ಕೂಡ ನೋಡಿರದಷ್ಟು ಅಮೇರಿಕದ ಪ್ರಾಂತ್ಯ, ನಗರಗಳನ್ನು ಕನ್ನಡ ಪಂಡಿತನಾದ ನಾನು ನೋಡಿ ಬಂದಿರುವುದು ಕನ್ನಡ ನನಗೆ ದಯಪಾಲಿಸಿದ ಸೌಭಾಗ್ಯವೇ ಸರಿ. 'ಕನ್ನಡಕ್ಕಾಗಿ ಕೊರಳೆತ್ತು ನಿನ್ನ ದನಿ ಪಾಂಚಜನ್ಯವಾಗುತ್ತದೆ' ಎಂಬ ಕುವೆಂಪು ವಾಣಿ ನನ್ನ ಪಾಲಿಗಂತೂ ಸತ್ಯವಾಗಿದೆ.

– ಡಾ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

* * *

ದೂರದ ಊರುಗಳ ತರಬೇತಿ ಸಂಸ್ಥೆಗಳನ್ನು ನಂಬಿದರಷ್ಟೇ ನಾಗರಿಕ ಸೇವಾ ಪರೀಕ್ಷೆ ಪಾಸು ಮಾಡಬಹುದೆಂಬ ವಾದವನ್ನು ತಿರಸ್ಕರಿಸಿದೆ. ಪುಸ್ತಕವನ್ನೇ ನಂಬಿದೆ. ನನ್ನ ನಂಬಿಕೆಯಂತೆಯೇ ಪರೀಕ್ಷೆಗೆ ತಯಾರಾದೆ. ಸಂಪೂರ್ಣವಾಗಿ ಕನ್ನಡದಲ್ಲೇ ಪರೀಕ್ಷೆ ಬರೆದೆ. ಕೊನೆಗೂ ನಂಬಿಕೆ ಹುಸಿಯಾಗಲಿಲ್ಲ. ನಾನು ಚಿಕ್ಕಂದಿನಿಂದಲೂ ಸಾಹಿತ್ಯ ಓದಿಕೊಂಡು ಬೆಳೆದವನು. ಓದು ನನ್ನ ಬದುಕನ್ನು ರೂಪಿಸುತ್ತದೆ ಎಂಬ ನಂಬಿಕೆ ನನ್ನದು. ಪಿ.ಲಂಕೇಶರ ಸಾಹಿತ್ಯವನ್ನು ಹೆಚ್ಚು ಓದಿದ್ದೆ. ಪದವಿ ನಂತರ ನಿರಂತರವಾಗಿ ಓದಿನಲ್ಲಿ ತೊಡಗಿಸಿಕೊಂಡೆ. ಉಪನೋಂದಣಿ ಅಧಿಕಾರಿಯಾದರೂ ಓದು ಬಿಡಲಿಲ್ಲ. ೨೦೧೧ರ ಪರೀಕ್ಷೆಯಲ್ಲಿ ಕನ್ನಡ ಸಾಹಿತ್ಯ ಮತ್ತು ರಾಜ್ಯಶಾಸ್ತ್ರವನ್ನು ಐಚ್ಛಿಕ ವಿಷಯಗಳಾಗಿ ಆಯ್ಕೆ ಮಾಡಿಕೊಂಡಿದ್ದೆ. ನಾಗರಿಕ ಸೇವಾ ಪರೀಕ್ಷೆ ಪಾಸು ಮಾಡಲು ದೆಹಲಿಗೆ ಹೋಗಿ ದೊಡ್ಡ ತರಬೇತಿ ಸಂಸ್ಥೆಗಳಲ್ಲೇ ತಯಾರಿ ಮಾಡಬೇಕೆಂಬ ನಂಬಿಕೆ ಇದೆ. ಅದನ್ನು ಹುಸಿ ಮಾಡುವುದೇ ನನ್ನ ಮೊದಲ ಗುರಿಯಾಗಿತ್ತು. ಅದಕ್ಕಾಗಿಯೇ ಯಾವ ತರಬೇತಿ ಕೇಂದ್ರಕ್ಕೂ ಹೋಗಲಿಲ್ಲ. ಕುಳಿತು ಓದಿದೆ. ಐಚ್ಛಿಕ ವಿಷಯಗಳ ಪರೀಕ್ಷೆಯನ್ನು ಸಂಪೂರ್ಣವಾಗಿ ಕನ್ನಡದಲ್ಲೆ ಎದುರಿಸಿದೆ. ರಾಜ್ಯದ ಯಾವುದೋ ಮೂಲೆ ಕುಗ್ರಾಮದಲ್ಲಿ ಕುಳಿತು ಗುಡಿಸಲಿನಲ್ಲಿ ಓದಿದರೂ ಕನ್ನಡದಲ್ಲೇ ನಾಗರಿಕ ಸೇವಾ ಪರೀಕ್ಷೆ ಪಾಸು ಮಾಡಬಹುದು ಎಂಬ ನಂಬಿಕೆ ನಮ್ಮ ವಿದ್ಯಾರ್ಥಿಗಳಲ್ಲಿ ಮೂಡಬೇಕು ಎಂಬ ಕಾರಣವೂ ಕೂಡ ನಾನು ಅನುಸರಿಸಿದ ಮಾರ್ಗದ ಹಿಂದಿತ್ತು.

– ಎಸ್.ಎಮ್.ವಿಜಯಕುಮಾರ್

(ಕನ್ನಡದಲ್ಲಿ ಬರೆದು ೧೫೨ನೇ ರ್‍ಯಾಂಕ್ ಪಡೆದ ಐ.ಎ.ಎಸ್.ವಿದ್ಯಾರ್ಥಿ)

ಸಂಭವಿಸುತ್ತಿದೆ ದೇಶದ ಅಧೋಗತಿ ಹೇಗೆ ಸಾಧ್ಯ ಊರ್ಧ್ವಗತಿ?

– ಸುರೇಂದ್ರ ಕೌಲಗಿ

ಭಾರತ ದೇಶದಂಥ ಪ್ರಾಚೀನ ದೇಶದ ಅಧೋಗತಿ ಆಗುತ್ತಿದೆ ಎಂದು ಮೂರ್ಖ ಮಾತ್ರ ಹೇಳಬೇಕು. ವೇದ, ಉಪನಿಷತ್‌ಗಳು, ರಾಮಾಯಣ, ಮಹಾಭಾರತದಂಥ ಗ್ರಂಥರಚನೆಗಳು, ಮಹಾವೀರ, ಬುದ್ಧ, ಗುರುನಾನಕ್, ಗಾಂಧೀ, ವಿನೋಬಾ, ವಿವೇಕಾನಂದ ಮುಂತಾದ ಮಹನೀಯರು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದ ಭಾರತ ಅಧೋಗತಿಗೆ ಇಳಿಯುತ್ತಿದೆ ಎಂದು ಹೇಗೆ ತಾನೆ ಹೇಳಲು ಸಾಧ್ಯ. ಆದರೆ ಜಾಗತೀಕರಣದ ಬಿರುಗಾಳಿಗೆ ಸಿಕ್ಕು ನಲುಗುತ್ತಿರುವ ಭಾರತ ತನ್ನ ಪೂರ್ವ ಸಂಸ್ಕೃತಿಯಿಂದ ಬೇರ್ಪಟ್ಟು ಅಧೋಗತಿಗೆ ಇಳಿಯುತ್ತಿದೆ ಎಂದು ಅನಿಸುತ್ತಿದ್ದರೆ ಅದು ತಪ್ಪಲ್ಲ. ಜೀವನದ ಅವಶ್ಯಕ ಪದಾರ್ಥಗಳೆಲ್ಲದರ ಬೆಲೆ ಕಡಿವಾಣವಿಲ್ಲದೆ ಏರುತ್ತಿದೆ. ಜನಸಾಮಾನ್ಯರ ಜೀವನ ದಿನಗಳು ಉರುಳಿದಂತೆ ದುಸ್ಥರವಾಗುತ್ತಿದೆ. ಇಂದು ದೇಶದಲ್ಲಿ ಸ್ವಲ್ಪ ನೆಮ್ಮದಿಯಿಂದ ಇರುವಂಥವರು ಸರ್ಕಾರಿ ನೌಕರರು, ಕಾರ್ಪೊರೇಟ್ ಕಂಪನಿಗಳಲ್ಲಿ ಕೆಲಸ ಮಾಡುವಂಥವರು ಮತ್ತು ರಾಜಕಾರಣಿಗಳು. ಕೃಷಿಯನ್ನು ಅವಲಂಬಿಸಿದ ಜನರು ಮತ್ತು ಇತರ ಸ್ವತಂತ್ರ್ಯ ವೃತ್ತಿಗಳಲ್ಲಿ ತೊಡಗಿರುವಂಥ ಜನರು ಬದುಕುವುದೇ ಕಷ್ಟವಾಗುತ್ತಿದೆ. ರೈತರ ಆತ್ಮಹತ್ಯೆಗಳು ನಿಂತೇ ಇಲ್ಲ. ರೈತ ಒಬ್ಬ ಆತ್ಮಹತ್ಯೆ ಮಾಡಿಕೊಂಡು ಸತ್ತನೆಂಬ ಸುದ್ದಿ ರಸ್ತೆ ಅಪಘಾತದಲ್ಲಿ ನಾಯಿಯೊಂದು ಮರಣಕ್ಕೀಡಾದ ಸುದ್ದಿಯಷ್ಟೇ ಪ್ರಮುಖವಾಗಿದೆ. ಭ್ರಷ್ಟಾಚಾರ ವಿರುದ್ಧ ಏನೆಲ್ಲಾ ಹೋರಾಟ ಮಾಡಿದರೂ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲವೆಂದು ಅನಿಸುತ್ತಾ ಹೋಗುತ್ತಿದೆ. ಭ್ರಷ್ಟಾಚಾರದ ಮೂಲ ಎಲ್ಲಿದೆ ಎಂಬುದೇ ಯಾರಿಗೂ ಗೊತ್ತಾಗುತ್ತಿಲ್ಲ. ತಾನು ಭ್ರಷ್ಟಾಚಾರಿಯಲ್ಲ ಬೇರೊಬ್ಬನು ಭ್ರಷ್ಟಾಚಾರಿ ಎಂದು ಹೇಳುವ ಗಿರಿಗಿಟ್ಟಲೆಯಲ್ಲಿ ಪ್ರತಿಯೊಬ್ಬರೂ ಸಿಕ್ಕಿಹಾಕಿಕೊಂಡಿದ್ದಾರೆ. ೪೦ ವರ್ಷಗಳಾದರೂ ಲೋಕಪಾಲರನ್ನು ನಿಯುಕ್ತಿಮಾಡಲಾಗುತ್ತಿಲ್ಲ. ದೇಶದ ಪ್ರಧಾನ ಮಂತ್ರಿಯೂ, ರಾಷ್ಟ್ರಪತಿಯೂ ಭ್ರಷ್ಟಾಚಾರಕ್ಕೆ ಒಳಗಾಗಿದ್ದಾರೆ ಎಂಬ ಆಪಾದನೆಗಳು ರಾಜಾರೋಷವಾಗಿ ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಗುತ್ತಿದೆ. ರಕ್ಷಣಾಮಂತ್ರಿ ಸೇನಾಧಿಕಾರಿಗಳು ಕೂಡ ಬ್ರಷ್ಟಾಚಾರದಲ್ಲಿ ತೊಡಗಿರುವ ಸುದ್ದಿಗಳು ಪ್ರಕಟವಾಗುತ್ತಲೇ ಇರುತ್ತವೆ. ಅಧ್ಯಾಪಕರೇ ಪ್ರಶ್ನೆ ಪತ್ರಿಕೆಗಳನ್ನು ಬಹಿರಂಗಗೊಳಿಸುತ್ತಾ ಹಣ ಸಂಪಾದನೆಯ ದಂಧೆಯಲ್ಲಿ ತೊಡಗಿರುವ ಸುದ್ದಿಗಳಿಗೇನೂ ಕಡಿಮೆಯಿಲ್ಲ. ಕಾಡಿನ ಮಾಫಿಯಾ, ಮರಳು ಮಾಫಿಯಾ, ಗಣಿ ಮಾಫಿಯಾ, ಭೂ ಮಾಫಿಯಾ ಮುಂತಾದ ಮಾಫಿಯಾಗಳ ಪಟ್ಟಿ ಬೆಳೆಯುತ್ತಲೇ ಇರುತ್ತವೆ. ವೈದ್ಯರು ರೋಗಿಗಳನ್ನು ನಿರ್ಲಕ್ಷಿಸಿ ದಿನಗಟ್ಟಲೆ ಸಂಬಳಕ್ಕಾಗಿ ಮುಷ್ಕರ ಹೂಡುತ್ತಾರೆ. ಪೈಲೆಟ್‌ಗಳು

ಪ್ರಯಾಣಿಕರನ್ನು ನಿರ್ಲಕ್ಷಿಸಿ ದಿನಗಟ್ಟಲೆ ಸಂಬಳಕ್ಕಾಗಿ ಮುಷ್ಕರ ಹೂಡುತ್ತಾರೆ. ಅಧ್ಯಾಪಕರು ವಿದ್ಯಾರ್ಥಿಗಳ ಭವಿಷ್ಯವನ್ನು ತೂಗು ಉಯ್ಯಾಲೆಯಲ್ಲಿ ಇಟ್ಟು ಮುಷ್ಕರ ಹೂಡುತ್ತಾರೆ. ನ್ಯಾಯನೀಡಬೇಕಾದ ನ್ಯಾಯಾಧೀಶರೂ ಸಹ ಭ್ರಷ್ಟಾಚಾರದ ಕರಿನೆರಳಿನಿಂದ ದೂರವಾಗಿಲ್ಲ. ರಾಜಕಾರಣಿಗಳಿಗಂತೂ ಭ್ರಷ್ಟಾಚಾರ ಮಾಡುವುದಕ್ಕೆ ಲೈಸನ್ಸ್ ಇದೆ.

ನಮ್ಮ ದೇಶದಲ್ಲಿಯೇ ಸ್ವಂತ ಹೇರಳವಾದ ಪ್ರಕೃತಿ ಸಂಪತ್ತು ಮತ್ತು ಜನ ಸಂಪತ್ತಿದ್ದರೂ ವಿದೇಶಿ ಸಾಲದಿಂದ ಮುಕ್ತವಾಗಿರಲು ಸಾಧ್ಯವಾಗಿಲ್ಲ. ಅಮೇರಿಕಾದ ಡಾಲರ್ ಎದುರಿನಲ್ಲಿ ಭಾರತದ ರೂಪಾಯಿ ತನ್ನ ಅಸ್ತಿತ್ವ ಕಳೆದು ಕೊಳ್ಳುತ್ತಿದೆ. ಡಾಲರ್ ಒಂದಕ್ಕೆ ಭಾರತ ತನ್ನ ೫೪ ರುಪಾಯಿಗಳನ್ನು ತೆರಬೇಕಾಗಿದೆ. ಈ ಅನುಪಾತ ಇನ್ನೂ ಹೆಚ್ಚಾದಲ್ಲಿ ಆಶ್ಚರ್ಯವೇನಿಲ್ಲ. ಹಣಕ್ಕೂ ಮನುಷ್ಯನಿಗೂ ತುಂಬಾ ಬಿಗಿಯಾದ ಗಂಟು ಇರುವುದರಿಂದ ಹಣವನ್ನು ಮನುಷ್ಯರ ಎಣಿಕೆಯಲ್ಲಿ ಲೆಕ್ಕಹಾಕಿದರೆ ತಪ್ಪಾಗಲಾರದು. ಇಂದಿನ ಡಾಲರ್ ಮತ್ತು ರುಪಾಯಿಗಳ ಬೆಲೆಯ ಸಂದರ್ಭದಲ್ಲಿ ಹೇಳುವುದಾದರೆ ಒಬ್ಬ ಅಮೇರಿಕನ್ನನಿಗೆ ೫೪ ಜನ ಭಾರತೀಯರು ಸಮ! ಈ ಮಾತಿನಿಂದ ಭಾರತದ ಅಧೋಗತಿಯನ್ನು ಕಲ್ಪಿಸಿಕೊಳ್ಳಬಹುದಾಗಿದೆ. ನಮ್ಮ ದೇಶದ ಅರ್ಥಮಂತ್ರಿಯವರೇ ಹೇಳಿದಂತೆ ದೇಶದ ಪ್ರಸ್ತುತ ಆರ್ಥಿಕ ಪರಿಸ್ಥಿತಿ ಮತ್ತು ರುಪಾಯಿಯ ಅಪಮೌಲ್ಯ ಒಟ್ಟು ರಾಷ್ಟ್ರೀಯ ಉತ್ಪನ್ನದ ಮೇಲೆ ಶೇ.೪ರಷ್ಟು ಪರಿಣಾಮ ಬೀರಲಿದೆ. ಅಂದರೆ ದೇಶದ ಪ್ರಗತಿ ಬಹಳಷ್ಟು ಕುಂಠಿತವಾಗಲಿದೆ. ಸ್ವತಂತ್ರ ಭಾರತದ ಸಂಸತ್ತಿಗೆ ಅರವತ್ತು ವರ್ಷಗಳಾದವು. ಸ್ವಾತಂತ್ರ ಬಂದು ೬೪ ವರ್ಷಗಳಾದವು. ಇಷ್ಟೆಲ್ಲ ನಮ್ಮ ಪ್ರಜಾ ಪ್ರಭುತ್ವದ ಹೆಗ್ಗಳಿಕೆ ಎಂದು ಹೇಳುತ್ತಿರುವ ನಾವು, ದೇಶದ ಪ್ರಗತಿಯಾವುದು ಮತ್ತು ಅಧೋಗತಿ ಯಾವುದು ಎಂಬುದನ್ನು ತೀರ್ಮಾನಿಸಲು ಸಾಧ್ಯವಿಲ್ಲದಂಥ ಶೋಚನೀಯ ಸ್ಥಿತಿಗೆ ಬಂದು ಮುಟ್ಟಿದ್ದೇವೆ. ರಾಜ್ಯದ ಸುಪ್ರಸಿದ್ಧ ಪತ್ರಿಕಾಕರ್ತರು ಬರೆದಂತೆ ತಮ್ಮ ಸಂಬಳ-ಭತ್ಯೆ ಏರಿಕೆ ಮಸೂದೆ ಬಗ್ಗೆ ಚರ್ಚೆಯನ್ನೇ ನಡೆಸದೆ ಅದಕ್ಕೆ ಕ್ಷಣಾರ್ಧದಲ್ಲಿ ಅಂಗೀಕಾರ ನೀಡಲು ಒಂದಿಷ್ಟೂ ನಾಚಿಕೆ ಪಟ್ಟುಕೊಳ್ಳದ ಸಂಸದರು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಕ್ರಮಗಳಿಗೆ ಕಾನೂನಿನ ರೂಪ ಕೊಡಲು ಒಪ್ಪುತ್ತಿಲ್ಲ. ಸಂಸದರು ದೇಶದ ಹಿತವನ್ನೇ ಮರೆತಿದ್ದಾರೆ. ಸಂಸದರು ಮತ್ತು ಶಾಸಕರೇ ದೇಶವನ್ನು ಅಧೋಗತಿಗೆ ತಳ್ಳುತ್ತಿದ್ದಾರೆ ಎಂದರೆ ಸತ್ಯಕ್ಕೆ ದೂರವೆಂದು ಅನಿಸುವುದಿಲ್ಲ. ವಿಪರ್ಯಾಸವೇನೆಂದರೆ ದೇಶವನ್ನು ಅಧೋಗತಿಗೆ ತಳ್ಳುವುದಕ್ಕಾಗಿಯೇ ಅವರು ಪ್ರತಿತಿಂಗಳು ಮೂಲ ವೇತನ, ಕ್ಷೇತ್ರಭತ್ಯೆ ಮತ್ತು ಕಛೇರಿ ಭತ್ಯೆ ರೂಪದಲ್ಲಿ ೧.೪೦ ಲಕ್ಷ ಪಡೆಯುತ್ತಿದ್ದಾರೆ. ಇದರ ಜೊತೆಗೆ ಅಧಿವೇಶನ ನಡೆಯುವ ದಿನಗಳಲ್ಲಿ ದಿನಭತ್ಯೆಯಾಗಿ ಎರಡು ಸಾವಿರ ರುಪಾಯಿ ಪಡೆಯುತ್ತಾರೆ. ವರ್ಷದಲ್ಲಿ ೩೪ ಬಾರಿ ಉಚಿತ ವಿಮಾನ ಪ್ರಯಾಣ, ಪ್ರಥಮ ದರ್ಜೆ ರೈಲಿನಲ್ಲಿ ಲೆಕ್ಕವಿಲ್ಲದಷ್ಟು ಸಲ ಉಚಿತ ಪ್ರಯಾಣ, ದೆಹಲಿಯಲ್ಲಿ ಉಚಿತ ವಸತಿ, ಉಚಿತ ವಿದ್ಯುತ್, ನೀರು, ದೂರವಾಣಿ ಮತ್ತು ಇಂಟರ್‌ನೆಟ್ ಸೌಲಭ್ಯ ಪಡೆಯುತ್ತಾರೆ. ಒಬ್ಬ ಸಂಸದನ ಮಾಸಿಕ ಸಂಬಳ ಮತ್ತು ಭತ್ಯೆ ಸೌಲಭ್ಯಗಳ ಒಟ್ಟು ಖರ್ಚು ತಲಾ ಐದು ಲಕ್ಷ ರುಪಾಯಿಗಳಷ್ಟಾಗುತ್ತದೆ. ಆದರೆ ಇವರು ಪ್ರತಿನಿಧಿಸುವ ಓರ್ವ ಭಾರತೀಯನ ಇಂದಿನ ತಿಂಗಳ ಸರಾಸರಿ

ಆದಾಯ ಕೇವಲ ಮೂರು ಸಾವಿರ ರುಪಾಯಿಗಳಿಗಿಂತಲೂ ಕಡಿಮೆ. ಇಂಥದೇ ಸಂದರ್ಭದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ ೧೯೩೦ರಲ್ಲಿ ಸುಮಾರು ೮೨ ವರ್ಷಗಳ ಹಿಂದೆ, ಗಾಂಧೀಜಿ ಅಂದಿನ ವೈಸ್‌ರಾಯ್ ಲಾರ್ಡ್ ಇರ್ವಿನ್‌ಗೆ ಈ ರೀತಿ ಪತ್ರ ಬರೆದಿದ್ದರು. "ನಿಮ್ಮ ಸಂಬಳವನ್ನೇ ಗಮನಿಸಿ. ಅದು ತಿಂಗಳಿಗೆ ೨೧ಸಾವಿರ ರೂಗಳಷ್ಟು (೭ಸಾವಿರ ಪೌಂಡ್) ಇದೆ. ಆದರೊಂದಿಗೆ ಬಹಳಷ್ಟು ಸೌಲಭ್ಯಗಳು ಇವೆ. ನೀವು ಸರಿಸುಮಾರಾಗಿ ದಿನ ಒಂದಕ್ಕೆ ಏಳುನೂರು ರುಪಾಯಿ ಪಡೆಯುತ್ತಿದ್ದೀರಿ. ಆದರೆ ಭಾರತೀಯನ ಸರಾಸರಿ ಆದಾಯ ದಿನವೊಂದಕ್ಕೆ ಎರಡಾಣೆ ಇದೆ. ಹೀಗೆ ನೀವು ಭಾರತೀಯನ ಸರಾಸರಿ ಆದಾಯದ ಐದುನೂರು ಪಟ್ಟು ಹೆಚ್ಚು ಹಣ ಪಡೆಯುತ್ತಿದ್ದೀರಿ. ಬ್ರಿಟಿಷ್ ಪ್ರಧಾನ ಮಂತ್ರಿಯೂ ಆ ದೇಶದ ಸರಾಸರಿ ಆದಾಯದ ಕೇವಲ ೯೦ಪಟ್ಟು ಪಡೆಯುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಕುರಿತು ಆಲೋಚಿಸಬೇಕೆಂದು ಮಂಡಿಯೂರಿ ಕೇಳುತ್ತೇನೆ. ಈ ನಗ್ನ ಸತ್ಯವನ್ನು ನಿಮಗೆ ಮನವರಿಕೆ ಮಾಡಿ ಕೊಡುವುದಕ್ಕಾಗಿ ವ್ಯಕ್ತಿಗತ ಉದಾಹರಣೆ ಕೊಟ್ಟಿದ್ದೇನೆ. ನಿಮಗೆ ಇಷ್ಟು ಸಂಬಳ ಬೇಕಿಲ್ಲವೆಂದು ಗೊತ್ತು. ಬಹುಶಃ ನಿಮ್ಮ ಇಡೀ ಸಂಬಳ ದಾನ ಧರ್ಮಕ್ಕಾಗಿ ಹೋಗುತ್ತಿರಬಹುದು. ಆದರೆ ಇಂಥ ಪದ್ಧತಿಯನ್ನು ಉಂಟುಮಾಡುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹೋಗಲಾಡಿಸಬೇಕು. ವೈಸರಾಯರ ಸಂಬಳಕ್ಕೆ ಸಂಬಂಧಿಸಿದ ಈ ಸತ್ಯ ಇಡೀ ಆಡಳಿತಕ್ಕೂ ಸಾಮಾನ್ಯವಾಗಿ ಅನ್ವಯಿಸುತ್ತದೆ." ಗಾಂಧೀಜಿಯವರ ೮೨ ವರ್ಷಗಳ ಹಿಂದಿನ ಈ ಮಾತನ್ನು ಗಮನದಲ್ಲಿಟ್ಟುಕೊಂಡು ಇಂದಿನ ರಾಷ್ಟ್ರಪತಿ, ಸಂಸದರು ಪ್ರಧಾನಮಂತ್ರಿ ಮತ್ತು ಆಡಳಿತಾಧಿಕಾರಿಗಳ ವೇತನ ಹಾಗೂ ಆಡಳಿತ ವೆಚ್ಚವನ್ನು ಗಮನಿಸಿದರೆ ದೇಶ ನಿಜ ಅರ್ಥದಲ್ಲಿ ಅಧೋಗತಿ ಹೊಂದುತ್ತಿದೆ ಅನಿಸುತ್ತದೆ. ಆಧುನಿಕ ಭಾರತವನ್ನು ನಿರ್ಮಿಸಬೇಕಾದ ಶಿಕ್ಷಣ ಸಂಸ್ಥೆಗಳೇ ಹಣ ಸಂಪಾದನೆಯ ದಂಧೆಗೆ ಇಳಿದಿವೆ. ಇಂದಿನ ಒಂದೊಂದು ಶಿಕ್ಷಣ ಸಂಸ್ಥೆಯು ಗತಕಾಲದ ಅಶೋಕನ ಸಾಮ್ರಾಜ್ಯವನ್ನು ಮೀರಿಸುವಂತಿವೆ. ಶಿಕ್ಷಣಕ್ಕೂ ಗುರಿಯಿಲ್ಲ, ಶಿಕ್ಷಣ ಕೊಡುವವರಿಗೂ ಗುರಿಯಿಲ್ಲ. ಶಿಕ್ಷಣ ಪಡೆಯುವವರಿಗೂ ಗುರಿಯಿಲ್ಲ. ಗುರಿಯಿಲ್ಲದ ಶಿಕ್ಷಣದ ಪರಿಣಾಮ ಪ್ರಪಾತಕ್ಕೆ ಬೀಳುವುದೇ ಆಗಿದೆ. ಭಾರತೀಯ ಸಂಸ್ಕೃತಿಗಿಂತ ವಿಪರೀತ ರೀತಿಯಲ್ಲಿ ಭಿನ್ನವಾಗಿರುವ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಭಾರತ ಅಂಧಾನುಕರಣೆ ಮಾಡುತ್ತಿದೆ. ಪಾಶ್ಚಿಮಾತ್ಯ ದೇಶಗಳು ವಿಜ್ಞಾನ ಮತ್ತು ತಂತ್ರಜ್ಞಾನಗಳ ಸೆರೆಯಾಳಾಗಿವೆ. ಅವು ಭೂಮಿಯ ಸಮಸ್ತವನ್ನು ತಮ್ಮ ಕೈಯೊಳಗೆ ಇಟ್ಟುಕೊಳ್ಳಬೇಕೆಂಬ ಹವಣಿಕೆಯಲ್ಲಿವೆ. ಅಗತ್ಯವಿರಲಿ, ಇಲ್ಲದಿರಲಿ ಸಂಶೋಧನೆಗಳೇ ಅವುಗಳ ಮಂತ್ರಗಳಾಗಿವೆ. ಆ ದೇಶಗಳಿಂದಾಗಿಯೇ ಜಾಗತೀಕರಣ, ವಾಣಿಜ್ಯಕರಣ ಮತ್ತು ಉದಾರೀಕರಣದಂಥ ನೈಜ, ಸರಳ ಮತ್ತು ಮೌಲ್ಯಾಧಾರಿತ ಅರ್ಥಶಾಸ್ತ್ರಕ್ಕೆ ವಿರುದ್ಧವಾದ ಜೀವನಶೈಲಿ ರಚಿತವಾಗಿದೆ. ಹಿಂಸೆ ಮತ್ತು ಯುದ್ಧಗಳು ಸಾಮಾನ್ಯವಾಗಿ ಈ ಅನೇಕ ಕರಣಗಳ ಜೇಡರಬಲೆಯಲ್ಲಿ ಪಾಶ್ಚಿಮಾತ್ಯ ದೇಶಗಳು ಸಿಕ್ಕಿಕೊಂಡಿವೆ. ಹೊರಬರಲು ಅವುಗಳಿಗೂ ಗೊತ್ತಾಗುತ್ತಿಲ್ಲ. ಈಗಿರುವ ಸೂತ್ರವೆಂದರೆ ಹಿಂಸೆಯನ್ನು ಕೊನೆಗಾಣಿಸಲು ಹಿಂಸೆ ಮಾಡು, ಯುದ್ಧ ಕೊನೆಗಾಣಿಸಲು ಯುದ್ಧ ಮಾಡು. ಇಂದಿನ ಜಾಗತಿಕ ಸಮಸ್ಯೆಗಳಿಗೆ ಯಾರಿಂದಲೂ ಯಾವ ಪರಿಹಾರವೂ

ದೊರೆಯುತ್ತಿಲ್ಲ. ಪರ್ಯಾಯ ಕಂಡುಕೊಳ್ಳುವ ನಾಟಕ ನಡೆಯುತ್ತಿದೆ. ವ್ಯರ್ಥ ಕಸರತ್ತು ನಡೆಯುತ್ತಿದೆ. ಭೂಮಿಯ ಮೇಲಿನ ಸಮಸ್ಯೆಗಳಿಗೆ ಯಾವುದೇ ಪರಿಹಾರ ಪಡೆಯಲು ವಿಫಲವಾಗಿರುವ ದೇಶಗಳು ಆಕಾಶದತ್ತ ತಮ್ಮ ಗಮನ ಹರಿಸಿವೆ. ಅಲ್ಲಿರುವ ವಿವಿಧ ಗ್ರಹಗಳತ್ತ ಯಾನ ಮಾಡುವುದು, ಚಂದ್ರನಲ್ಲಿರುವ ಖನಿಜ ಎತ್ತುವುದು, ನಿವಾಸವನ್ನು ಕಟ್ಟಲೆತ್ನಿಸುವುದು ಮುಂತಾದ ಸಾಹಸಗಳಿಗೆ ಕೈ ಹಾಕಿವೆ. ಇಂಥವು ಸದ್ಯಕ್ಕಂತೂ ಬೇಕಿಲ್ಲ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೋಸ್ಕರ ಇವುಗಳನ್ನು ಮಾಡುವಂತೆ ಇವೆಲ್ಲವನ್ನೂ ಮಾಡುತ್ತಿವೆ. ಯಾವ ಶೋಧನೆ ಯಾವ ಪ್ರಯತ್ನ ಎಲ್ಲಿಯವರೆಗೆ ಎಂಬುದೇ ಗೊತ್ತಿಲ್ಲ. ಕೇವಲ ಮಾಡುತ್ತಾ ಹೋಗುವುದೊಂದೇ ಉದ್ದೇಶ್ಯವಾಗಿದೆ. ಇದರ ಪರಿಣಾಮವಾಗಿ ಮನುಷ್ಯ ಅಪಾಯದ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತಿದ್ದಾನೆ. ಇದಕ್ಕೆ ಉದಾಹರಣೆ ಎಗ್ಗಿಲ್ಲದ ಅಣುಸ್ಥಾವರಗಳ ಸ್ಥಾಪನೆ.

ಭೌತಿಕವಾಗಿ ದೇಶದ ಅಧೋಗತಿಯಾಗುತ್ತಿರುವುದಂತೂ ನಿಜವೇ, ಆದರೆ ಇದಕ್ಕಿಂತ ದೊಡ್ಡ ಅಧೋಗತಿ ಎಂದರೆ ವೈಚಾರಿಕತೆಯ ದಿವಾಳಿತನ. ಆದಿ ಮಾನವ ತನ್ನ ವಿಚಾರಶಕ್ತಿಯಿಂದ ಸಮಾಜವನ್ನು ರಚಿಸಿದ. ಸಮಾಜ ನಾಗರೀಕವಾಗುತ್ತಾ ಹೋಯಿತು. ಆದರೆ ನಾಗರೀಕನಾಗಿರುವ ವ್ಯಕ್ತಿಯಲ್ಲಿ ವಿಚಾರದ ದಿವಾಳಿತನವೂ ಪ್ರಾರಂಭವಾಯಿತು. ಆಯಾ ಸಮಯಕ್ಕೆ ಯಾವ ವಿಚಾರ ಬೇಕೋ ಯಾವ ಸಿದ್ಧಾಂತ ಬೇಕೋ ಅದನ್ನು ತನ್ನದಾಗಿರಿಸಿಕೊಳ್ಳಲಾರಂಭಿಸಿದ. ಕೈಗಾರಿಕಾ ಕ್ರಾಂತಿ ಶುರುವಾದ ಮೇಲೆ ಯಂತ್ರಗಳಿಗೆ ಪ್ರಾಮುಖ್ಯತೆ ಕೊಡಲಾರಂಭಿಸಿದ. ಯಂತ್ರಗಳ ಪ್ರಾಮುಖ್ಯತೆ ಎಷ್ಟೊಂದು ಬೆಳೆಯಲಾರಂಭಿಸಿತೆಂದರೆ ಇಡೀ ಸಮಾಜ ಜೀವನ ಯಂತ್ರಗಳನ್ನು ಅವಲಂಬಿಸಿತು. ಯಂತ್ರಗಳು ತಯಾರು ಮಾಡಿದ ಯಂತ್ರಗಳನ್ನು ಸರಿಪಡಿಸಲು ಯಂತ್ರಗಳನ್ನೇ ಕಂಡುಹಿಡಿಯಲಾರಂಭಿಸಿದ. ರೋಬಟ್‌ಗಳ ಆಗಮನವಾಯಿತು. ಅಷ್ಟರ ಮಟ್ಟಿಗೆ ಮನುಷ್ಯನ ಬುದ್ಧಿಶಕ್ತಿಯ ಪಾತ್ರ ಕಡಿಮೆಯಾಯಿತು. ಕಂಪ್ಯೂಟರ್ ಬಂದವು, ಮೊಬೈಲ್ ಬಂದವು. ಇವುಗಳಿಂದಾಗಿ ಮನುಷ್ಯನ ಬುದ್ಧಿಶಕ್ತಿಯ ಉಪಯೋಗ ಕಡಿಮೆಯಾಗಲಾರಂಭಿಸಿತು. ಅದರೊಂದಿಗೆ ವಿಚಾರಶಕ್ತಿಯೂ ಸಹ. ಕೈಗಾರಿಕರಣದಿಂದ ಸಾಮ್ರಾಜ್ಯಕರಣವೂ ಪ್ರಾರಂಭವಾಯಿತು. ವಸಹಾತುಶಾಹಿ ಬಂತು. ಬಂಡವಾಳಶಾಹಿ ನೆಲೆನಿಂತು ಈಗ ಬಂಡವಾಳಶಾಹಿ ಸಮಾಜ ಪದ್ಧತಿಯ ಪ್ರಯತ್ನ ನಡೆಯುತ್ತಿದೆ. ಬಂಡವಾಳಶಾಹಿ ಪದ್ಧತಿಯೊಂದಿಗೆ ಬರುವ ಎಲ್ಲ ಸಾಮಾಜಿಕ ಸಮಸ್ಯೆಗಳು ಬಂದಾಗಿವೆ. ಬಂಡವಾಳದಿಂದ ಹೊರಗೆ ಬರಲು ಆಗುತ್ತಿಲ್ಲ. ಎಲ್ಲೆಲ್ಲಿಯೂ ಲಕ್ಷ್ಮಿ ಮಿತ್ತಲ್‌ಗಳು ಮರಿ ಲಕ್ಷ್ಮಿ ಮಿತ್ತಲ್‌ಗಳು ಹುಟ್ಟಿಕೊಳ್ಳುತ್ತಿದ್ದಾರೆ. ಎಲ್ಲರಿಗೂ ಇದರಲ್ಲಿ ಆನಂದವಿದೆ. ಬಂಡವಾಳದ ತದ್ವಿರುದ್ಧವಾಗಿ ನಕ್ಸಲ್‌ವಾದ, ಮಾವೋವಾದ ಹುಟ್ಟಿಕೊಂಡಿವೆ. ಅವು ಹಿಂಸೆಯಲ್ಲಿ ನಂಬಿಕೆ ಇಟ್ಟುಕೊಂಡಿರುವುದರಿಂದ ಅವುಗಳನ್ನು ಅನುಸರಿಸುತ್ತಿರುವವರನ್ನು ಹೇಡಿಗಳೆಂದೇ ಕರೆಯಬೇಕಾಗುತ್ತದೆ. ಸಮಾಜದ ಮಧ್ಯದಲ್ಲಿ ನಿಂತು ಸಮಾಜವನ್ನು ಶಾಂತಿಯುತವಾಗಿ ಬದಲಾಯಿಸುವ ಎದೆಗಾರಿಕೆ ಅವುಗಳಲ್ಲಿಲ್ಲ. ಆದ್ದರಿಂದ ಮಾವೋವಾದ ನಕ್ಸಲ್‌ವಾದ ನಿರುಪಯುಕ್ತ. ಇನ್ನು ಸರ್ಕಾರವಾದ. ಸರ್ಕಾರವಾದವೆಂದರೆ ಸಮಾಜಕ್ಕೆ ಅಗತ್ಯವಾಗಿರುವ ಎಲ್ಲವನ್ನೂ ಸರ್ಕಾರವೇ ಮಾಡಬೇಕು ಎಂದು ಜನರು ಬಯಸುತ್ತಾರೆ. ಅಧಿಕಾರಕ್ಕೆ ಬಂದ ಸರ್ಕಾರ

ಕೂಡ ಎಲ್ಲವನ್ನೂ ತಾನೇ ಮಾಡಬೇಕೆಂದು ಹೊರಡುವುದು ತತ್ಪರಿಣಾಮವಾಗಿ 'ದೇವರು ಎಲ್ಲೆಡೆಯೂ ಇದ್ದಾನೆ ಎಂಬ ಮಾತಿಗೆ ಬದಲಾಗಿ ಸರ್ಕಾರವು ಎಲ್ಲೆಡೆಯಲ್ಲಿದೆ' ಎಂಬ ಮಂತ್ರ ಜಪಿಸುವುದಾಗಿದೆ. ಪ್ರಜಾಪ್ರಭುತ್ವ ಎಂದು ಹೇಳುತ್ತಲೇ ಪ್ರಜೆಗಳೆಲ್ಲರೂ ಸರ್ಕಾರದ ದಾಸರಾಗುವುದು. ಎಲ್ಲವೂ ಸರ್ಕಾರಮಯವಾದಾಗ ವೈಚಾರಿಕತೆಯ ದಿವಾಳಿತನ ತಾನೇ ತಾನಾಗಿ ತಾಂಡವವಾಡುತ್ತದೆ. ಪ್ರಜಾಪ್ರಭುತ್ವಗಳಲ್ಲಿ ವಾಣಿಜ್ಯಕ್ಕಿಂತ ಹೆಚ್ಚು ದೊಡ್ಡದಾದದ್ದು ಮತ್ತು ಹೆಚ್ಚು ತೇಜೋಮಯವಾದದ್ದು ಬೇರೊಂದಿಲ್ಲ. ಅದು ಸಾರ್ವಜನಿಕರ ಗಮನ ಸೆಳೆಯುತ್ತದೆ. ಹಾಗೂ ಜನಕೋಟಿಯ ಕಲ್ಪನಾವಿಲಾಸವಾಗುತ್ತದೆ; ಎಲ್ಲ ಶಕ್ತಿದಾಯಕ ಆಶೋತ್ತರಗಳು ಅದರತ್ತ ಧಾವಿಸುತ್ತವೆ. ಇದಕ್ಕೆಲ್ಲ ಸೂತ್ರಧಾರಿಯಾಗಿ ಸರ್ಕಾರವಿರುತ್ತದೆ. ಸರ್ಕಾರವಾದದ ದುರಂತಗಳಿಗೆ ಕೊನೆಯಿಲ್ಲ.

ಸಾಮ್ಯವಾದ ಸೋತಿತು, ಸಮಾಜವಾದ ಸೋತಿತು, ಬಂಡವಾಳವಾದದ ತಾಂಡವನೃತ್ಯ ನಡೆಯುತ್ತಿದೆ. ಅಧೋಗತಿಗೆ ಕಾರಣವಾಗುತ್ತಿರುವ ಈ ಎಲ್ಲ ಸಂಗತಿಗಳನ್ನು ತಪ್ಪಿಸಿ ಭಾರತದೇಶವನ್ನು ಊರ್ಧ್ವಗತಿಗೆ ಹೇಗೆ ತೆಗೆದುಕೊಂಡು ಹೋಗುವುದು ಎಂಬುದೇ ನಮ್ಮ ಮುಂದಿರುವ ಸವಾಲು. ಈ ಸವಾಲು ಎಲ್ಲರದು. ಆದ್ದರಿಂದ ಈ ಸವಾಲನ್ನು ಏಕಪಕ್ಷೀಯವಾಗಿ ಬಗೆಹರಿಸಲು ಸಾಧ್ಯವಿಲ್ಲ. ಸಮೂಹಿಕ ಸವಾಲ್ ಇದಾಗಿರುವುದರಿಂದ ಸಾಮೂಹಿಕ ಪ್ರಯತ್ನವೇ ಇದಕ್ಕೆ ದಾರಿ. "ಯಾವ ವಸ್ತುವನ್ನು ಜನಕೋಟಿ ಹೊಂದಲು ಸಾಧ್ಯವಿಲ್ಲವೋ ಅದನ್ನು ಹೊಂದಲು ಕಡಾಖಂಡಿತವಾಗಿ ನಿರಾಕರಿಸಬೇಕು. ನಿರಾಕರಿಸುವ ಈ ಸಾಮರ್ಥ್ಯ ನಮಗೆ ತಾನಾಗಿಯೇ ಆಕಾಶದಿಂದ ಉದುರುವುದಿಲ್ಲ. ಜನಕೋಟಿಗೆಲ್ಲ ನಿರಾಕರಿಸಲ್ಪಟ್ಟ ವಸ್ತುಗಳನ್ನು ಮತ್ತು ಸೌಕರ್ಯಗಳನ್ನು ತಾನು ಹೊಂದುವುದಿಲ್ಲವೆಂಬ ಮಾನಸಿಕ ಸಿದ್ಧತೆಯನ್ನು ಬೆಳೆಸಿಕೊಳ್ಳಬೇಕೆಂಬುದು ಮೊದಲನೆಯ ಹೆಜ್ಜೆ. ಎರಡನೆಯ ತಕ್ಷಣದ ಕ್ರಮ ನಮ್ಮ ನಮ್ಮ ಬದುಕನ್ನು ಆ ಮನೋಭಾವಕ್ಕೆ ತಕ್ಕಂತೆ ಆದಷ್ಟೂ ಬೇಗ ಪನರ್‌ರಚಿಸಿಕೊಳ್ಳುವುದು." ಇದು ಗಾಂಧೀ ಹೇಳಿದ ದಾರಿ. ಇದೇ ಪ್ರಕಾರದ ವಿಚಾರವನ್ನು ವೇದ, ಉಪನಿಷತ್ತು, ಕುರಾನ್, ಬೈಬಲ್, ಗೀತೆ ಮುಂತಾದವುಗಳೆಲ್ಲ ಹೇಳಿವೆ. ಆಗಿಹೋದ ಎಲ್ಲ ಮಹಾಪುರುಷರು ಹೇಳಿದ್ದಾರೆ. ಊರ್ಧ್ವಗತಿಗೆ ಇನ್ನಾವ ಹೊಸ ಮಾರ್ಗ ಶೋಧನೆ ಸಾಧ್ಯ?

* * *

ಲಘು ಪ್ರಬಂಧ

ಮಕ್ಕಳ ತುಂಟಾಟದ ಸಂತೋಷ!

- ಎಂ.ಸಂತೋಷ ಶಾಸ್ತ್ರಿ

ದೇವರು, ದೈವ, ಭೂತ ಇತ್ಯಾದಿಗಳ ಮೇಲೆ ನಂಬಿಕೆ ಇಟ್ಟವನಲ್ಲ ನಾನು. ಆದರೆ ಭೂತಗಳ ಅಸ್ತಿತ್ವದ ಬಗ್ಗೆ ನನಗೆ ನಂಬಿಕೆ ಬಂದದ್ದು, ನಾನು ತಂದೆಯಾದಾಗಲೇ!

ತುಂಟ ಮಕ್ಕಳ ಚೇಷ್ಟೆಗಳು ಯಾವ ಭೂತಚೇಷ್ಟೆಗೂ ಕಡಿಮೆಯಿರಲ್ಲ. ಆ ಚೇಷ್ಟೆಗಳಿಂದ ಎಷ್ಟೇ ಕಷ್ಟವಾದರೂ, ಭೂತಗಳ ಮೇಲೆ ಕ್ರಮ ಕೈಗೊಳ್ಳಲು ಹೇಗೆ ಸಾಧ್ಯವಿಲ್ಲವೋ, ಅಂತೆಯೇ, ಈ ಸಂದರ್ಭಗಳಲ್ಲೂ ನಕ್ಕು ಸುಮ್ಮನಾಗುವುದಷ್ಟೇ ನಮಗಿರುವ ಏಕೈಕ ಮಾರ್ಗ. ಎಷ್ಟೇ ಅಂದರೂ ಚಿಕ್ಕ ಮಕ್ಕಳಲ್ವೆ? ನಮ್ಮೀ 'ದೌರ್ಬಲ್ಯ'ವೇ ಅವರ ಪ್ರಮುಖ ಶಕ್ತಿ! ದೊಡ್ಡ ಮಕ್ಕಳಾದರೆ, ಎರಡು ತಟ್ಟಿ ನಮ್ಮ ಸಿಟ್ಟನ್ನು ತಕ್ಷಣ ತೀರಿಸಿಕೊಂಡು ಬಿಡುತ್ತೇವೆ. ನಮ್ಮಪ್ಪನಿಂದ ಪಡೆದ ಪೆಟ್ಟುಗಳನ್ನು ಪಿತ್ರಾರ್ಜಿತ ಆಸ್ತಿಯಂತೆ ಇವರಿಗೆ ವರ್ಗಾಯಿಸುತ್ತೇವೆ. ಆದರೆ ಚಿಕ್ಕ ಮಕ್ಕಳೆದುರು ಕೋಪಮಾಡಿಕೊಳ್ಳುವ ಶಕ್ತಿ ಯಾರಿಗೂ ಇಲ್ಲ. ಕೋಪಕ್ಕೆ ಆಸ್ಪದವೇ ಬಾರದಂತೆ ನಮಗೆ ನೋವನ್ನುಂಟುಮಾಡುವ ಕಿನ್ನರರಿವರು. ಅದಕ್ಕೇ ನಾನು ಹೇಳಿದ್ದು, ಇವರು 'ಒಳ್ಳೆಯ ಮರಿಪಿಶಾಚಿ'ಗಳು ಅಂತ – ಆಂಗ್ಲಭಾಷೆಯಲ್ಲಿ 'ಕಾಸ್ಪರ್' ಅಂತಾರಲ್ಲ ಹಾಗೆ. ಗಂಧರ್ವಲೋಕದಲ್ಲೋ ಮತ್ತೆಲ್ಲೋ ಹಾಯಾಗಿದ್ದ ಪುಣ್ಯಾತ್ಮರನ್ನು, ನಮ್ಮಂತೆಯೇ ಒದ್ದಾಡಲು ಈ ಭೂಮಿಗೆ ಕರೆದುತಂದ ತಪ್ಪಿಗೆ ಈ ಚಿಣ್ಣರು ಕೊಡುವ 'ಶಿಕ್ಷೆ'ಗಳಿವು ಈ ತುಂಟಾಟದ ನೋವು. ಎಂಥ ವಿಶ್ವಾಮಿತ್ರರೂ ಈ ಮಕ್ಕಳ ಚೇಷ್ಟೆಗಳಿಗೆ ಕ್ಷಣಿಕ ಕೋಪವನ್ನಾದರೂ ಮಾಡಿಕೊಳ್ಳಲಾರರು. ಹಾಗೆ ಮಾಡಿಕೊಂಡದ್ದೇ ಆದಲ್ಲಿ ಕ್ಷಮಿಸಿ, ನಾನಿಲ್ಲಿ ಮನುಷ್ಯರ ಬಗ್ಗೆ ಅಷ್ಟೇ ಮಾತನಾಡುತ್ತಿದ್ದೇನೆ – ರಾಕ್ಷಸರ ಬಗ್ಗೆ ಅಲ್ಲ!

ಮದುವೆಯಾದ ಮೊದಲ ದಿನದಿಂದ (ಅಥವಾ ಅದಕ್ಕೂ ಪೂರ್ವದಿಂದಲೇ?!) ನನ್ನಾಕೆಯ ಮನಸ್ಸನ್ನು ಅರಿಯಲು ವ್ಯರ್ಥ ಪ್ರಯತ್ನಪಟ್ಟಿದ್ದೆ. ವಿವಾಹದ ದಶಮಾನೋತ್ಸವದ ನಂತರ ಅದಕ್ಕೆ ಪೂರ್ಣವಿರಾಮ ಹಾಕಿದೆ. ಆದರೆ, ಮಕ್ಕಳ ಮನಸ್ಸು... ಈ ಚಾಂಚಲ್ಯಕ್ಕೂ ಮೀರಿದ್ದು. ಅವರ ಮನಸ್ಸು ನಡೆಯುವ ಹಾದಿಯನ್ನು ಕರಾರುವಾಕ್ಕಾಗಿ ಕಂಡುಹಿಡಿಯುವುದು, ಮಾನವನ ಸಾವಿಗೆ ಔಷಧ ಕಂಡುಹಿಡಿಯೋದು ಎರಡೂ ಒಂದೇ, ಎರಡನೆಯದು ಸಾಧ್ಯವಾದರೂ ಆದೀತು! ನನ್ನ ಮಗಳು ಇವತ್ತು ದೋಸೆಯನ್ನು ಎಷ್ಟು ಇಷ್ಟಪಟ್ಟು ಪಟ್ಟಾಗಿ ಕೂತು ತಿಂದಳೆಂದರೆ, ನನಗೆ ಮಹದಾನಂದವಾಯ್ತು. ನನ್ನಾಕೆಗೆ ಹೇಳಿದೆ: "ಮಕ್ಕಳಿಗೆ ಊಟ ಮಾಡಿಸೋದು ಕಷ್ಟ ಅನ್ನೋದು ಸುಳ್ಳು. ಈಗ ನೋಡು, ಅವರಿಗೆ ಇಷ್ಟವಾದದ್ದನ್ನು ಕೊಟ್ಟರೆ, ತಿಂದೇ

ತಿನ್ತಾರೆ." ಗುರುತ್ವಾಕರ್ಷಣೆಯ ನಿಯಮ ಕಂಡುಹಿಡಿದ ನ್ಯೂಟನ್ನನಂತೆ, ಒಂದು ಆರ್ಷೇಯವನ್ನೊಗೆದ ನನಗೆ ನನ್ನಾಕೆಯ ವ್ಯಂಗ್ಯಭರಿತ ನಗೆಯ ಹಿಂದಿನ ಮರ್ಮ ಆವತ್ತು ತಿಳಿಯಲಿಲ್ಲ. ಅದು ತಿಳಿದದ್ದು ಮರುದಿನ – ನನ್ನ ಮಗಳು ದೋಸೆ ನೋಡಿಯೇ ವಾಂತಿ ಮಾಡಿಕೊಂಡಾಗ!

ಹೀಗೆ ಒಮ್ಮೆ ಸ್ನೇಹಿತನ ಮನೆಗೆ ಹೋದಾಗ, ಅವನ ಮಗ ನನ್ನನ್ನು ತುಂಬಾ ಹಚ್ಚಿಕೊಂಡುಬಿಟ್ಟ, ನಾನು ಮನೆಗೆ ವಾಪಸಾಗಲು ಬಿಡದೇ ರಚ್ಚೆ ಹಿಡಿದು ಅಳಲಾರಂಭಿಸಿದ. ನಾನು, ಬೇಜಾರಿನಲ್ಲಿಯೇ ಮನೆಗೆ ಬಂದು, ಆ ಮಗುವಿನ ಖುಷಿಗಾದರೂ ಮರುದಿನ ಹೋಗಬೇಕೆಂದುಕೊಂಡು, ಮರುದಿನ ಸ್ನೇಹಿತನ ಮನೆಗೆ ಬಿಜಯಂಗೈದೆ – ಆ ಪುಟಾಣಿ ಹಾರಿ ಬಂದು ನನ್ನನ್ನು ಅಪ್ಪುತ್ತಾನೆಂದು, ಆ ಪುಟಾಣಿ ನನ್ನನ್ನು ನೋಡಿ ಒಂದು ಸಣ್ಣ ನಗೆ ಬೀರಿ ಸ್ನೇಹಿತರೊಂದಿಗೆ ಆಟವಾಡಲು ಹೋದ! ನನ್ನ ತಪ್ಪುಗ್ರಹಿಕೆಯ ಬಗ್ಗೆ ನನಗೆ ಅಗಾಧ ಕೋಪ ಬಂತು.

ಅದಕ್ಕೆ ಕವಿಯೊಬ್ಬ ಹೇಳಿದ್ದು – 'ಜನಾರ್ಧನ ಚಿತ್ತಃ ಕಥಾ ಕೀದೃಶೀ'. ಮಕ್ಕಳೂ ದೇವರಲ್ವೆ? ದೇವರ ಯೋಚನಾಲಹರಿಯ ಜಾಡನ್ನು ನರಪಾಮರರು ಹುಡುಕಿಯಾರೇ? ನಳ ಒಮ್ಮೆ ಹೇಳಿದ್ದು, ಈ ಸಂದರ್ಭದಲ್ಲಿ ಸೂಕ್ತ – 'ಹರಿಹರ ವಿರಂಚಾದ್ಯರಿಗೇ ಸಾಧ್ಯವಿಲ್ಲೊಡೆ ಬಡನರನಾದ ನನ್ನ ಪಾಡೇನು?'

ಸ್ನೇಹಿತರ ಮನೆಗೆ ಹೋಗ್ತೇವೆ. ನಮ್ಮ ಮಕ್ಕಳು ಅವರ ಮಕ್ಕಳ ಜೊತೆ ಆಡಲಿ ಅಂತ ನಮ್ಮ ಇಚ್ಛೆ ಆಗಿರುತ್ತೆ. ಆದರೆ ನಮ್ಮ ಇಂಗಿತ ಹೇಗೋ ಮಕ್ಕಳಿಗೆ ತಿಳಿದುಬಿಡುತ್ತೆ. ವಯಸ್ಸಿಗೆ ಮೀರಿದ ಶ್ರೀಮದ್ಗಾಂಭೀರ್ಯದಲ್ಲಿ ಇರ್ತಾರೆ – ನಮ್ಮ ಮನಮೋಹನ ಸಿಂಗ್‌ಜೀ ಕೂಡ ನಾಚುವಷ್ಟು, ಗಾಂಭೀರ್ಯವೇ ಮೂರ್ತಿವೆತ್ತಂತಿರುವ ಅವರನ್ನು ನೋಡಿ, ಆತಿಥೇಯರು 'ನಿಮ್ಮ ಮಕ್ಕಳು ಸಂಕೋಚ ಸ್ವಾಭಾವದವು ಅನ್ಸುತ್ತೆ' ಅಂತಾರೆ – ಮನಸ್ಸಿನಲ್ಲಿ 'ಮಖೇಡಿಗಳು' ಅಂತ ಬಯ್ಕೊಂಡು. ಹಾಗಿದ್ದಿದ್ರೆ ಪರ್ವಾಗಿಲ್ಲ, ಆದ್ರೆ ನಿಜವಾದ ಪರಿಸ್ಥಿತಿ ಅದರ ತದ್ವಿರುದ್ಧ ಅಂತ ನಮಗೆ ತಿಳಿದಿರುವುದರಿಂದಲೇ ನಮಗೆ ಕಸಿವಿಸಿ. ಅದೇ ನಾವು ಮಕ್ಕಳೊಂದಿಗರಾಗಿ ನಮ್ಮ ಬಾಸ್ ಮನೆಗೆ ಚಿತ್ತೈಸುತ್ತೇವೆ. ಅಲ್ಲಿ ಮಕ್ಕಳು ಗಂಭೀರವಾಗಿರಬೇಕೆಂಬುದು ನಮ್ಮ ಅಂಬೋಣ. ಆದರೆ ಈ ದೈವಾಂಶ ಸಂಭೂತರಿಗೆ ನಮ್ಮ ಮನದಿಂಗಿತ ತಿಳಿಯದೆ? ಅಲ್ಲಿ ಎಂಥ ಹೆಂಡ ಕುಡಿದ ಕಪಿಯೂ ಮಾಡಲಾರದಷ್ಟು ಕಪಿಚೇಷ್ಟೆಗಳನ್ನು ಮಾಡುತ್ತಾರೆ. ಅವರ ಮನೆಯ ಆಲಂಕಾರಿಕ ಹಾಗೂ ಪಾರಂಪಾರಿಕ ಗಾಜಿನ ವಸ್ತುಗಳೆಲ್ಲವನ್ನೂ ಚಪ್ಪನ್ ಚೂರು ಮಾಡಿ ಗತವೈಭವಕ್ಕೆ ಸೇರಿಸುತ್ತಿರುವಾಗ, ನಮ್ಮ ಮನಸ್ಸಿಗೆ ಆ ಬಾಸು ನಮ್ಮನ್ನು ತಮ್ಮ ಮನೆಗೆ ಪುನಃ ಆಹ್ವಾನಿಸದಿದ್ದರೂ ಅಡ್ಡಿಯಿಲ್ಲ, ಕೈಲಿರುವ ಕೆಲಸಕ್ಕೆ ಮಾತ್ರ ದೋಖಾ ಅಗದಿದ್ರೆ ಸಾಕಪ್ಪಾ ಎನಿಸುವುದು ಸಹಜ.

ನನ್ನ ಮಗಳಿಗೆ ಮುಂಚಿನಿಂದಲೂ ಸಿಹಿ ಪದಾರ್ಥಗಳು ಅಂದರೆ ಅಷ್ಟಕಷ್ಟೆ. ಮನೆಯಲ್ಲಿ ಜಾಮೂನು ಮಾಡಿದರೆ ನಾನು, ನ್ನ ಹೆಂಡ್ತಿ ಇಬ್ಬರೇ ಗಿರಾಕಿಗಳು. ಹೀಗೆ ನನ್ನಾಕೆ ಒಮ್ಮೆ ನಮ್ಮ ಬೀದಿಯ ತುದಿಯಲ್ಲಿದ್ದ ಪರಿಚಿತರ ಮನೆಗೆ ಮಗಳೊಂದಿಗೆ

ಹೋಗಿದ್ದಳು. ಅಂದು ಅದಾವುದೋ ಹಬ್ಬವಾಗಿದ್ದರಿಂದ ಅವರ ಮನೆಯಲ್ಲಿ ಜಾಮೂನು ಮಾಡಿದ್ದರಂತೆ. ಸಹಜವಾಗಿ ಅವರು "ಪುಟ್ಟೀ ಜಾಮೂನು ಕೊಡ್ಲಾಪ್ಪಾ" ಅಂತ ಕೇಳಿದ್ದಕ್ಕೆ ನಮ್ಮಕೆ "ಇಲ್ಲಾರಿ ಅದ್ಯಾಕೋ ನಂ ಪುಟ್ಟಿಗೆ ಜಾಮೂನು ಅಂದ್ರೇ ಸೇರಲ್ಲಾರೀ" ಎಂದಳಂತೆ. ಆದರೂ ಇರ್ಲಿ ಅಂತ ಅವರು ಒಂದು ಜಾಮೂನು ಕೊಟ್ರೆ ಈ ಪುಟಾಣಿ ಎಂದೂ ಇಲ್ಲದಂತೆ ಒಂದೇ ಗುಟುಕಿನಲ್ಲಿ ಅದನ್ನು ನುಂಗಿ, ದೈನ್ಯವಾಗಿ "ಆಂಟಿ ಇನ್ನೊಂದು ಕೊಡಿ ಪ್ಲೀಸ್!" ಎಂದಳಂತೆ. ನನ್ನವಳಿಗೆ ಏನನ್ನಿಸಿರಬೇಡ! ಚಾರ್ಲ್ಸ್ ಡಿಕನ್ಸ್ 'ಆಲಿವರ್ ಟ್ವಿಸ್ಟ್'ನಲ್ಲಿ ಬಂದಂತೆ, ಆಲಿವರ್ ಮತ್ತಷ್ಟು ಕೇಳಿದ ಸ್ಟೈಲಿನಲ್ಲಿ ದೈನ್ಯವಾಗಿಯೇ ಕೇಳಿ ಕೇಳಿ ೭-೮ ಜಾಮೂನು ಮುಗಿಸಿದಳು, ನನ್ನ ಮಗಳು! ನನ್ನಾಕೆಗೆ ಆ ಕ್ಷಣದಲ್ಲಿ ಭೂಮಿ ಬಾಯ್ತೆರೆಯ ಬಾರದೇ ಎನಿಸಿದ್ದು ಸುಳ್ಳಲ್ಲ. (ಆದರೆ, ನಾನು ಅಷ್ಟು ಅದೃಷ್ಟವಂತ ಅಲ್ಲ ಬಿಡಿ!) ಮನೆಯಲ್ಲಿ ಉಪ್ಪಿಟ್ಟು ಎಂದರೆ ಮೂಗುಮುರಿಯುವ ಮಕ್ಕಳು, ಬೇರೆಯವರ ಮನೆಯಲ್ಲಿ, ಈ ಜನ್ಮದಲ್ಲೇ ಉಪ್ಪಿಟ್ಟು ಕಂಡಿರದಂತೆ ಗೆಬರಿಕೊಂಡು ತಿಂದರೆ, ತಂದೆ ತಾಯಿಯ ಗತಿ ಏನಾಗಬೇಕು? ಉಪ್ಪಿಟ್ಟು ಸೇರಲ್ಲ ಅಂತ ಹೇಳಿದ ನಮ್ಮನ್ನು ನೋಡಿ ಅವರಿಗೆ ಏನನಿಸಲ್ಲ? ಕೇಳಿಬಿಟ್ರೆ ವಾಸಿ, ಸಮಜಾಯಿಷಿ ನೀಡಬಹುದು. ಆದರೆ ಕೇಳಲ್ಲ – ಒಂದು ನಿಕೃಷ್ಟ ದೃಷ್ಟಿ ಬೀರಿ ಸುಮ್ಮನಾಗ್ತಾರೆ, ಅದೇ ತಾಪತ್ರಯ!!

ಇನ್ನ ಎಲ್ಲ ತಂದೆತಾಯಿಗಳ ಅನುಭವಕ್ಕೆ ಬಂದಿರುವ ಮಕ್ಕಳ ಟಾಲೆಂಟ್ ಪ್ರದರ್ಶನ – 'ನಾಯಿಮರಿ ನಾಯಿಮರಿ..' ಹಾಡುವುದೋ, 'ಮೈ ನೇಮ್ ಈಸ್ ಶೀಲಾ...' ಹಾಡಿಗೆ ಸೊಂಟ ಕುಣಿಸಿ ಕುಣಿಯುವುದೋ ಮುಂತಾದ ನಮ್ಮ ಮಕ್ಕಳ ಆಟೋಟಗಳನ್ನು ಲೆಕ್ಕವಿಲ್ಲದಷ್ಟು, ಕೆಲವೊಮ್ಮೆ ಬೋರಾಗುವಷ್ಟು, ಎಂಜಾಯ್ ಮಾಡಿರುವ ನಾವು ಸಹಜವಾಗಿಯೇ, ನಮ್ಮ ಮಕ್ಕಳು ಇವುಗಳನ್ನು ಇತರರ ಮುಂದೂ ಮಾಡಿ, ನಾವು ಮಾಡಿರುವ ಉದ್ದುದ್ದ ಭಾಷಣಗಳನ್ನು ನಿಜಗೊಳಿಸಲಿ ಅಂತ ಆಶಿಸುತ್ತೇವೆ. ಆದರೆ ಅವರು ಇತರರ ಮುಂದೆ – ನಾವೆಷ್ಟೇ ತಲೆಕೆಳಗಾಗಿ ನಿಂತರೂ ತಮ್ಮ ಟಾಲೆಂಟ್ ಪ್ರದರ್ಶನ ಮಾಡುವುದಿಲ್ಲ. ಅವರು ನಮ್ಮ ಬಗ್ಗೆ 'ಈ ಮೊದ್ದು ಹುಡುಗರ ಬಗ್ಗೆ ಅದೆಷ್ಟು ಸುಳ್ಳು ಬೊಂಕಿದರು ಇವರು' ಅಂತ ತಪ್ಪು ತಿಳಿಯುತ್ತಾರೆ. ಕುದುರೆಯನ್ನು ನೀರಿನವರೆಗೆ ಎಳೆದು ತರಬಹುದು, ಆದರೆ ನೀರು ಕುಡಿಸಲಿಕ್ಕಾಗುವುದಿಲ್ಲ. ತಂದೆ ತಾಯಿಯರೇ, ಹೇಳಿ ಇದು ಎಷ್ಟು ನಿಜ, ಅಲ್ಲವೇ?

ಇನ್ನು ನನ್ನ ಮಕ್ಕಳ ಜಗಳ ಬಿಡಿಸಲು ಹೋಗಿ ಮಂಗ ಆಗಿದ್ದೆಷ್ಟು ಸಲವೋ ಕಾಣೆ! ಪ್ರಾಯ್ಡ್‌ನ ಸೈಕಾಲಜಿ, ಮಕ್ಕಳ ಸೈಕಾಲಜಿ, ನನ್ನ ಅನುಭವ ಎಲ್ಲವನ್ನೂ ಪ್ರತಿಸಾರ್ತಿ ಧಾರೆಯೆರೆದು, ಅವರ ಜಗಳದ ಮೂಲವನ್ನು ಹುಡುಕುತ್ತೇನೆ, ಮತ್ತೆ ಅದಕ್ಕೆ ತಕ್ಕುದಾದ ಸಾಂತ್ವನವನ್ನೀರ್ವರಿಗೂ ನೀಡುತ್ತೇನೆ. ಫಲವಾಗಿ ಜಗಳ ಏರುಗತಿಯಾಗುತ್ತದೆಯೇ ಶಿವಾಯ್ ಮುಗಿಯುವುದಿಲ್ಲ. ಹೋಗಲಿ ಜಗಳವಾದರೂ, ಯಾವ ಘನಂದಾರಿ ಆಸ್ತಿಗಳಿಗೆ ಆಗುತ್ತೆ ಅಂತೀರಿ? ಒಂದು ಮುರಿದ ಗುಂಡಿ, ಹರಿದ ಚಡ್ಡಿ, ಕೈ-ಕಾಲಿರದ ಗೊಂಬೆ ಯಾ ಚಕ್ರವಿರದ ಕಾರಿಗಾಗಿ! ಜಗಳ ಬಗೆಹರಿಸಲಾಗದೇ

ಅಸಹಾಯ ಸ್ಥಿತಿಯಲ್ಲಿ ಮುಂದೆ ಯಾರೇ ಬಂದರೂ ವಿನಾಕಾರಣ ಬಯ್ಯುವ ಮನಃಸ್ಥಿತಿ ತಲುಪಿರುತ್ತೇನೆ. ಈ ವಿಚಾರ ತಿಳಿದ ನಮ್ಮಾಕೆ ಅಪ್ಪಿ-ತಪ್ಪಿಯೂ ಆಗ ನನ್ನ ಹತ್ತಿರ ಸುಳಿಯುವುದಿಲ್ಲ. ಅದೇ ಒಂದೆರಡು ನಿಮಿಷದ ನಂತರ, ಆಕಾಶ ಭೂಮಿ ಒಂದು ಮಾಡಿದ್ದ ಮಕ್ಕಳು ಅದರರಿವೇ ಇಲ್ಲದಂತೆ, ಒಂದಾಗಿ ಆಡುತ್ತಿರುತ್ತಾರೆ! ನಾನು ಮಾತ್ರ ನನ್ನ ಮನಃಸ್ಥಿತಿಯಿಂದ ನಾರ್ಮಲ್‌ಗೆ ಬರಲು ೨ ದಿನ ಬೇಕಾಗುತ್ತದೆ!

ಮಕ್ಕಳ ಕುತೂಹಲವೇ ಅವರನ್ನು ವಿಜ್ಞಾನದೆಡೆಗೆ ಸೆಳೆಯುತ್ತದೆ ಎಂಬುದನ್ನು ಎಲ್ಲರೂ ಬಲ್ಲರು. ಆದರೆ ಅವರ ಕುತೂಹಲದಿಂದ – ಅರ್ಜುನನ ಬತ್ತಳಿಕೆಯಿಂದ ಒಂದರ ಹಿಂದೊಂದರಂತೆ ಪುಂಖಾನುಪುಂಖವಾಗಿ ಬರುವ ಕೂರಂಬುಗಳಂಥ ಪ್ರಶ್ನಾವಳಿಗೆ ಎಂಥ ತಜ್ಞನೂ ಸಹನೆ ಕಳೆದುಕೊಳ್ಳುವುದು ಸಹಜ. ಒಮ್ಮೆ ಬಜಾರಿನಲ್ಲಿ ತಾಯಿ ಹಾಗೂ ಎರಡು ವರ್ಷದ ಪೋರ ಹೋಗುತ್ತಿದ್ದರು. ಆ ಪೋರ ಅಲ್ಲಿ ನಡೆಯುತ್ತಿದ್ದ ನಾಯಿಗಳ 'ಮಿಲನ ಮಹೋತ್ಸವ'ವನ್ನು ನೋಡಿದ, ಮತ್ತು ತನ್ನ ಎಂದಿನ ಕುತೂಹಲದಿಂದ ಅದೇನೆಂದು ತಾಯಿಯನ್ನು ಪ್ರಶ್ನಿಸಿದ. ಆ ತಾಯಿ ಏನೆಂದು ಉತ್ತರಿಸಬೇಕು? ಎಲ್ಲರಿಗೂ ಗೊತ್ತಿರುವ ಏಕೈಕ ಉಪಾಯದಂತೆ – ಎರಡು ಏಟು ಬಿಗಿದು ಕರೆದುಕೊಂಡು ಹೋದಳು! ನಾವೆಲ್ಲರೂ ಅಷ್ಟೇ ಅಲ್ಲವೆ? ನಮ್ಮ ಜ್ಞಾನ ಭಂಡಾರ ಭರ್ತಿ ಇರುವವರೆಗೆ ಸಹನೆಯಿಂದ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುತ್ತೇವೆ. ಖಾಲಿಯಾದಾಗ, ಕೋಪದಿಂದ 'ಹೋಗೋ ಮುಂಡೇದೆ! ವಯಸ್ಸಿಗೆ ಮೀರಿದ ಮಾತಾಡ್ತೀಯಾ?' ಎಂದಂದು, ಮಕ್ಕಳು ಇನ್ನೂ ಮುಂದುವರಿದರೆ, ಕೈ ಎತ್ತಿ ನಮ್ಮ ಪೌರುಷದಿಂದ ಅವರ ಕುತೂಹಲವನ್ನು ತಣಿಸುತ್ತೇವೆ – ನಮ್ಮ 'ಜ್ಞಾನದಿಂದಲ್ಲ'.

ಕೆಲವೊಮ್ಮೆ ನಾವು ಸಣ್ಣ ಮಕ್ಕಳ ಕೈಲಿ ಸಣ್ಣ ಕೆಲಸ ಮಾಡಿಸುವುದುಂಟು. ಕೆಲ ಮಕ್ಕಳು ಸುಮ್ಮನೆ ಮಾಡುತ್ತಾರೆ. ಮತ್ತೆ ಕೆಲವರು ಹೇಗೆ ಮಾಡುತ್ತಾರೆಂದರೆ, ಮತ್ತೆ ಯಾವತ್ತೂ ಅವರಿಗೆ ಕೆಲಸವನ್ನೇ ಹೇಳಬಾರದು ಆ ರೀತಿ! ಇವರಿಂದ ರೋಸಿ ಹೋಗಿದ್ದ ನನಗೆ, ಒಮ್ಮೆ ನನ್ನೊಳಗಿನ ಕ್ರಿಮಿನಲ್ ಬುದ್ಧಿ ಜಾಗೃತವಾಗಿ, 'ನಾನಿದನ್ನು ನನ್ನ ಆಫೀಸಿನಲ್ಲಿ ಯಾಕೆ ಟ್ರೈ ಮಾಡಬಾರದು? ಕೆಲಸವನ್ನು ಹಾಯಾಗಿ ತಪ್ಪಿಸಿಕೊಳ್ಳಬಹುದಲ್ಲ?' ಎನಿಸಿತು. ಶುಭಸ್ಯ ಶೀಘ್ರಂ ಎಂದು ಮರುದಿನವೇ ಜಾರಿಗೆ ತಂದೆ. ಆಫೀಸಿನಲ್ಲಿ ಮೊದಲ ಸಲ, ಬಾಸ್ ನಕ್ಕು ಸುಮ್ಮನಾದ್ರು, ಎರಡನೇ ಸಲ ಸ್ವಲ್ಪ ಸಿಟ್ಟಾದ್ರು. ನಾನು ನನ್ನ ತಂತ್ರವನ್ನು ತ್ರಿವಿಕ್ರಮನಂತೆ ಮುಂದುವರಿಸಿದೆ. ಈಗ ಇನ್ನೊಂದು ಆಫೀಸಿನಲ್ಲಿ ಎರಡು ತಿಂಗಳಿನಿಂದ ಪ್ರೊಬೆಷನ್‌ನಲ್ಲಿದ್ದೇನೆ!

ಮಕ್ಕಳ ಹಟ ಹಾಗೂ ಮೊಂಡಾಟಗಳು ಆ ಕ್ಷಣದಲ್ಲಿ ನಮ್ಮ ಸಹನೆಯನ್ನು ಪರೀಕ್ಷೆಗೊಡ್ಡುತ್ತವೆ. ನಿಜ. ಆದರೆ ಆ ವಿಷಯಗಳನ್ನು ಮತ್ತೆ ಮೆಲಕು ಹಾಕಿದಾಗ, ನಮಗಾಗುವ ಆನಂದವೇ ವರ್ಣನಾತೀತ. ಅದಕ್ಕೆ ಹೇಳೋದು – 'ಹೆತ್ತವರಿಗೆ ಹೆಗ್ಗಣವೂ ಮುದ್ದು' ಅಂತ!

(ಸಾಭಾರ : ಉತ್ಥಾನ)

* * *

ವೇದ - ಬಿಂದು

– *ವಿನೋಬಾ*

(ವೇದಗಳಲ್ಲಿ ಇರುವ ಹಲವಾರು ಜೀವನೋಪಯೋಗಿ ಮಾತುಗಳನ್ನು ಇಲ್ಲಿ ಬಿಂದು ರೂಪಗಳಲ್ಲಿ ಸುಲಭಗ್ರಾಹವಾಗುವಂತೆ ಮಂಡಿಸಲಾಗಿದೆ.)

೧

ವೇದ, ಉಪನಿಷತ್, ಗೀತೆ ನನ್ನ ಪ್ರಾಣ ತತ್ವಗಳು. ನನ್ನ ಅವಸ್ಥೆ ಏನೆಂದು ಹೇಳಲಿ? ವೇದವನ್ನು ತಿನ್ನುತ್ತೇನೆ, ವೇದವನ್ನು ಕುಡಿಯುತ್ತೇನೆ. ವೇದ ನನಗೆ ಗೌರವ ಮತ್ತು ಪ್ರೇಮದ ಸ್ಥಾನ. ಇದರಲ್ಲಿ ಯಾವ ಸಂದೇಹವೂ ಇಲ್ಲ.

೨

ಇಂದಿನ ದಿನಗಳಲ್ಲಿ ಪಾದಯಾತ್ರೆಯಲ್ಲಿ ಬೆಳಿಗ್ಗೆ ೩.೧೫ಕ್ಕೆ ಏಳುತ್ತೇನೆ. ಪ್ರಾರ್ಥನೆಯ ನಂತರ ಸ್ವಲ್ಪ ಹೊತ್ತು ವೇದ ಚಿಂತನೆಮಾಡಿ ನಂತರ ಯಾತ್ರೆ ಪ್ರಾರಂಭಿಸುತ್ತೇನೆ. ಮಂತ್ರಗಳ ಅರ್ಥವನ್ನು ವೇದವಾಣಿ ಸ್ವಯಂ ತೆರೆದು ಹೇಳಿ ಬಿಡುತ್ತದೆ. ಇಷ್ಟೊಂದು ಸ್ವಚ್ಛ ಪ್ರತಿಭಾ ಬೇರೆ ಸಮಯದಲ್ಲಿ ಇರುವುದಿಲ್ಲ. ನವೀನ ಸ್ಫೂರ್ತಿ ಬೆಳಗಿನ ಜಾವ ದೊರೆಯುತ್ತದೆ.

೩

ಚಸ್ ಆಟದಲ್ಲಿ ಮನಸ್ಸು ಮಗ್ನವಾಗಿ ಬಿಡುತ್ತದೆ. ಅಂಥದೇ ಅನುಭವ ನನಗೆ ವೇದ ಓದುವುದರಲ್ಲಿ ಆಗುತ್ತದೆ. ಚಸ್ ಆಟದಲ್ಲಿ ದ್ವೈತವಿದೆ. ಅಂದರೆ ಯಾರಾದರೂ ಜೊತೆ ಬೇಕು. ವೇದ ಪಠಣಕ್ಕೆ ಅದರದೂ ಅಗತ್ಯವಿಲ್ಲ.

೪

ವೇದವು ಧ್ಯಾನ, ಉಪನಿಷತ್ ಜ್ಞಾನ ಮತ್ತು ಭಾಗವತವೂ ಪ್ರೇಮ.

೫

ವೇದ ಧ್ವನಿಯಲ್ಲಿ ಇರುವಂಥ ಸಾಮರ್ಥ್ಯ ಮತ್ತು ಅದರ ಪ್ರಭಾವ ಅರ್ಥ ಜ್ಞಾನಕ್ಕಿಂತ ಕಡಿಮೆಯೇನಿಲ್ಲ. ಅರ್ಥವನ್ನು ತಿಳಿದುಕೊಳ್ಳುವುದರ ಜೊತೆಗೆ ರಾಗವನ್ನು ಜೋಡಿಸಿದಲ್ಲಿ ಇಡೀ ದಿನ ವಿಚಾರಗಳು ಹೊಳೆಯುತ್ತಿರುತ್ತವೆ. ಧ್ವನಿಗೆ ವಿಲಕ್ಷಣ ಸಾಮರ್ಥ್ಯವಿದೆ. ಆದ್ದರಿಂದ ಅದನ್ನು ಶಬ್ದಬ್ರಹ್ಮ ಅಥವಾ ನಾದಬ್ರಹ್ಮ ಎನ್ನುತ್ತಾರೆ. ಸಂಜೆಯ ಪ್ರಾರ್ಥನೆಯಲ್ಲಿ ಸಾಧ್ಯವಾದರೆ ಭಾವ ಭರಿತ ಭಜನೆ ಕೇಳುವುದಕ್ಕೆ ದೊರೆತಲ್ಲಿ ಬೆಳಿಗ್ಗೆ ಎದ್ದೇಳುತ್ತಲೇ ಯಾವುದೇ ವಿಚಾರ ಮಾಡದಿದ್ದರೂ ಅದೇ ನೆನಪಿಗೆ ಬರುತ್ತದೆ. ಇದು ಅನೇಕರ ಅನುಭವ. ಮನಸ್ಸಿನ ಒಳಗಿನ ಪರದೆಯ ಮೇಲೆ ಅಂದರೆ ಬುದ್ಧಿಯ ಸಮೀಪದ ಭಾಗದ ಮೇಲೆ ನಾದಬ್ರಹ್ಮದ ಆಳವಾದ ಪ್ರಭಾವವುಂಟಾಗುತ್ತದೆ.

೬

ವೇದ ಪ್ರಾಮಾಣ್ಯವೆಂದರೆ ಪೂರ್ವಪರಂಪರೆ ಬಗ್ಗೆ ಕೃತಜ್ಞತೆಯ ಬುದ್ಧಿ ಮತ್ತು ಹೊಸ ಪರಾಕ್ರಮವಾಗಿ ಸ್ಫೂರ್ತಿದಾಯಕ ಸ್ವಾತಂತ್ರ್ಯ.

೭

ವೇದ ಪ್ರಾಮಾಣ್ಯವೆಂದರೆ ನೀತಿ ಧರ್ಮದ ನಿತ್ಯತೆ.

೮

ವೈದೀಕ ಋಷಿಗಳಿಗೆ ಆತ್ಮಸ್ತುತಿ ಮಾಡಿಕೊಳ್ಳುವುದರಲ್ಲಿ ಸಂಕೋಚವಿಲ್ಲ. ಆತ್ಮರೂಪಗೊಂಡಿರುವ ಋಷಿಗಳೇ ಆತ್ಮಸ್ತುತಿ ಮಾಡಿಕೊಳ್ಳದಿದ್ದರೆ ಅನಾತ್ಮಸ್ತುತಿ ಮಾಡಿಕೊಳ್ಳಬೇಕೆ?

೯

ಋಷಿಗಳ ದರ್ಶನ, ತತ್ವವೇತ್ತರ ಜ್ಞಾನ, ಸಂತರ ಅನುಭವ.

೧೦

ವೇದ ಸ್ವಭಾವದಿಂದ ಮಾತಾಡುತ್ತೇವೆ, ಗುರು ಉಪದೇಶಾರ್ಥ ಮಾತನಾಡುತ್ತಾನೆ. ನಾನು ಜಪಾರ್ಥ ಮಾತಾಡುತ್ತೇನೆ.

೧೧

ವಿಶ್ವ–ಪ್ರತ್ಯಕ್ಷ ಬ್ರಹ್ಮ; ಈಶ್ವರ–ಅನುಮಾನ ಬ್ರಹ್ಮ; ವೇದ–ಶಬ್ದಬ್ರಹ್ಮ; ಆತ್ಮ–ಬ್ರಹ್ಮ.

೧೨

ಅಮೂರ್ತ ಮೂರ್ತ ಇವುಗಳ ಮಧ್ಯದ ಏಕಮಾತ್ರ ಕೊಂಡಿ ಶಬ್ದ. ಅಂದರೆ ವೇದ. ಅಂದರೆ ನಾಮ.

೧೩

ವೇದ ಮಂತ್ರಗಳಿಗಿಂತ ನಾಮದ ಮಹಿಮೆ ಹೆಚ್ಚು. ನಾಮದಲ್ಲಿ ಮಿತಿಯಿಲ್ಲದ ಶಕ್ತಿಯನ್ನು ತುಂಬಬಹುದು.

೧೪

ವೇದಾರ್ಥ ಸ್ಪಷ್ಟವಾಗಿ ಗೊತ್ತಾದರೂ ಏನು ಫಲ? ಯಾವುದು ಆಚರಣೆಯಲ್ಲಿ ಬರುತ್ತದೋ ಅದೇ ಸರಿ.

೧೫

ಈಶಾವಾಸ್ಯ ಉಪನಿಷತ್ತಿನಲ್ಲಿ ಪ್ರಥಮ ಮಂತ್ರದಲ್ಲಿ ವೈದಿಕ ಧರ್ಮದ ಸರ್ವಸಾರ ಸಂಚಿತವಾಗಿದೆ; ೧. ಈಶ್ವರನ ಸತ್ತೆಯ ಸ್ವಿಕಾರ; ೨. ಆದ್ದರಿಂದ ಸ್ವಯಂ ತ್ಯಾಗ ವೃತ್ತಿಯಿಂದ ಜೀವನವನ್ನು ಕಳೆಯಬೇಕು; ೩. ಬೇರೆಯವರ ಭೋಗ ವೃತ್ತಿಯ ಬಗ್ಗೆ ಈರ್ಶ್ಯೆ ಮಾಡದಿರುವುದು. ಈ ಮೂರು ವೈದಿಕ ಧರ್ಮ. ಸ್ವಾತ್ಮ, ಪರಾತ್ಮ ಮತ್ತು ಪರಮಾತ್ಮ ಇವುಗಳ ಸಂಬಂಧವಾಗಿ ಕರ್ತವ್ಯಗಳು ಇಲ್ಲಿ ಬಹಿರಂಗಗೊಂಡಿವೆ.

೧೬

ವೇದವು ಈಶ್ವರನನ್ನು 'ಸನಾತ್ ಯುವ' ಎಂದು ಕರೆದು ಅವನ ಸ್ತುತಿ ಮಾಡಿದೆ. ಸನಾತ್ ಯುವ ಅಂದರೆ ಶಾಶ್ವತ ತರುಣ, ಜರಾಮರಣ ಮುಕ್ತ.

೧೭

ಆತ್ಮಜ್ಞಾನದ ಪ್ರಾಪ್ತಿಯ ನಂತರ ವೇದಗಳ ಅವಶ್ಯಕತೆ ಇರುವುದಿಲ್ಲ. ಅತ್ರ ಪಿತಾ ಅಪಿತ ಭವತಿ, ಮಾತಾ ಅಮಾತಾ, ದೇವಾ ಅದೇವಾಃ ವೇದ ಅವೇದಾಃ.

೧೮

ವೇದಗಳಿಗಿಂತಲೂ ಬ್ರಾಹ್ಮಣ ಶ್ರೇಷ್ಠ. ವೇದಾಧ್ಯಯನ ಮಾಡುವ ಬ್ರಾಹ್ಮಣನಿಲ್ಲದೆ ವೇದಗಳ ಉಪಯೋಗವೇನು! ಆದ್ದರಿಂದ ಎಲ್ಲಕ್ಕಿಂತ ದೊಡ್ಡದಾದ ವೇದ ಮತ್ತು ವೇದಗಳಿಗೂ ಕೂಡ ದೊಡ್ಡವ ಬ್ರಾಹ್ಮಣ. ಬ್ರಾಹ್ಮಣ ಎಂದರೆ ಉಪಾಸಕ.

೧೯

ಈಶ್ವರ ನಮ್ಮನ್ನು ರುಜು ನೀತಿಯ ಕಡೆಗೆ ತಿರುಗಿಸಲಿ. ಋಜು ನೀತಿ ನೊ...ನಯತು.

೨೦

ಆ ಶರ್ಮ ಪರ್ವತಾನಾಂ ವೃಣೀಮಹೇ ನದಿನಾಮ್

ಆ ವಿಷ್ಣೋಃ ಸಚಾಭುವಃ

ಬಾ ನಾವು ಪರ್ವತಗಳಿಂದ ಆಶ್ರಯ ಕೇಳೋಣ ಮತ್ತು ನದಿಗಳಿಮದ ಆಶ್ರಯ ಕೇಳೋಣ ಮತ್ತು ಪರಮೇಶ್ವರನ ಬಳಿ ಆಶ್ರಯ ಕೇಳೋಣ. ಅವನು ನಮಗೆ ಸದಾ ಸಾಕ್ಷಿ.

೨೧

ವೇದದಲ್ಲಿ ಒಂದು ಮಂತ್ರವಿದೆ. ಎಲ್ಲರ ಸೃಷ್ಟಿಕರ್ತ ಪರಮೇಶ್ವರ. ಅವನೇ ಎಲ್ಲವನ್ನು ಮಾಡಿಕೊಳ್ಳುತ್ತಾನೆ. ಅವನ ಕೆಲಸದಲ್ಲಿ ಅಡ್ಡಗಾಲು ಹಾಕುವ ಹೊಣೆಗಾರಿಕೆ ನನ್ನದಲ್ಲ.

೨೨

'ಚರೈವತಿ' ಇದು ವೇದಗಳ ಸಂದೇಶ. ಯಾವನು ಮಲಗಿರುತ್ತಾನೋ ಅವನು ಕಲಿಯುಗದಲ್ಲಿರುತ್ತಾನೆ. ಕುಳಿತುಕೊಂಡವನು ದ್ವಾಪರಯುಗದಲ್ಲಿ ಇರುತ್ತಾನೆ. ಎದ್ದೇಳುವವನು ತ್ರೇತಾಯುಗದಲ್ಲಿ ಇರುತ್ತಾನೆ ಮತ್ತು ನಡೆಯುತ್ತಿರುವವನು ಕೃತಯುಗದಲ್ಲಿ ಇರುತ್ತಾನೆ. ಒಂದು ವೇಳೆ ಸತ್ಯದ ಸಂಶೋಧನೆ ಮಾಡುವುದಿದ್ದರೆ ಅಹಿಂಸೆಯ ಆಚರಣೆ ಹೇಗೆ ಈ ಬಗ್ಗೆ ಚಿಂತನೆ ಮಾಡಬೇಕಿದೆ. ಮುಕ್ತಗಾಳಿ ಮತ್ತು ಮುಕ್ತ ಆಕಾಶದ ಕೆಳಗೆ ತಿರುಗಾಡಬೇಕು. ಯಾರು ನಡೆಯುತ್ತಾರೋ ಅವನು ಕೃತಯುಗದಲ್ಲಿ ಇರುತ್ತಾನೆಂದು ವೇದಗಳು ಅಪ್ಪಣೆ ಮಾಡಿವೆ.

ಕೃತಂ ಸಂಪದ್ಯತೆ ಚರನ್

೨೩

ಭಗವಂತ ಪ್ರತಿಯೊಬ್ಬನಿಗೂ ತಿನ್ನುವುದಕ್ಕಾಗಿ ಒಂದು ಚಿಕ್ಕ ಬಾಯಿ ಕೊಟ್ಟಿದ್ದಾನೆ. ಕೆಲಸ ಮಾಡುವುದಕ್ಕಾಗಿ ಎರಡು ಉದ್ದನೆಯ ಕೈಗಳನ್ನು ಮತ್ತು ಹತ್ತು ಬೆರಳುಗಳನ್ನು ಕೊಟ್ಟಿದ್ದಾನೆ. ಭಗವಂತ ಮನುಷ್ಯನಿಗೆ ಹತ್ತು ಯಂತ್ರಗಳನ್ನು ಕೊಟ್ಟಿದ್ದಾನೆಂದು ವೇದಗಳಲ್ಲಿ ಹೇಳಲಾಗಿದೆ. ಆದರೆ ಇಂದಿನ ದಿನಗಳಲ್ಲಿ ಶಿಕ್ಷಿತ ಜನರು ಹತ್ತು ಬೆರಳುಗಳಿಂದ ಕೆಲಸ ಮಾಡುವುದಿಲ್ಲ. ಬದಲಿಗೆ ಮೂರು ಬೆರಳುಗಳಿಂದ ಮಾತ್ರ ಕೆಲಸ ಮಾಡಿ ಬಹಳಷ್ಟು ಹಣವನ್ನು ಸಂಪಾದಿಸ ಬಯಸುತ್ತಾರೆ.

೨೪

ಶರತ್ ಹುಣ್ಣಿಮೆಯ ದಿನ ದುಲಿಯ ಗ್ರಾಮದಲ್ಲಿ ಇದ್ದಾಗ ತಂದೆಯ ಮೃತ್ಯುವಾಯಿತು. (೨೯-೧೦-೧೯೪೭). ಅಸ್ಥಿ ವಿಸರ್ಜನೆಯ ಮಾತು ಬಂತು. ಗೋದಾವರಿ ನದಿ ಹತ್ತಿರವಿತ್ತು. ಅದನ್ನು ನದಿಯಲ್ಲಿ ವಿಸರ್ಜಿಸುವ ವಿಚಾರವಿತ್ತು. ನಾನು ಕೇಳಿದೆ, "ತಂದೆಯ ಅಸ್ಥಿಗಳ ಮೇಲೆ ಗೋದಾವರಿಯ ಹಕ್ಕೇನಿದೆ? ಗೋದಾವರಿ ನದಿಯು ನೀರು ಮತ್ತು ಮೂಳೆಗಳು ಮಣ್ಣು. ಮಣ್ಣಿನ ಮೇಲೆ ನೀರಿನದೇನು ಅಧಿಕಾರ? ಮಣ್ಣಿನ ಮೇಲೆ ಮಣ್ಣಿನದೆ ಅಧಿಕಾರವಿರಲು ಸಾಧ್ಯ. ತೇಜದಲ್ಲಿ ತೇಜ, ವಾಯುವಿನಲ್ಲಿ ವಾಯು, ನೀರಿನಲ್ಲಿ ನೀರು ಮತ್ತು ಮಣ್ಣಿನಲ್ಲಿ ಮಣ್ಣು ಸೇರಬೇಕು." ನಾನು ಅಲ್ಲಿಯೇ ಮನೆಯ ಅಂಗಳದಲ್ಲಿ ಒಮದು ಗುಂಡಿ ತೋಡಿ ಅದರಲ್ಲಿ ಮೂಳೆಗಳನ್ನು ಹಾಕಿದೆ, ಮೇಲೆ ತುಳಸಿಯ ಗಿಡ ನೆಟ್ಟೆ, ಇದರ ಅರ್ಥವನ್ನು ನಾನು ವೇದದಿಂದಲೇ ಪಡೆದೆ ವೇದದಲ್ಲಿ ಸಾಕ್ಷಾತ್ ಪೃಥ್ವೀ ಈ ರೀತಿ ಪ್ರಾರ್ಥನೆ ಮಾಡಿದೆ, "ಹೇ ಭೂಮಾತಾ ಇದು ನಿನ್ನ ಅವಶೇಷ, ಇದಕ್ಕೆ ನೀನು ನಿನ್ನ ಹೊಟ್ಟೆಯಲ್ಲಿ ಸ್ಥಾನ ಕೊಡು." ವೇದದಲ್ಲಿ ಒಂದೇ ಸೂಕ್ತದಿಂದ ಎರಡು ಅರ್ಥ ಹೊರಡುತ್ತದೆ. ಮೊದಲು ಹೆಣವನ್ನು ಸುಡಬೇಕು ನಂತರ ಆಗುವ ಬೂದಿಯನ್ನು ಉಳಬೇಕು. ಈ ರೀತಿ ವೇದದ ಆಧಾರ ತೆಗೆದುಕೊಂಡು ನಾನು ತಂದೆಯ ಅಸ್ಥಿಯನ್ನು ನದಿಯಲ್ಲಿ ವಿಸರ್ಜನೆ ಮಾಡದೆ ಭೂಮಿಯಲ್ಲಿ ಮಾಡಿದೆ.

(ಮುಂದುವರಿಯುವುದು...)

* * *

ಗಾಂಧೀ ಆತ್ಮಕಥೆ ಮಾಡಿದ ಪವಾಡ

– ನೀಲತ್ತಹಳ್ಳಿ ಕಸ್ತೂರಿ

ಭಗವಾನ್ ಬುದ್ಧನ ಕಾಲದಲ್ಲಿ ಅಂಗುಲಿಮಾಲ ಎಂಬ ಕ್ರೂರ ದರೋಡೆಕೋರನಿದ್ದನಂತೆ. ಆತ ಬುದ್ಧನ ದರ್ಶನಮಾಡಿದ ಮೇಲೆ ಮನಃಪರಿವರ್ತನೆಗೊಂಡ. ದುಷ್ಟತನದ ಹಾದಿ ತೊರೆದು ಸಾಧುವಾದ. ಬುದ್ಧನ ಶಿಷ್ಯನಾಗಿ ಆತನ ಜೊತೆಯಲ್ಲಿ ನಡೆದ.

ನಮ್ಮ ಕಾಲದಲ್ಲಿ ಮಧ್ಯಪ್ರದೇಶದ ಡಕಾಯಿತರು ವಿನೋಬಾ–ಜಯಪ್ರಕಾಶ ನಾರಾಯಣರ ಸಂಪರ್ಕದಿಂದ ಕಾಡು ಜೀವನದಿಂದ ನಾಡು ಜೀವನಕ್ಕೆ ಬಂದು ನಾಗರಿಕರಾದ ಪ್ರಸಂಗವೂ ನಡೆದದ್ದಿದೆ. ಈಗ ಅಂಥ ಇನ್ನೊಂದು ಪ್ರಸಂಗ ಸಂಭವಿಸಿದೆ. ಇಲ್ಲಿ ವ್ಯಕ್ತಿ ಸಂಪರ್ಕವೂ ಆಗಿಲ್ಲ. ಕೇವಲ ಪುಸ್ತಕ ಓದಿ ಪರಿವರ್ತನೆ ಆಗಿದೆ.

ಲಕ್ಷ್ಮಣ ಗೋಲೆ ಮುಂಬೈನ ಘಾಟ್‌ಕೂಪರ್ ಸ್ಲಂಗಳಲ್ಲಿ ದಾಷ್ಟ್ಯ ನಡೆಸುತ್ತಿದ್ದ ವ್ಯಕ್ತಿ. ನೀರಿಗಾಗಿ ನಡೆಯುತ್ತಿದ್ದ ಜಗಳಗಳಲ್ಲಿ ಆತನದೇ ಹೋರಾಟ, ಹಲ್ಲೆ. ಅಲ್ಲೊಬ್ಬ ಗೂಂಡಾ ಇದ್ದ. ನೀರಿನ ಜಗಳದ ಮುಖಂಡ. ಒಮ್ಮೆ ಆತನಿಗೂ ಗೋಲೆಗೂ ಹಣಾಹಣಿ ಆಯಿತು. ಗೋಲೆ ಚಾಕುವಿನಿಂದ ಆ ಗೂಂಡಾನನ್ನು ಇರಿದ. ಗೋಲೆಯ ಕುಕೃತ್ಯಗಳ ಕಾಟ ಅಲ್ಲಿಂದ ಮುಂದೆಯೂ ಮುಂದುವರಿಯಿತು. ಲೂಟಿ, ಹಲ್ಲೆ, ಕಳ್ಳ ವ್ಯಾಪಾರ, ಬ್ಲಾಕ್‌ಮೇಲ್ ಮಾಡುವುದು, ಬೆದರಿಕೆ ಇತ್ಯಾದಿ. "ಕೊಲೆ ಒಂದು ಬಿಟ್ಟು ಬೇರೆ ಎಲ್ಲ ಅಪರಾಧ ಮಾಡಿದೆ. ಬೇಕಾದಷ್ಟು ಹಣ ದೋಚಿದೆ. ಜೈಲಿಗೆ ಹೋಗಿ ಬರುವುದು ಸಾರಾಸಗಟಾಗಿತ್ತು' ಎಂದು ಆತನೇ ಹೇಳಿದ.

ಬರುಬರುತ್ತ ಮುಂಬೈನಲ್ಲಿ ಭಯೋತ್ಪಾಕತೆ ಬೆಳೆಯಿತು. ಲಕ್ಷ್ಮಣ ಗೋಲೆಯ ಬಂಧನವಾಯಿತು. ಜಾಮೀನು ದೊರಕದೆ ಜೈಲಿನಲ್ಲಿ ಇರಬೇಕಾಯಿತು.

ಅಲ್ಲಿ ನಡೆದುದೇ ಚಮತ್ಕಾರ. ನಾಸಿಕ್ ಹಾಗೂ ಆರ್ಥರ್ ರಸ್ತೆ ಜೈಲುಗಳಲ್ಲಿದ್ದ ಕಾಲ. ಆಗ ಪ್ರದೀಪ ಬಾಳೇಕರ್ ಎಂಬ ಅಪರಾಧಿಯೊಬ್ಬನ ಪರಿಚಯವಾಯಿತು. ಆತ ಗೋಲೆಗೆ ಮಹಾತ್ಮಾ ಗಾಂಧೀಜಿಯ ಕತೆ ಹೇಳಿದ. ಸಣ್ಣ ಪುಸ್ತಕ ಕೊಟ್ಟ. ಗೋಲೆ ಅದನ್ನು ಓದಿದ. ಏನೋ ಮನಸ್ಸಿಗೆ ನೆಮ್ಮದಿ, ಬೆಳಕು ದೊರೆತಂತೆ ಎನಿಸಿತು. ತಾನು ಮಾಡಿದ ತಪ್ಪಿಗಾಗಿ ತಂದೆಯ ಮುಂದೆ ತಪ್ಪೊಪ್ಪಿಗೆ ಮಾಡಿಕೊಂಡು ಅಳುತ್ತಾ ನಿಂತಿದ್ದ ಬಾಲ ಗಾಂಧಿಯ ಚಿತ್ರ ಗೋಲೆಯ ಮನಸ್ಸಿನಲ್ಲಿ ಮುದ್ರೆಗೊಂಡಿತು. 'ನಾನೂ ಒಳ್ಳೆಯವನಾಗಬಾರದೇಕೆ' ಎನಿಸಿತು.

ಆಮೇಲೆ ಗೋಲೆ ಗಾಂಧೀಯವರ ಜೀವನ ಚರಿತ್ರೆಯ ದೊಡ್ಡ ಪುಸ್ತಕ ಕೇಳಿದ. ಅದನ್ನು ಓದಿದ ಮೇಲೆ ಆತ ನಿರ್ಧರಿಸಿದ, ತಾನೂ ತಪ್ಪು ಒಪ್ಪಿಕೊಳ್ಳಬೇಕು ಎಂದು. ಆಗ ಅವನ ತಲೆಯ ಮೇಲೆ ಸುಮಾರು ೧೮ ಕೇಸುಗಳು ಇದ್ದವು. ಗೋಲೆ ನ್ಯಾಯಾಧೀಶರಿಗೆ ಪತ್ರ ಬರೆದು, ತಾನು ತಪ್ಪು ಒಪ್ಪಿಕೊಳ್ಳುವುದಾಗಿಯೂ, ತನಗೆ

ಶಿಕ್ಷೆ ಕೊಡಬೇಕೆಂದೂ, ವಿಚಾರಣೆ ಮುಂದುವರೆದು ಕಾಲ ವ್ಯಯವಾಗುವುದು ಬೇಡವೆಂದೂ ಕೇಳಿಕೊಂಡ.

ಪತ್ರ ನೋಡಿ ಬೆರಗಾದ ನ್ಯಾಯಾಧೀಶ, ಗೋಲೆಯನ್ನು ಕೋರ್ಟಿಗೆ ಕರೆಸಿ, ಈ ವಿಚಿತ್ರ ಬಿನ್ನಹಕೆ ಏನು ಕಾರಣವೆಂದು ಕೇಳಿದರು. ಗಾಂಧೀಯವರು ತಪ್ಪು ಒಪ್ಪಿಕೊಂಡಿದ್ದನ್ನು ಓದಿ ತಿಳಿದು ತನಗೂ ಹಾಗೆ ಎನಿಸಿತು ಎಂದ ಗೋಲೆ. ಆತ ಮಾಡಿದ್ದ ತಪ್ಪುಗಳಿಗೆ ಒಟ್ಟು ಏಳು ವರ್ಷ ಶಿಕ್ಷೆ ವಿಧಿಸಬಹುದು ಎಂದು ನ್ಯಾಯಾಧೀಶರು ಹೇಳಿದರು. ಗೋಲೆ ಹಿಂಜರಿಯಲಿಲ್ಲ. ಆಗಲಿ, ಶಿಕ್ಷೆಗೆ ಸಿದ್ಧ ಎಂದ.

ಲಕ್ಷ್ಮಣ ಗೋಲೆಯ ಈ ತಪ್ಪೊಪ್ಪಿಗೆಯನ್ನು ನೋಡಿ ನ್ಯಾಯಾಧೀಶರು ಮನಕರಗಿ ಐದು ವರ್ಷಗಳ ಶಿಕ್ಷೆಯನ್ನೂ ಜುಲ್ಮಾನೆಯನ್ನೂ ವಿಧಿಸಿದರು.

ಜೈಲಿನಲ್ಲಿ ಲಕ್ಷ್ಮಣ ಸುಮ್ಮನೆ ಕೂರಲಿಲ್ಲ. ಇನ್ನಷ್ಟು ಗಾಂಧೀ ಸಾಹಿತ್ಯ ಓದಿದ. ಜೊತೆಯ ಕೈದಿಗಳಿಗೆಲ್ಲ ಅ ಸಾಹಿತ್ಯ ಹಂಚಿದ. ಅಪರಾಧಿಗಳ ಮನಸ್ಸು ತಿದ್ದಲು ಯತ್ನಿಸಿದ.

ಮುಂಬೈನ ಗಾಂಧೀ ಬುಕ್ ಸೆಂಟರ್‌ನಲ್ಲಿ ಸಾಹಿತ್ಯ ಕೋರಿ ಗೋಲೆ ನಾಸಿಕ್ ಜೈಲಿನಿಂದ ಬರೆದ ೭೨ ಪತ್ರ ಇವೆ. ಜೈಲಿನ ಅಧಿಕಾರಿಗಳಿಗೆ ಇವನ ನಡವಳಿಕೆ ಮೆಚ್ಚಿಗೆ ಆಗಿ ಶಿಕ್ಷೆಯ ಅವಧಿಯನ್ನು ಇಳಿಸಿದರು.

ಗೋಲೆ ಶಿಕ್ಷೆ ಮುಗಿಸಿ ಹೊರಬಂದ. ಈತನ ಕತೆಕೇಳಿದ ಕೆಲವು ವ್ಯಾಪಾರೋದ್ಯಮಿಗಳು ಈತನಿಗೆ ಕೆಲಸಕೊಡಲು ಮುಂದೆ ಬಂದರು. ಒಬ್ಬ ವಜ್ರದ ವ್ಯಾಪಾರಿ ಹಾಗೆ ಬಂದರು. ಲಕ್ಷ್ಮಣ ನಿರಾಕರಿಸಿದ. "ವಜ್ರದ ವ್ಯಾಪಾರದಿಂದ ಬೇಕಾದಷ್ಟು ಹಣ ಸಿಗಬಹುದು, ಆದರೆ ನೆಮ್ಮದಿ ಸಿಗಲಾರದು. ನಾನು ಗಾಂಧೀಜಿಗಾಗಿ ಕೆಲಸ ಮಾಡಬೇಕು. ಗಾಂಧೀಜಿ ತೋರಿದ ದಾರಿಯಲ್ಲಿ ನಡೆಯಬೇಕು" ಎಂದ. ಅದಕ್ಕಾಗಿ ಗಾಂಧೀ ಬುಕ್ ಸೆಂಟರ್‌ನಲ್ಲಿ ಕೆಲಸಕ್ಕಾಗಿ ಬಿನ್ನವಿಸಿಕೊಂಡ.

ಈಗ ಮುಂಬೈನ ಗ್ರಾಂಟ್‌ರೋಡಿನಲ್ಲಿರುವ ಗಾಂಧೀ ಬುಕ್ ಸೆಂಟರ್‌ನಲ್ಲಿ ಲಕ್ಷ್ಮಣ ಗೋಲೆ ಉದ್ಯೋಗಿ. ಗೋಲೆ ಓದಿದ್ದು ೭ನೇ ತರಗತಿವರೆಗಷ್ಟೆ. ಆದರೆ ಜೈಲಿನಲ್ಲಿ ಇದ್ದಾಗ ಗುಜರಾತಿ ಓದು ಬರೆಹ ಕಲಿತುಕೊಂಡ. ಈಗ ಆತ ಪುಸ್ತಕ ಮಾರುತ್ತಾನೆ. ಮನೆಯಲ್ಲಿ ಚರಕಾ ನೂಲುತ್ತಾನೆ.

ಗಾಂಧೀಯವರ ಜೀವನ ಚರಿತ್ರೆಯಲ್ಲಿ ಒಂದು ಅಧ್ಯಾಯವಿದೆ. 'Magic Spell of a Book' (ಒಂದು ಪುಸ್ತಕ ಮಾಡಿದ ಮೋಡಿ). ಜಾನ್ ರಸ್ಕಿನ್‌ರ 'ಅನ್‌ಟು ದಿಸ್ ಲಾಸ್ಟ್' ಓದಿ ಗಾಂಧೀಜಿಯ ಬಾಳು ಬೇರೆಯಾಯಿತು. ಅದೇ ಗಾಂಧೀಜಿಯ ಚರಿತ್ರೆ ಓದಿ ಲಕ್ಷ್ಮಣ ಗೋಲೆ ಎಂಬ ಅಪರಾಧಿಯ ಬಾಳು ಬದಲಾಯಿತು.

(ಕೃಪೆ : 'ನಂದಿನಿ' (ಅವಕಾಶವಂಚಿತರ) ಪತ್ರಿಕೆ. ಚನ್ನೈ–ಮೇ–೨೦೧೧)

* * *

ಜನತೆ ಸರ್ವೋಚ್ಚ, ಪಾರ್ಲಿಮೆಂಟಲ್ಲ

– ಅರವಿಂದ ಕೇಜ್ರೀವಾಲ್

ದುರದೃಷ್ಟವಶಾತ್ ಭಾರತದಲ್ಲಿ ಸಂಸತ್ತಿನ ಕಾರ್ಯಕಲಾಪಗಳ ಮೇಲೆ ಜನತೆಯ ಯಾವ ನಿಯಂತ್ರಣವೂ ಇಲ್ಲ. ೧೯೦೮ರಲ್ಲಿ ಗಾಂಧೀಜಿ 'ಹಿಂದ್ ಸ್ವರಾಜ್'ದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಬಗ್ಗೆ ಬರೆದಿದ್ದರು. "ಪಾರ್ಲಿಮೆಂಟ್‌ಗಳ ಮಾತೆ ಎಂಬುದಾಗಿ ಯಾವುದನ್ನು ನೀವು ಭಾವಿಸಿದ್ದೀರೋ ಅದು ಬಂಜೆ ಹೆಂಗಸು ಮತ್ತು ವೇಶ್ಯೆಯಂತೆ ಇದೆ. ಈ ಎರಡು ಶಬ್ದಗಳು ಒರಟು, ಆದರೆ ವಿಷಯಕ್ಕೆ ಸರಿಯಾಗಿದೆ. ಸಂಸತ್ ತನ್ನ ಸ್ವಪ್ರೇರಣೆಯಿಂದ ಒಂದೇ ಒಂದು ಒಳ್ಳೆಯದನ್ನು ಮಾಡಿಲ್ಲ. ಆದ್ದರಿಂದ ನಾನದನ್ನು ಬಂಜೆ ಹೆಂಗಸಿಗೆ ಹೋಲಿಸಿದ್ದೇನೆ. ಅದು ಆಗಾಗ್ಗೆ ಬದಲಾಗುವ ಮಂತ್ರಿಗಳ ನಿಯಂತ್ರಣದಲ್ಲಿ ಇರುವುದರಿಂದ ವೇಶ್ಯೆ ಎಂದು ಕರೆದಿದ್ದೇನೆ." ನಿಜ ಸಂಗತಿ ಏನೆಂದರೆ ಸದಸ್ಯರು ಆಷಾಢಭೂತಿಗಳು ಮತ್ತು ಸ್ವಾರ್ಥಿಗಳೆಂದು ಸಾಮಾನ್ಯವಾಗಿ ಒಪ್ಪಲಾಗಿದೆ. ಪ್ರತಿಯೊಬ್ಬ ಸದಸ್ಯನೂ ತನ್ನ ಸಂಕುಚಿತ ಸ್ವಾರ್ಥದ ಬಗ್ಗೆಯೇ ಆಲೋಚಿಸುತ್ತಾನೆ. ಭಯವೇ ದಾರಿ ಸೂಚಕ ಪ್ರೇರಣೆಯಾಗಿದೆ. ಬಹುಮುಖ್ಯ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಸದಸ್ಯರು ಮೈಮುರಿಯುತ್ತಿರುವುದು ಮತ್ತು ತೂಕಡಿಸುತ್ತಿರುವುದು ಕಂಡು ಬರುತ್ತದೆ. ಕೆಲವೊಂದು ಸಲ ಕೇಳುಗರು ಹತಾಶೆಗೊಳ್ಳುವವರೆಗೆ ಸದಸ್ಯರು ಮಾತನಾಡುತ್ತಲೇ ಹೋಗುತ್ತಾರೆ. ಕ್ಯಾರಿಲಿ ಸಂಸತ್ತನ್ನು ಮಾತುಕತೆಯ ಜಾಗತಿಕ ಅಂಗಡಿ ಎಂದು ಕರೆದಿದ್ದಾರೆ.

ಸದಸ್ಯರು ಆಲೋಚನಾ ರಹಿತರಾಗಿ ತಮ್ಮ ಪಕ್ಷಕ್ಕೆ ಮತ ಹಾಕುತ್ತಾರೆ. ತಥಾಕಥಿತ ಶಿಸ್ತು ಅವರನ್ನು ಪಕ್ಷಕ್ಕೆ ಕಟ್ಟಿ ಹಾಕುತ್ತದೆ. ಯಾವುದೇ ಸದಸ್ಯ ಅಪವಾದಾತ್ಮಕವಾಗಿ ಸ್ವತಂತ್ರ ಮತ ಚಲಾಯಿಸಿದರೆ ಅವನನ್ನು ಧರ್ಮಭ್ರಷ್ಟ ಎಂದು ಭಾವಿಸಲಾಗುತ್ತದೆ. 'ಸಂಸತ್ ದೇಶದ ದುಬಾರಿ ಆಟಿಕೆ ಸಾಮಾನು' ಈ ಅಭಿಪ್ರಾಯಗಳು ನನಗೆ ಯಾವುದೇ ಕಾರಣದಿಂದ ವಿಶೇಷವಾದುದಲ್ಲ. ಇಂಗ್ಲೆಂಡಿನ ಅನೇಕ ಚಿಂತಕರು ಅವುಗಳನ್ನು ವ್ಯಕ್ತಪಡಿಸಿದ್ದಾರೆ.

ಬ್ರಿಟಿಷ್ ಪಾರ್ಲಿಮೆಂಟ್ ಬಗ್ಗೆ ಗಾಂಧೀಯವರ ಅಭಿಪ್ರಾಯಗಳು ಇಂದು ಭಾರತೀಯ ಸಂಸತ್ತಿಗೆ ಎಷ್ಟರ ಮಟ್ಟಿಗೆ ಅನ್ವಯಿಸುತ್ತದೆ ಎಂಬುದನ್ನು ಪರಿಶೀಲಿಸುವುದು ಉಪಯುಕ್ತಕರವಾಗುವುದು. ಜಗತ್ತಿನಲ್ಲಿಯೇ ಭಾರತ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದೆಲ್ಲಾ ಹೇಳಲಾಗುತ್ತದೆ. ನಮ್ಮದು ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ದೇಶವಾದ ಮಾತ್ರಕ್ಕೆ ಅದು ಅತ್ಯಂತ ದೊಡ್ಡ ಪ್ರಜಾಪ್ರಭುತ್ವವಾಗಿದೆ. ಐದು ವರ್ಷಕ್ಕೊಮ್ಮೆ ಮತಹಾಕುವುದುರ ಹೊರತಾಗಿ ಆಡಳಿತದ ಬಗ್ಗೆ ಜನರಿಗೆ ಹೇಳುವುದಕ್ಕೆ ಬೇರೆ ಏನಾದರೂ ಇದೆಯೇ. ನಮಗೆ ಸಾರ್ವತ್ರಿಕ ಮತದಾನವಿದೆ. ಆದರೆ ಆ ಕಾರಣ ಒಂದರಿಂದಲೇ ಪ್ರಜಾಪ್ರಭುತ್ವ ಎಂದು ಕರೆಯಬಹುದೇ. ಐದು ವರ್ಷಗಳಿಗೊಮ್ಮೆ ನಾವು ಯಾರೊಬ್ಬರನ್ನು ಆರಿಸುತ್ತೇವೆ. ಅದರೆ ಮುಂದಿನ ಐದು ವರ್ಷಗಳಲ್ಲಿ ನನಗಾಗಲೀ

ಅಥವಾ ನಮ್ಮ ಪ್ರತಿನಿಧಿಗಾಗಲಿ ಸಂಸತ್ತಿನಲ್ಲಿ ಯಾವುದೇ ಅಭಿಪ್ರಾಯವಿರುವುದಿಲ್ಲ. ಆ ಪ್ರತಿನಿಧಿ ನನ್ನ ಬಳಿಗೆ ಬರುವುದಿಲ್ಲ ಅಥವಾ ಸಂಸತ್ತಿನಲ್ಲಿ ಮತಹಾಕುವ ಮೊದಲು ನ್ನನೊಂದಿಗೆ ಪರಾಮರ್ಶಿಸುವುದಿಲ್ಲ. ಚುನಾವಣೆಗಳ ನಂತರ ತನ್ನ ಪಕ್ಷದ ಆದೇಶಗಳಿಗೆ ಒಳಗಾಗುವುದು ಶಾಸನ ಬದ್ಧ ಕರ್ತವ್ಯವಾಗಿರುತ್ತದೆ ಮತ್ತು ವಿವಿಧ ವಿಷಯಗಳ ಬಗ್ಗೆ ಜಾರಿಮಾಡಲಾಗುವ ಶಿಸ್ತಿನ ಆದೇಶಕ್ಕೆ ಒಳಪಟ್ಟು ಮತ ಹಾಕುತ್ತಾರೆ.

ಲೋಕಸಭಾ ಸದಸ್ಯರು ತಮ್ಮ ಪಕ್ಷಗಳ ಜೀತದಾಳುಗಳಂತೆ ಆಗುತ್ತಾರೆ. ಯಾರಾದರೂ ಪಕ್ಷಕ್ಕೆ ವಿರೋಧವಾಗಿ ಮಾತನಾಡುವ ಧೈರ್ಯ ಮಾಡಿದಲ್ಲಿ ಅಂಥವರು ತಮ್ಮ ಸದಸ್ಯತ್ವ ಕಳೆದುಕೊಳ್ಳಬಹುದು. ಉದಾಹರಣೆಗೆ ಇಂದಿನ ಲೋಕಸಭೆಯಲ್ಲಿ ಕಾಂಗ್ರೆಸ್‌ಗೆ ೨೦೭ ಸದಸ್ಯರಿದ್ದಾರೆ. ಅವರಲ್ಲಿ ಯಾರೊಬ್ಬರೂ ಸ್ವತಂತ್ರವಾಗಿ ಯೋಚನೆ ಮಾಡಲಾರರು. ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧೀ ತೀರ್ಮಾನಿಸುವಂತೆ ಮತ ಚಲಾಯಿಸಬೇಕಾಗುತ್ತದೆ. ಅದೇ ರೀತಿ ಭಾರತೀಯ ಜನತಾ ಪಕ್ಷ ೧೧೪ ಜನರನ್ನು ಹೊಂದಿದೆ. ಆ ಪಕ್ಷದ ಅಧ್ಯಕ್ಷ ನಿತಿನ್ ಗಡ್ಕರಿ ತೀರ್ಮಾನಿಸುವಂತೆ ಮತ ಚಲಾಯಿಸಬೇಕಾಗುತ್ತದೆ. ಇಲಿಯಾಸ್ ಆಜ್ಮಿ ಮಾಜಿ ಲೋಕಸಭಾ ಸದಸ್ಯ ಹೇಳುವಂತೆ ಲೋಕಸಭೆ ಚೆಸ್ ಬೋರ್ಡಿನಂತಿದೆ. ಅದರ ಮೇಲೆ ೫೪೨ ಕಾಯಿಗಳಿವೆ. ಅವು ಕೆಲವೇ ರಾಜಕೀಯ ಪಕ್ಷಗಳ ನಾಯಕರಿಂದ ನಿಯಂತ್ರಿಸಲ್ಪಟ್ಟಿವೆ.

ಎರಡು ಚುನಾವಣೆಗಳ ಮಧ್ಯೆ ದೇಶವು ಆಡಳಿತ ಪಕ್ಷದ ನಾಯಕರ ಸರ್ವಾಧಿಕಾರಕ್ಕೆ ಒಳಗಾಗುವುದಿಲ್ಲವೆ? ಈ ಕೆಲ ಪುರುಷರು ಮತ್ತು ಮಹಿಳೆಯರು ಮುಂದಿನ ಐದು ವರ್ಷಗಳ ವರೆಗೆ ಸಂಸತ್ತನ್ನು ನಿಯಂತ್ರಿಸುವುದರ ಜೊತೆಗೆ ಕಾರ್ಯಾಂಗವನ್ನು ನಿಯಂತ್ರಿಸುತ್ತಾರೆ. ಅವರು ಹಣಬಲ ಅಥವಾ ಬೇರೆ ಇತರ ಪ್ರಭಾವಕ್ಕೆ ಒಳಗಾಗುತ್ತಾರೆ. ಈ ನಾಯಕರು ಯಾರಿಗೆ ಬದ್ಧರಾಗಿರುತ್ತಾರೆ? ಅವರು ಯಾರಿಗೂ ಬದ್ಧರಾಗಿರುವುದಿಲ್ಲ. ಇದೊಂದು ಭಯಾನಕ ಪರಿಸ್ಥಿತಿ. ಆದ್ದರಿಂದ ಪ್ರತಿ ಐದು ವರ್ಷಕ್ಕೊಮ್ಮೆ ನಮ್ಮಲ್ಲಿ ಚುನಾವಣಾ ನಾಟಕ ನಡೆಯುತ್ತದೆ. ತನ್ಮೂಲಕ ದೇಶದ ನಿಯಂತ್ರಣವನ್ನು ಕೆಲವೇ ವ್ಯಕ್ತಿಗಳ ಕೈಗೆ ಒಪ್ಪಿಸುತ್ತೇವೆ. ಎಲ್ಲ ಪಕ್ಷಗಳ ನಾಯಕರ ಮಧ್ಯೆ ಒಂದು ರೀತಿಯ ಸೊಗಸಾದ ಒಪ್ಪಂದವಿರುತ್ತದೆ. ಅವರು ಕೇವಲ ನಾಮಕಾವಸ್ತೆ ಭಿನ್ನ ಮತ್ತು ಬೇರೆ. ಇದು ಜನತೆಗೆ ಹೇಳುವುದಕ್ಕಾಗಿ. ತೆರೆಯ ಮರೆಯಲ್ಲಿ ಅವರೆಲ್ಲ ಒಂದೇ ಒಗ್ಗಟ್ಟು ಉಳ್ಳವರು ಮತ್ತು ಸಹಜೀವಿಗಳು. ಅವರು ಸಾರ್ವಜನಿಕವಾಗಿ ಒಬ್ಬರನ್ನೊಬ್ಬರು ಬೈಯ್ದಾಡುತ್ತಾರೆ. ಆದರೆ ಅಧಿಕಾರಕ್ಕೆ ಬಂದ ಮೇಲೆ ಒಬ್ಬರೊನ್ನೊಬ್ಬರು ಶಿಕ್ಷಿಸುವುದಿಲ್ಲ. ಹಾಗಿಲ್ಲದೇ ಇರುವುದರಿಂದ ಬೋಫೋರ್ಸ್ ಹಗರಣ ತನ್ನ ಅಂತಿಮ ತೀರ್ಮಾನಕ್ಕೆ ಬರುವುದೆಂದು ಹೇಗೆ ಸಮರ್ಥಿಸಲು ಸಾಧ್ಯ? ಆಡಳಿತ ಪಕ್ಷ ವಿರೋಧ ಪಕ್ಷದಲ್ಲಿ ಇರುವವರ ಸಂಬಂಧಿಗಳಿಗೆ ಗುತ್ತಿಗೆ ಕೊಟ್ಟು ಅವರನ್ನು ಖುಷಿಯಲ್ಲಿಟ್ಟಿರುತ್ತದೆ. ಹೀಗೆ ಸಂಸತ್ ಆಧಾರಿತ ಪ್ರಜಾಪ್ರಭುತ್ವ ಇಂದಿನ ಸ್ವರೂಪದಲ್ಲಿ ದೇಶವನ್ನು ಲೂಟಿಮಾಡಲು ಸರಾಗವಾಗಿ ಚಲಿಸುವ ಯಂತ್ರದಂತಿದೆ. ಸಾರ್ವಜನಿಕ ಹಿತಾಸಕ್ತಿ ಕೇವಲ ಆಕಸ್ಮಿಕ. ಸಂಸತ್ ತನ್ನ ಸದಸ್ಯರ ದುಃಖ ದುಮ್ಮಾನಗಳಿಗೆ ಸ್ಪಂದಿಸುವಂತೆ ಜನರ ಕಷ್ಟಸುಖಗಳಿಗೆ ಸ್ಪಂದಿಸುತ್ತದೆಯೇ?

ಕೃಷಿ ಮಂತ್ರಿ ಶರದ್ ಪವಾರ್‌ಗೆ ಏಟು ಬಿದ್ದಾಗ ಸಂಸತ್ ಅಮೂಲ್ಯವಾದ

ಎರಡು ಗಂಟೆಕಾಲ ದುಃಖದಿಂದ ಬಿಕ್ಕಳಿಸಿತು. ಆದರೆ ರೈತರು ಆತ್ಮಹತ್ಯೆ ಮಾಡಿಕೊಂಡಾಗ, ಪೋಲೀಸರ ಗುಂಡೇಟಿನಿಂದ ಸತ್ತಾಗ, ಐ.ಪಿ.ಎಸ್. ಅಧಿಕಾರಿ ನರೇಂದ್ರ ಕುಮಾರ್‌ನನ್ನು ಕೊಲೆಮಾಡಿದಾಗ ಇದೇ ಪಾರ್ಲಿಮೆಂಟ್ ಈ ವಿಷಯಗಳ ಬಗ್ಗೆ ಕೆಲ ನಿಮಿಷಗಳನ್ನು ವ್ಯಯಿಸಲಿಲ್ಲ. ಲೋಕಪಾಲ್ ಮಸೂದೆ ಬಗ್ಗೆ ೪೨ವರ್ಷ ಚರ್ಚಿಸುತ್ತಾರೆ. ಆದರೂ ಅದನ್ನು ಕಾನೂನಾಗಿ ಮಾಡುವುದಿಲ್ಲ! ತಮ್ಮ ಸಾರಿಗೆ ಸಂಬಳ ಇತ್ಯಾದಿಗಳನ್ನು ಕೆಲವೇ ನಿಮಿಷಗಳಲ್ಲಿ ಹೆಚ್ಚಿಸಿಕೊಳ್ಳುತ್ತಾರೆ. ಇನ್ನು ನಾವು ಇಂದಿನ ಪಾರ್ಲಿಮೆಂಟಿನ ಸ್ವರೂಪದತ್ತ ಗಮನಹರಿಸೋಣ. ಲೋಕಸಭೆಯಲ್ಲಿ ೧೬೨ ಸದಸ್ಯರು, ರಾಜ್ಯಸಭೆಯಲ್ಲಿ ೪೦ಕ್ಕೂ ಹೆಚ್ಚು ಸದಸ್ಯರು ಕ್ರಿಮಿನಲ್ ಕೇಸುಗಳನ್ನು ಹೊಂದಿದ್ದಾರೆ. ಇನ್ನುಳಿದ ಅನೇಕರು ಭ್ರಷ್ಟಾಚಾರದ ಆಪಾದನೆಗಳನ್ನು ಎದುರಿಸುತ್ತಿದ್ದಾರೆ. ಹಾಗಿದ್ದ ಮೇಲೆ ಅಪರಾಧಿಗಳಿಗೆ ಶಿಕ್ಷೆ ಕೊಡುವಂಥ ನ್ಯಾಯ ಪದ್ಧತಿಯನ್ನು ಬಲಪಡಿಸುವ ವಿಧೇಯಕ ಸ್ವೀಕೃತಿಯಾಗುತ್ತದೆ ಎಂದು ಹೇಗೆ ನಿರೀಕ್ಷಿಸಲು ಸಾಧ್ಯ.

ಸ್ವ ಆಸಕ್ತಿಗಳ ಮಧ್ಯೆ ನೇರ ಸಂಘರ್ಷವಿದೆ. ಈ ಮೂಲಭೂತ ಪ್ರಶ್ನೆಗಳನ್ನು ಎತ್ತಿದರೆ ಸಂಸತ್ತಿನ ಪರಮಾಧಿಕಾರವನ್ನು ಪ್ರಶ್ನಿಸಲಾಯಿತೆಂದು ಹೆದರಿಸಲಾಗುತ್ತದೆ.

ಅತ್ಯಂತ ದೊಡ್ಡ ಸಮಸ್ಯೆಯೇನೆಂದರೆ ಪಾರ್ಲಿಮೆಂಟ್ ಸಂಪೂರ್ಣವಾಗಿ ಜನರಿಂದ ಬೇರ್ಪಡಿಸಲ್ಪಟ್ಟಿದೆ. ಪಾರ್ಲಿಮೆಂಟಿನ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸುವುದಕ್ಕೆ ಅನುಕೂಲವಾಗುವ ವ್ಯವಸ್ಥೆಯಿಲ್ಲ. ಆದ್ದರಿಂದ ನಿರ್ದಿಷ್ಟ ವಿಷಯಗಳ ಬಗ್ಗೆ ಕಾನೂನು ರಚಿಸುವಂತೆ ಆಗಲಿ ಮತ್ತು ಬೇರೆ ತೆರನಾದ ಕಾನೂನುಗಳ ರಚನೆ ಮಾಡದಂತೆ ನಿರ್ದೇಶನ ಕೊಡಲು ಜನರಿಗೆ ಅವಕಾಶವಿಲ್ಲವಾಗಿದೆ.

ಜನತೆಯೇ ಪರಮೋಚ್ಚವೇ ಹೊರತು ಪಾರ್ಲಿಮೆಂಟಲ್ಲ. ಆದರೆ ದುರ್ದೈವವಶಾತ್ ಭಾರತೀಯ ವ್ಯವಸ್ಥೆಯಲ್ಲಿ ಜನತೆಗೆ ಪಾರ್ಲಿಮೆಂಟಿನ ನಡುವಳಿಕೆಯ ಮೇಲೆ ನಿಯಂತ್ರಣವಿಲ್ಲ. ಅನೇಕ ದೇಶಗಳಲ್ಲಿ ಜನಾಭಿಪ್ರಾಯ ಸಂಗ್ರಹದ ಮೂಲಕ ಅಲ್ಲಿಯ ಜನತೆ ಪಾರ್ಲಿಮೆಂಟ್ ಕೈಗೊಂಡ ಕಾನೂನುಗಳ ತಿದ್ದುಪಡಿಗೆ ಅಥವಾ ಅವುಗಳ ನಿರಾಕರಣೆಗೆ ಅವಕಾಶವಿದೆ. ಜನರೇ ಸ್ವತಃ ಸ್ವಪ್ರೇರಣೆಯಿಂದ ಕಾನೂನನ್ನು ರಚಿಸಬಹುದಾಗಿದೆ. ಇದರಿಂದ ಜನರೆ ನೇರವಾಗಿ ಮಧ್ಯ ಪ್ರವೇಶಿಸುವಂತಾಗಲು ಸಾಧ್ಯವಾಗುತ್ತದೆ. ಅಲ್ಲದೆ ಅದರಿಂದ ಪಾರ್ಲಿಮೆಂಟ್ ಸದಾ ಆತಂಕದಲ್ಲಿ ಇರುತ್ತದೆ. ಭಾರತದಲ್ಲಿ ಪ್ರಾರಂಭಿಕ ಪ್ರಯೋಗವಾಗಿ ಪ್ರತಿಯೊಬ್ಬ ಸದಸ್ಯ ಮಸೂದೆಯ ಕರಡು ಪ್ರತಿಯನ್ನು ತನ್ನ ಕ್ಷೇತ್ರದ ಹಳ್ಳಿಗಳಿಗೆ ಮತ್ತು ಪೌರಸಭಾ ವಾರ್ಡುಗಳಿಗೆ ಏಕೆ ಕಳುಹಿಸಬಾರದು? ತುಂಬಾ ವ್ಯಾಪಕ ಪರಿಣಾಮ ಬೀರುವಂತ ವಿಧೇಯಕಗಳಿಂದ ಈ ಕ್ರಮವನ್ನು ಪ್ರಾರಂಭಿಸಬಹುದು. ಪ್ರತಿಯೊಂದು ಹಳ್ಳಿ ಮತ್ತು ವಾರ್ಡ್‌ನಲ್ಲಿಯ ಜನ ಗ್ರಾಮಸಭೆ ನಡೆಸಿ ಆ ವಿಧೇಯಕದ ವಿಷಯಗಳನ್ನು ಚರ್ಚಿಸಲಿ ಮತ್ತು ತಮ್ಮ ಪ್ರತಿನಿಧಿಗೆ ಅಭಿಪ್ರಾಯಗಳನ್ನು ತಿಳಿಸಲಿ. ಎಲ್ಲ ಗ್ರಾಮಸಭೆಗಳಿಂದ ಮತ್ತು ಮೊಹಲ್ಲಾ ಸಭೆಗಳಿಂದ ಬಂದ ಸಲಹೆಗಳನ್ನು ಕ್ರೋಢೀಕರಿಸಿ ಆ ಸದಸ್ಯ ಪಾರ್ಲಿಮೆಂಟ್‌ನಲ್ಲಿ ಅದನ್ನು ತನ್ನ ಅಭಿಪ್ರಾಯ ಎಂದು ಮಂಡಿಸಲಿ. ತನ್ನ ಪಕ್ಷದ ಆದೇಶಗಳಿಂದ ಬಿಡುಗಡೆ ಹೊಂದಲಿ ಇದು ನಿಜವಾದ ಪ್ರಜಾಪ್ರಭುತ್ವ

(ಅನು : ಸುಕೌ)

ಚಿಪ್ಕೋ ಆಂದೋಲನದ ವಿಮರ್ಶೆ

– ಮೂಲ : ಜಾರ್ಜ್ ಆಲ್‌ಫ್ರೆಡ್ ಜೇಮ್ಸ್ – ಕನ್ನಡಕ್ಕೆ : ಸುರೇಂದ್ರ ಕೌಲಗಿ

(ಕಳೆದ ಸಂಚಿಕೆಯಿಂದ)

ಸಾಮಾಜಿಕ ವಿಜ್ಞಾನಿ ರಾಮಚಂದ್ರ ಗುಹಾ ಸುಂದರಲಾಲ್ ಬಹುಗುಣರ ಚಿಪ್ಕೋ ಆಂದೋಲನದಂಥ ಸಾಮಾಜಿಕ ಚಳುವಳಿಗಳನ್ನು ಸಮಾಜ ವಿಜ್ಞಾನದ ದೃಷ್ಟಿಯಿಂದ ಅಧ್ಯಯನ ಮಾಡಿದ್ದಾರೆ. ಆ ಅಧ್ಯಯನದ ಅಂಗವಾಗಿ ಚಿಪ್ಕೋ ಚಳುವಳಿಯ ನೇತೃತ್ವದ ರಚನೆ, ಅದನ್ನು ರೂಪಿಸುವ ಕ್ರಮಗಳು ಹಾಗೂ ಅದರ ಘನೀಕೃತ ತಾತ್ವಿಕ ವಿಚಾರಗಳ ಬಗ್ಗೆ ಗಮನ ಸೆಳೆಯುವುದರ ಜೊತೆಗೆ ನಾಯಕ ಮತ್ತು ಅವನ ಅನುಯಾಯಿಗಳ ಸಂಬಂಧದ ಮೇಲೆ ಬೆಳಕು ಚೆಲ್ಲುತ್ತಾರೆ. ಆ ಆಂದೋಲನದಲ್ಲಿ ತೊಡಗಿರುವವರ ಜೀವನದಲ್ಲಿ ಆದ ಬದಲಾವಣೆಯನ್ನು ತೋರಿಸುತ್ತಾರೆ. ಗತಕಾಲದ ರೈತಾಪಿ ಜನ ಮತ್ತು ರಾಜ್ಯದೊಂದಿಗಿನ ಸಂಬಂಧದ ಬಗ್ಗೆ ನಡೆದ ಚಳುವಳಿಗಳೊಂದಿಗೆ ಚಿಪ್ಕೋ ಆಂದೋಲನದ ಸಂಬಂಧವನ್ನು ತೋರಿಸುತ್ತಾರೆ. ಸುಂದರಲಾಲ್‌ರ ಪ್ರಕಾರ ಚಿಪ್ಕೋ ಆಂದೋಲನಕ್ಕೆ ನಾಲ್ಕು ಪ್ರಕಾರದ ಗುಣದರ್ಶನಗಳಿವೆ. ಅವುಗಳಲ್ಲಿ ಮೊಟ್ಟ ಮೊದಲನೆಯದು ಪಾದಯಾತ್ರೆ, ಈಗಾಗಲೇ ತಿಳಿಸಲಾಗಿರುವಂತೆ ಬಹುಗುಣರಿಗೆ ಗಾಂಧೀ ವಿಚಾರದ ಪ್ರಚಾರಕ್ಕೆ ಪಾದಯಾತ್ರೆಯ ಕಲ್ಪನೆ ವಿನೋಬಾರಿಂದ ಬಂದುದಾಗಿತ್ತು. ಅವರ ಪ್ರಕಾರ ಪಾದಯಾತ್ರೆಗೆ ತುಂಬಾ ಪ್ರಭಾವಕಾರಿ ಇತಿಹಾಸವಿದೆ. ಬುದ್ಧ, ಶಂಕರಾಚಾರ್ಯ, ಏಸು ಮತ್ತು ಗಾಂಧೀಯವರ ಕೆಲಸಗಳಲ್ಲಿ ಪಾದಯಾತ್ರೆ ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ತೆಹರಿ ಪ್ರದೇಶದಲ್ಲಿಯ ಹಳ್ಳಿಗಳಲ್ಲಿ ಪರಸ್ಪರ ಸಂಪರ್ಕ ಸೀಮಿತವಾದುದರಿಂದ ಪಾದಯಾತ್ರೆಯ ಪದ್ಧತಿ ಪರ್ವತ ಪ್ರದೇಶದ ಪರಿಸ್ಥಿತಿಗೆ ಅನುಕೂಲಕರವಾಗಿತ್ತು. ಪಾದಯಾತ್ರೆ ಸಂದರ್ಭದಲ್ಲಿ ಚಳುವಳಿಗಾರರು ಜನರನ್ನು ಭೇಟಿಯಾಗಲು ಸಾಧ್ಯವಿತ್ತು. ಜೀಸಸ್ ಪಾದಯಾತ್ರೆ ವೇಳೆಯಲ್ಲಿ ಜನರೊಂದಿಗೆ ಮುಖಾಮುಖಿಯಾಗಿ ಮಾತನಾಡಿದರು. ಅವರು ಎಂದೂ ವಾಹನದಲ್ಲಿ ಪ್ರವಾಸ ಮಾಡಲಿಲ್ಲ. ಸುಂದರಲಾಲ್ ಕೈಗೊಳ್ಳುತ್ತಿದ್ದ ಪಾದಯಾತ್ರೆಯಂತೂ ವಿಶೇಷವಾಗಿ ಪ್ರಚೋದನಕಾರಿ ಸಾಹಸವೇ ಆಗಿತ್ತು. ಅವರು ಪಾದಯಾತ್ರೆಯನ್ನು ವಿಶೇಷ ಮಹತ್ವದ ದಿನದಂದು ಪ್ರಾರಂಭಿಸುತ್ತಿದ್ದರು. ತನ್ಮೂಲಕ ಪಾದಯಾತ್ರೆ ಮಹತ್ವವನ್ನು ಹೆಚ್ಚಿಸುತ್ತಿದ್ದರು. ಉದಾಹರಣೆಗೆ ಮೇ–೨೫–೧೯೭೪. ಅದು ದೇವಸುಮನ್‌ರ ಜನ್ಮ ದಿನದ ವರ್ಷ. ಅವರ ಪ್ರೇರಣೆಯಿಂದಾಗಿಯೇ ಸುಂದರಲಾಲ್ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದು ಮತ್ತು ಗಾಂಧೀಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು. ಈ ದಿನದಂದು ಅನೇಕ ಯುವಕರು ಐತಿಹಾಸಿಕವೆನ್ನಬಹುದಾದ ಪಾದಯಾತ್ರೆಯನ್ನು ಕೈಗೊಂಡು ಉತ್ತರಾಖಂಡದ ಪೂರ್ವ ಭಾಗದಲ್ಲಿಯ ಆಸ್ಕೇಟ್ ಹಳ್ಳಿಯಿಂದ ಪಶ್ಚಿಮ ದಿಕ್ಕಿನಲ್ಲಿರುವ ಹಿಮಾಚಲಪ್ರದೇಶದ ಆರ್ಕೋಟ್‌ವರೆಗೆ ಪಾದಯಾತ್ರೆ ಮಾಡುತ್ತಿದ್ದರು. ಸುಂದರಲಾಲ್

ಈ ಯಾತ್ರೆಯ ಬಹುಭಾಗದಲ್ಲಿ ಭಾಗವಹಿಸುತ್ತಿದ್ದರು. ಜಾನಪದ ವಾದ್ಯ ಮತ್ತು ಹಾಡುಗಾರರೊಂದಿಗೆ ಪ್ರತಿಯೊಂದು ಹಳ್ಳಿಯನ್ನು ಪ್ರವೇಶಿಸುತ್ತಿದ್ದರು. ಇದು ಆಸಕ್ತರನ್ನು ಬರಮಾಡಿಕೊಳ್ಳುತ್ತಿತ್ತು. ಪಾದಯಾತ್ರೆ ಸಂದರ್ಭದಲ್ಲಿ ಪಾದಯಾತ್ರಿಗಳು ತಮ್ಮೆಲ್ಲರ ಒಳಿತಿಗಾಗಿಯೇ ಕಾಡನ್ನು ಉಳಿಸುವ ಅಗತ್ಯವನ್ನು ತಿಳಿಹೇಳುತ್ತಿದ್ದರಲ್ಲದೆ ಸರ್ಕಾರದ ನೀತಿಯಿಂದ ಆಗುತ್ತಿದ್ದ ಹಾನಿಗಳ ಬಗ್ಗೆ ತಿಳಿಹೇಳುತ್ತಿದ್ದರು. ಸಂಜೆಯಲ್ಲಿ ಗ್ರಾಮಸ್ಥರ ಸಭೆ ಸೇರಿಸಿ ಚಿಪ್ಕೋ ಚಳುವಳಿಯ ಕಥೆಯನ್ನು ಮತ್ತು ಅದರ ಸಾಧನೆಯನ್ನು ತಿಳಿಸುತ್ತಿದ್ದರು. ಈ ಪಾದಯಾತ್ರೆ ೪೫ ದಿನ ನಡೆಯಿತು. ಪಾದಯಾತ್ರೆ ಹೋದ ಎಡೆಯಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗುತ್ತಿತ್ತು. ಪಾದಯಾತ್ರೆಗೆ ಕಾರಣವಾದ ವಿಷಯದ ಬಗ್ಗೆ ಗಂಭೀರ ಚಿಂತನೆಯ ಅಲೆಯನ್ನು ಉಂಟುಮಾಡುತ್ತಿತ್ತು. ಅನೇಕ ಬಾರಿ ವಿದ್ಯಾರ್ಥಿಗಳು ಮತ್ತು ಮಹಿಳೆಯರೇ ಪಾದಯಾತ್ರೆಗಳನ್ನು ಆಯೋಜಿಸುತ್ತಿದ್ದರು. ಈ ಪಾದಯಾತ್ರೆಗಳು ಭೂಕುಸಿತ ಮತ್ತು ನೆರೆಹಾವಳಿಯಿಂದ ತುತ್ತಾದ ಪ್ರದೇಶಗಳಲ್ಲಿ ನಡೆಯುತ್ತಿದ್ದವು. ಭೂಕುಸಿತ ಮತ್ತು ನೆರೆಹಾವಳಿಗಳು ಉಂಟಾಗುವುದರ ಕಾರಣಗಳನ್ನು ತಿಳಿಸುತ್ತ ಅವುಗಳನ್ನು ತಡೆಯುವ ರಣನೀತಿಯ ಬಗ್ಗೆ ತಿಳಿಸುತ್ತಿದ್ದರು. ೧೯೭೫ರಿಂದ ೧೯೭೭ರ ವರೆಗೆ ಈ ಎರಡು ವರ್ಷಗಳ ಅವಧಿಯಲ್ಲಿ ಪಾದಯಾತ್ರೆಗಳಂಥ ಕಾರ್ಯಕ್ರಮಗಳ ಮೂಲಕ ಬಹುಗುಣರು ೪೨೦೦ ಕಿ.ಮಿ.ಗಳಷ್ಟು ದೂರ ನಡೆದಿದ್ದಾರೆ. ಈ ರೀತಿ ಸುಂದರಲಾಲ್ ಮತ್ತು ಸಹೋದ್ಯೋಗಿಗಳು ಚಿಪ್ಕೋ ಆಂದೋಲನದ ಸಂದೇಶ ಗುಡ್ಡಗಾಡು ಪ್ರದೇಶದ ಪ್ರತಿಯೊಂದು ಹಳ್ಳಿಗೂ ತಲುಪಲು ಸಾಧ್ಯವಾಯಿತು. ಚಿಪ್ಕೋ ಆಂದೋಲನದ ಸಂದೇಶ ಹರಡಲು ಇನ್ನೊಂದು ಬಲವಾದ ಸಾಧನ ಈ ಮೊದಲು ತಿಳಿಸಿದಂತೆ ಜಾನಪದ ಗೀತೆಗಳ ಹಾಡುವಿಕೆ ಮತ್ತು ವಾದ್ಯಗಳು. ಸುಂದರಲಾಲ್ ೧೯೭೫ರಲ್ಲಿ ಚಿಪ್ಕೋ ಆಂದೋಲನಕ್ಕಾಗಿ ಮೊದಲ ಪಾದಯಾತ್ರೆ ಪ್ರಾರಂಭಿಸಿದಾಗ ಗಡವಾಲ್ ಜಾನಪದ ಹಾಡುಗಾರ ಮತ್ತು ಕವಿ ಘನಶ್ಯಾಮ್ ಶೈಲಾನಿ ಅವರೊಂದಿಗಿದ್ದರು. ಜಾನಪದ ಹಾಡುಗಳ ಕಾರಣದಿಂದಾಗಿ ಚಿಪ್ಕೋ ಎಂಬ ಶಬ್ದ ಮನೆಮಾತಾಯಿತು. ಅಲಕ್‌ನಂದಾ ಮತ್ತು ಮಂದಾಕಿನಿ ನದಿಗಳು ಸಂಗಮವಾಗುವ ಸ್ಥಳ ರುದ್ರಪ್ರಯಾಗ. ಅಲ್ಲಿ ಶೈಲಾನಿ ಬಸ್ ಮೇಲೆ ತಮ್ಮ ಹಾರ್ಮೋನಿಯಂ ಜೊತೆಗೆ ಹತ್ತಿದರು. ಮೇಲೆ ಕುಳಿತುಕೊಂಡು ಹಾರ್ಮೋನಿಯಂ ಬಾರಿಸುತ್ತ ಹಾಡಲಾರಂಭಿಸಿದರು. ಅಲ್ಲಿ ಶೈಲಾನಿಯವರು ಆಶು ಜಾನಪದ ಗೀತೆಯನ್ನು ಬರೆದು ಹಾಡಲಾರಂಭಿಸಿದರು. ಹಾಡಿನ ಹೆಸರು ಚಿಪ್ಕೋ. ಆ ಹಾಡೇ ನಂತರ ಚಳುವಳಿಯ ಉದ್ಘೋಷ ಗೀತೆಯಾಯಿತು. ಅದರ ಭಾವಾನುವಾದ ಈ ರೀತಿ ಇದೆ.

ಅಣ್ಣ ತಮ್ಮಂದಿರೇ ಎಚ್ಚೆತ್ತುಕೊಳ್ಳೋಣ!
ಅರಣ್ಯ ಇಲಾಖೆ ಆಗಿದೆ ಕಾಡಿನ ವೈರಿ
ಅಪ್ಪಿಕೊಳ್ಳಿರಿ ಮರಗಳನು
ಕೊಡಲಿಯಿಂದ ದೂರ ಉಳಿಸಿರಿ ಅವುಗಳ
ಕಾಡಿನ ಐಸಿರಿ ಲೂಟಿಯಾಗದಿರಲಿ.

ಶೈಲಾನಿಯವರು ಅನೇಕ ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದ ಆ ಜನಪದ ಗೀತೆ ಕ್ರಮೇಣ ಪ್ರಾಮುಖ್ಯತೆ ಪಡೆಯಿತು. ಜೊತೆಯಲ್ಲಿ ಆಂದೋಲನವೂ

ಬೆಳೆಯಿತು. ಶೈಲಾನಿಯವರ ಹಾಡುಗಳು ಮರಗಳ ಮಹತ್ವವನ್ನು ಮತ್ತು ಸರ್ಕಾರದ ಕಠೋರ ಅರಣ್ಯ ನೀತಿಯನ್ನು ಹಾಗೂ ಮರಗಳ ರಕ್ಷಣೆಯ ಮಹತ್ವವನ್ನು ಕಾಡಿನ ವಿನಾಶದ ಅಪಾಯವನ್ನು ಮತ್ತು ಹೊಸ ಮರಗಳನ್ನು ನೆಡುವುದರ ಅಗತ್ಯವನ್ನು ಸಾರುತ್ತಿದ್ದವು. ಅವರ ಹಾಡುಗಳಲ್ಲಿ ಭಾರತದ ಧಾರ್ಮಿಕ ಸಾಹಿತ್ಯದಲ್ಲಿ ಪ್ರಸ್ತಾಪಿತವಾಗಿರುವ ಮರಗಳ ಉಲ್ಲೇಖ ಇರುತ್ತಿತ್ತು. ಮರಗಳ ಪೂಜೆಯ ವಿಚಾರ ಇರುತ್ತಿತ್ತು. ಒಂದು ಮರದ ಪೂಜೆ ಹತ್ತು ಮಕ್ಕಳಿಗೆ ಸಮವೆಂದು ಹೇಳಲಾಗುತ್ತಿತ್ತು. ಕೃಷ್ಣ ಮತ್ತು ಶ್ರೀರಾಮನಿಂದ ಮರಗಳ ಬಗ್ಗೆ ಇದ್ದ ಮೆಚ್ಚುಗೆಯನ್ನು ಪ್ರಸ್ತಾಪಿಸಲಾಗಿತ್ತು. ಕಾಡುಗಳು ವೇದ ಮತ್ತು ಪುರಾಣಗಳ ಜನ್ಮಸ್ಥಾನವೆಂದು ಹೇಳಲಾಗಿತ್ತು. ತಮ್ಮ ಚಿಪ್ಕೋ ಆಂದೋಲನದ ಸಂದೇಶವನ್ನು ಜನರಿಗೆ ತಲುಪಿಸಲು ಜಾನಪದ ಗೀತೆಗಳು ಅತಿ ಪರಿಣಾಮಕಾರಿಯೆಂದು ಬಹುಗುಣರಿಗೆ ಕಂಡು ಬಂದಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಅವರ ಮಟ್ಟಿಗೆ ಘನಶ್ಯಾಮ್ ಶೈಲಾನಿ ಚಿಪ್ಕೋ ಚಳುವಳಿಯ ಆತ್ಮವೇ ಆಗಿದ್ದರು. ಜಾನಪದ ಗೀತೆಗಳ ಲಯ, ತಾಳ, ಪ್ರಾಸ ಮುಂತಾದವುಗಳು ಕಳೆದುಹೋಗಿವೆಯಾದರೂ ಅವುಗಳಲ್ಲಿಯ ವೈವಿಧ್ಯಮಯ ಕಲ್ಪನೆ ಉಳಿಯುತ್ತದೆ. ಈ ಕೆಳಗಿನ ಗೀತೆ ಅರಣ್ಯದ ಪಾವಿತ್ರ್ಯತೆ ಮತ್ತು ಜನರ ಜೀವನದಲ್ಲಿ ಅದರ ಅರ್ಥ ಇತ್ಯಾದಿಗಳೆಲ್ಲವೂ ಸರ್ಕಾರದ ನೀತಿಯ ಮಗ್ಗುಲಲ್ಲಿ ಇದ್ದು ನಗ್ನ ಸತ್ಯವನ್ನು ಬಿಂಬಿಸುತ್ತವೆ.

ಬೆತ್ತಲೆಯ ಭೂಮಿಗೆ ಬಟ್ಟೆ ನೇಯಲು
ನೆಡಿರಿ ಹೊಸ ಮರಗಳನ್ನು, ಸೃಸ್ಟಿಸಿ ಹೊಸ ಕಾಡುಗಳನ್ನು
ಮುಂಬರಲಿರುವ ಭೂಮಿ ವಿಪತ್ತನ್ನು ತಪ್ಪಿಸಲು
ಬನ್ನಿ ಬನ್ನಿ, ಎಲ್ಲ ಬನ್ನಿ. ಮತ್ತೊಂದಾಗಿ.
ಅರಣ್ಯಗಳೇ ನಮ್ಮ ಜೀವಾತ್ಮ
ಅವಾಗಿವೆ ನದಿಗಳ ಜನ್ಮದಾತೆ
ಜನ್ಮ ತಾಳಿವೆ ಅಲ್ಲಿ ಬುಗ್ಗೆ ಮತ್ತು ವರ್ಷ
ಅವುಗಳಿಂದಾಗಿಯೇ ಇವೆ ಮಣ್ಣು, ನೀರು, ಗಾಳಿ
ಮರಗಳಿಗಿದೆ ಭಗವಂತನಾಶೀರ್ವಾದ
ಅವುಗಳ ಕಷ್ಟ ತಪ್ಪಿಸಲು ಆತ ಅವತರಿಸಿದ್ದನೊಮ್ಮೆ
ಅರಣ್ಯ ರಕ್ಷಣೆಯ ಚಿಂತೆ ಇಲ್ಲದ ಮರಪೂಜೆ ಅಂಧವಿಶ್ವಾಸ
ಉತ್ತರಾಖಂಡವಾಗಿತ್ತೊಮ್ಮೆ ಧರೆಯ ಮೇಲಿನ ಸ್ವರ್ಗ
ಅರಣ್ಯಗಳಲ್ಲಿ ಉದಯಿಸಿದವು ವೇದ ಪುರಾಣಗಳು
ಹೃದಯವಿಹೀನ ಮರಕಾಮುಕರನ್ನು
ಓಡಿಸಲು ಬನ್ನಿ ಎಲ್ಲರೂ ಒಂದಾಗಿ,
ಇದೇ ನಮ್ಮ ಇಂದಿನ ಧರ್ಮ.

ಚಿಪ್ಕೋ ಚಳುವಳಿಯ ಜನಪ್ರಿಯತೆಗೆ ಅರ್ಧಕ್ಕಿಂತಲೂ ಹೆಚ್ಚ ಶ್ರೇಯಸ್ಸು ಜಾನಪದ ಹಾಡುಗಾರರಿಗೆ ಸಲ್ಲುತ್ತದೆ ಮತ್ತು ವಿಶೇಷವಾಗಿ ಶ್ರೀ ಘನಶ್ಯಾಮ್ ಶೈಲಾನಿಯವರದೆಂದು ಬಹುಗುಣ ಹೇಳುತ್ತಾರೆ.

(ಮುಂದುವರಿಯುವುದು...)

ಬೋಳುವಾರು ಮಹಮದ್ ಕುಂಞ್ಞಿರವರ ವಿಚಾರ ಲಹರಿ

• ಇಂದಿನ ಭಾರತದ ಸಾಮಾಜಿಕ ಸ್ಥಿತಿ ಹಾಗೂ ನಿಮ್ಮ 'ಸ್ವಾತಂತ್ರ್ಯದ ಓಟ' ಕಾದಂಬರಿಯ ಸಮಕಾಲೀನತೆ ಬಗ್ಗೆ ತಿಳಿಸಿ.

ಭಾರತದ ಸಾಮಾಜಿಕ ಸ್ಥಿತಿಗೇನು ಕೊರತೆಯಾಗಿದೆ? ಭೂಮಂಡಲದಲ್ಲಿರುವ ಅತ್ಯಂತ ಹೆಚ್ಚು ಹಣವಂತರಲ್ಲಿ ನಮ್ಮವರೇ ಮೊದಲ ಪಂಕ್ತಿಯಲ್ಲಿದ್ದಾರೆ. ಭುವನ ಸುಂದರಿಯರು ಯಾರೆಂದು ಕೇಳಿದರೆ ಅದೂ ನಮ್ಮವರು. ಮಾನವ ಜನಾಂಗಕ್ಕೆ ಸೊನ್ನೆ ಕೊಟ್ಟವರೂ ನಾವೇ. ಈ ಭೂಲೋಕದಲ್ಲಿ ಸದ್ಯ ಚಾಲ್ತಿಯಲ್ಲಿರುವ ಜ್ಞಾನ ಭಂಡಾರಗಳನ್ನೆಲ್ಲ ಸೃಷ್ಟಿಸಿದವರು ನಾವು. ಬದುಕಿನ ಎಲ್ಲ ಪ್ರಶ್ನೆಗಳಿಗೂ ನಮ್ಮ ಧರ್ಮಗ್ರಂಥಗಳಲ್ಲಿ ಉತ್ತರಗಳನ್ನು ಕೊಟ್ಟಿರುತ್ತೇವೆ. ಇಡೀ ಬ್ರಹಾಂಡವನ್ನೇ ಕ್ಷಣಮಾತ್ರದಲ್ಲಿ ಬೂದಿಯಾಗಿಸುವಷ್ಟು ಮಾರಕಾಸ್ತ್ರಗಳನ್ನು ಇಟ್ಟುಕೊಂಡೇ ಜಗತ್ತಿಗೆ ಶಾಂತಿ ಮಂತ್ರವನ್ನು ಬೋಧಿಸುವವರೂ ನಾವೇ. ಅನ್ನ, ನೀರು ಬಿಟ್ಟು ಕೋಮುವಾರು ಜಾತಿ, ಉಪಜಾತಿಗಳ ನಾಮಸ್ಮರಣೆಯೊಂದಿಗೆ ಮಂದಿರ ಮಸೀದಿಗಳನ್ನು ಕಟ್ಟುವ ಮತ್ತು ಕೆಡಹುವ ಭರವಸೆಗಳೊಂದಿಗೆ ನಮ್ಮನ್ನಾಳುವ ಸರಕಾರಗಳನ್ನು ಕಟ್ಟುವ ಮತ್ತು ಪರಸ್ಪರ ಕಾಲೆಳೆದು ಉರುಳಿಸುವ ಸೇವೆ ಮಾಡುತ್ತಿರುವರೂ ನಾವೇ! ಪ್ರಸ್ತುತ ಕಾದಂಬರಿಯಲ್ಲಿ ಬರುವ ಚಡ್ಡಿ ಅನಂತಣ್ಣನವರು ತಮ್ಮ ಗೆಳೆಯ ಚಾಂದಚ್ಚನವರಿಗೆ ಹೇಳಿದ ಒಂದು ತಮಾಷೆಯ ಪ್ರಸಂಗವನ್ನು ನಿಮಗಿಲ್ಲಿ ಹೇಳಿದರೆ ನನ್ನ ಮಾತು ಹೆಚ್ಚು ಅರ್ಥವಾದೀತು. ಅದು ದಸರಾ ನಾಡ ಹಬ್ಬದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಮುತ್ತುಪ್ಪಾಡಿ ಆಚಾರ್ಯರ ಕಪ್. ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾಟದ ಬಳಿಕ ನಡೆದ ಹಗರಣವೊಂದು ಹಾಗೂ ಹೀಗೂ ಸುಖಾಂತ್ಯವಾದಾಗ ಹೇಳಿದ ಪ್ರಸಂಗ. ಇನ್ನು ನಿಮ್ಮ ಪ್ರಶ್ನೆಯ ಎರಡನೆಯ ಭಾಗ; ಪ್ರಸ್ತುತ ಕೃತಿಯ ಸಮಕಾಲೀನತೆ ಬಗ್ಗೆ. 'ಸ್ವಾತಂತ್ರ್ಯದ ಓಟ' ವೆಂಬುದು ಸರ್ವಕಾಲೀನ. ಅದು ಕೊನೆಮೊದಲಿಲ್ಲದ ಓಟ. ಈ ಓಟದಲ್ಲಿ ಭಾಗವಹಿಸಿದವರೆಲ್ಲ ಕೊನೆ ಗೆರೆಯವರೆಗೆ ಜೊತೆಗೆ ಬರುತ್ತಾರೆಂಬ ಗ್ಯಾರಂಟಿ ಇಲ್ಲ. ಬಹುತೇಕ ಮಂದಿ ಆಯಾಸಗೊಂಡು ಅಲ್ಲಲೆ ಫೌಲ್ ಆಗಿ ನಿರ್ಗಮಿಸುತ್ತಾರೆ. ಓಟ ನಿಲ್ಲಿಸಲೊಲ್ಲದ ಹಟವಾದಿಗಳೂ ಗೆರೆ ಮುಟ್ಟುವುದಿಲ್ಲ. ಯಾಕೆಂದರೆ ಪ್ರಸ್ತುತ ಸ್ವಾತಂತ್ರ್ಯದ ಓಟಕ್ಕೆ ಕೊನೆ ಗೆರೆಯೆಂಬುದೇ ಇರುವುದಿಲ್ಲ. ಇದು ನಿತ್ಯ, ನಿರಂತರ ಓಟ. ಈ ಕೃತಿ 'ಇದು ಹೀಗೆಯೇ ಇರುತ್ತದೆ' ಎಂದು ನಿಘಂಟಾಗಿ ತಿಳಿಸುವ ಮತ್ತೊಬ್ಬ ಭಗವಂತ ಹೇಳಿದ ಧರ್ಮಗ್ರಂಥವಲ್ಲ. 'ಹೀಗಿದ್ದರೆ ಚೆನ್ನಾಗಿತ್ತೇನೋ' ಎಂಬ ಆಸೆಯಿಂದ ಬಯಸಿ, ಜನತಾ ನ್ಯಾಯಾಲಯದಲ್ಲಿ ನೋಂದಾಯಿಸಲಾಗಿರುವ 'ಸಾರ್ವಜನಿಕ ಹಿತಾಸಕ್ತಿಯ ಅರ್ಜಿ'.

• ಒಬ್ಬ ಮುಸ್ಲಿಂ ಬರಹಗಾರನಾಗಿ, ಮುಖ್ಯವಾಹಿನಿಯಿಂದ ಬಹುತೇಕ ಮುಸ್ಲಿಮರು ಪ್ರತ್ಯೇಕತೆ ಕಾಯ್ದುಕೊಂಡಿರು ಬಗ್ಗೆ ನಿಮ್ಮ ಅನಿಸಿಕೆ ಏನು?

ಈ ಪ್ರಶ್ನೆಗೆ ಈ ಸಲ ತಮಾಷೆಯಾಗಿ ಉತ್ತರಿಸಬಾರದು ಎಂದುಕೊಂಡಿದ್ದೇನೆ.

ಗಂಭೀರವಾಗಿ ಕೇಳುತ್ತಿದ್ದೇನೆ; ಮುಖ್ಯವಾಹಿನಿ ಎಂದರೇನು? ಈ ಪ್ರಶ್ನೆಯ ಉದ್ದೇಶ, ಹಿಂದೂ ಮುಖ್ಯವಾಹಿನಿಯಿಂದ ಮುಸ್ಲಿಮರು ಪ್ರತ್ಯೇಕತೆ ಕಾಯ್ದುಕೊಂಡಿದ್ದಾರೆ ಅಂತ ಆಗಿದ್ದರೆ ನನ್ನ ಉತ್ತರ ಹೀಗಿದೆ: ಯಾವ ಕಾರಣಕ್ಕೆ ಮುಸ್ಲಿಂ ಮುಖ್ಯವಾಹಿನಿಯಿಂದ ಹಿಂದೂಗಳು ಪ್ರತ್ಯೇಕತೆಯನ್ನು ಕಾಯ್ದುಕೊಂಡಿದ್ದಾರೋ, ಅದೇ ಕಾರಣಕ್ಕೆ ಮುಸ್ಲಿಮರು ಹಿಂದೂ ಮುಖ್ಯವಾಹಿನಿಯಿಂದ ಪ್ರತ್ಯೇಕತೆ ಕಾಯ್ದುಕೊಂಡಿದ್ದಾರೆ. ಎಲ್ಲ ಧರ್ಮಗಳೂ, ಎಲ್ಲ ಜಾತಿಗಳೂ, ಎಲ್ಲ ಪಂಗಡಗಳೂ ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಂಡಿರುವುದರಿಂದಲೇ ಅವು ಇನ್ನೂ ಜೀವಂತವಾಗಿರುವುದು.

ಒಂದು ವೇಳೆ ಪ್ರಶ್ನೆಯ ಉದ್ದೇಶ, ಸನಾತನ ಹಿಂದೂ ದೇಶದ ಮುಖ್ಯವಾಹಿನಿಯಿಂದ ಹಿಂದೂಸ್ತಾನದ ಮುಸ್ಲಿಮರು ಪ್ರತ್ಯೇಕತೆ ಕಾಯ್ದುಕೊಂಡಿದ್ದಾರೆ ಅಂತ ಆಗಿದ್ದರೆ ನನ್ನ ಉತ್ತರ: ಹಿಂದೂಸ್ತಾನದ ಮುಸ್ಲಿಮರಿಗೆ ಸನಾತನ ಹಿಂದೂ ದೇಶದ ಬಗ್ಗೆ ನಂಬಿಕೆ ಇಲ್ಲ. ಅವರಿಗೆ ಭರವಸೆಯಿರುವುದು ದೇಶದ ಸಂವಿಧಾನದಲ್ಲಿ.

ಒಂದು ವೇಳೆ ಪ್ರಶ್ನೆಯ ಉದ್ದೇಶ, 'ನಮ್ಮ ದೇಶದ' ಮುಖ್ಯಾವಾಹಿನಿಯಿಂದ ನಮ್ಮ ದೇಶದ ಮುಸ್ಲಿಮರು ಪ್ರತ್ಯೇಕತೆ ಕಾಯ್ದುಕೊಂಡಿದ್ದಾರೆ ಅಂತ ಆಗಿದ್ದರೆ ನನ್ನ ಉತ್ತರ ಹೀಗಿದೆ: 'ನಮ್ಮ ದೇಶ'ದಲ್ಲಿ ಹಿಂದೂಗಳು, ಮುಸ್ಲಿಮರು, ಕಿರಿಸ್ತಾನರು ಅಂತ ವಿಭಾಗವಿರಲು ಸಾಧ್ಯವಿಲ್ಲ. ಪಕ್ಷ ಚುನಾವಣಾ ಪ್ರಣಾಳಿಕೆಗಳಲ್ಲಿ ಪ್ರಿಂಟಾಗಿರುವ ಸವಲತ್ತು, ಮೀಸಲಾತಿ, ತುಷ್ಟೀಕರಣ, ಕಾಮನ್ ಸಿವಿಲ್ ಕೋಡ್ ಇತ್ಯಾದಿ ಆಕರ್ಷಕ ಪದಬಂಧಗಳಿಗೆ ಕಾದಂಬರಿಯ ಕೊನೆಯಲ್ಲಿ ನೀಡಲಾಗಿರುವ ಉತ್ತರಗಳನ್ನು ಗಮನಿಸಬಹುದು.

• 'ಸ್ವಾತಂತ್ರ್ಯದ ಓಟ'ದ ಆಕಾರ ಹಾಗೂ ಮಾಹಿತಿ ಅರಸುತ್ತಾ ನಿಮ್ಮ ಮುತ್ತುಪ್ಪಾಡಿಯಿಂದ ಎಲ್ಲೆಲ್ಲ ಓಡಿಯಾಡಿದ್ದೀರಿ?

ಮುತ್ತುಪ್ಪಾಡಿಯಿಂದ ಹೊರಗೆ ಏನಿದೆ ಮಣ್ಣು? ಹೊರಗೇಕೆ ಓಡಾಡಬೇಕು? ಹುಲುಸಾದ ಬೆಳೆ ತೆಗೆಯಬಹುದಾದ ಮಣ್ಣು ಇರುವುದು ನನ್ನ ಮುತ್ತುಪ್ಪಾಡಿಯಲ್ಲಿ ಮಾತ್ರ. ಇದು ನನ್ನ ಮಾತೃಭೂಮಿ. ಕೃತಿಯ ಮುನ್ನುಡಿಯಲ್ಲೇ ನಿವೇದಿಸಿಕೊಂಡಿರುತ್ತೇನೆ. ಸುಮಾರು ನಾಲ್ಕು ದಶಕಗಳ ಕೆಳಗೆ ಬರೆಯಲು ಆರಂಭಿಸಿದಾಗ ನನ್ನೆದುರು ಹಲವು ಲೋಕಗಳಿದ್ದವು; ಆದ್ದರಿಂದಲೇ, ನನ್ನ ಕಥಾಪಾತ್ರಗಳ ಬದುಕಿಗಾಗಿ ಮುತ್ತುಪ್ಪಾಡಿ ಎಂಬ ನನ್ನದೇ ಆದ ಲೋಕವೊಂದನ್ನು ಕಟ್ಟಿಕೊಂಡಿದ್ದೆ. ಮುತ್ತುಪ್ಪಾಡಿಯ ತುಂಬ ಮನುಷ್ಯರನ್ನು, ಅವರಿಗೆ ನಂಬಲೆಂದು ದೇವರುಗಳನ್ನು, ಪೂಜಿಸಲು ಮಂದಿರಗಳನ್ನು, ಪ್ರಾರ್ಥಿಸಲು ಮಸೀದಿಗಳನ್ನು, ಆಡಲು ಬಯಲುಗಳನ್ನು, ಕವಾಯಿತಿಗೆ ಮೈದಾನಗಳನ್ನು, ಆಳಲು ಪೋಲೀಸರನ್ನು, ವಂದಿಸಲು ಧ್ವಜಗಳನ್ನು, ಈಜಲು ಹೊಳೆಗಳನ್ನು, ಹಾರಲು ಕೆರೆಗಳನ್ನು, ಮಲಗಲು ಆಸ್ಪತ್ರೆಗಳನ್ನು, ಸುಡಲು ಸ್ಮಶಾನಗಳನ್ನು, ಹೂಳಲು ಖಬರಸ್ತಾನಗಳನ್ನು.....ಹೀಗೆ ನಾಗರಿಕ ಜೀವನಕ್ಕೆ ಏನೇನು ಬೇಕೋ ಅವೆಲ್ಲವನ್ನೂ ಒದಗಿಸಿದ್ದೆ. ಆನಂತರ; ಮುತ್ತುಪಾಡಿಯ ಮನುಷ್ಯರಿಗೆ ಅವರಿಗಿಷ್ಟ ಬಂದಂತೆ ಬದುಕುವ ಸಂಪೂರ್ಣಸ್ವಾತಂತ್ರ್ಯ ಕೊಟ್ಟು ಅವರದೇ ಬದುಕಿನ ಕತೆಗಳನ್ನು ಒಂದೊಂದಾಗಿ ಬರೆದಿದ್ದೆ; ಇನ್ನು ಸಾಕು. ಅಂಕೆ ಸಂಖ್ಯೆಗಳ ಆಧಾರದಲ್ಲಿ ಇದು ನನ್ನ ಎರಡನೆಯ ಕಾದಂಬರಿ: ಇದುವರೆಗೆ ನಾನು ಬರೆದ ಮತ್ತು ಬರೆಯದೆ ಉಳಿದಿದ್ದ ಮುತ್ತುಪ್ಪಾಡಿಯ ಮನುಷ್ಯರ 'ಸ್ವಾತಂತ್ರ್ಯದ ಓಟಗಳ' ಕೊನೆಯ ಸುತ್ತು.

• ಸ್ವಾತಂತ್ರ್ಯದ ಓಟ ಕಾದಂಬರಿಯನ್ನು ಸಾಮಾಜಿಕವಾಗಿ ಚರ್ಚೆಗೆ ಒಳಪಡಿಸಲು ಯಾವ ರೀತಿಗಳಲ್ಲಿ ಪ್ರಯತ್ನಿಸುತ್ತಿದ್ದೀರಿ?

ಶುದ್ಧ ಸಾಹಿತ್ಯ ಕೃತಿಯ ಉದ್ದೇಶ ಮನಸ್ಸನ್ನು ಅರಳಿಸುವುದು ಮಾತ್ರವಾಗಿರಬೇಕು; ಕೆರಳಿಸುವುದಲ್ಲ. ಅವುಗಳ ಬಗೆಗಿನ ಚರ್ಚೆ, ಪರ–ವಿರೋಧ ವಾದಗಳೆಲ್ಲ ಪ್ರಚಾರ ಮತ್ತು ಲಾಭಗಳತ್ತ ಕಣ್ಣು ನೆಟ್ಟ ಧರ್ಮ ಸೂಕ್ಷ್ಮಗಳು. ನನ್ನ 'ಸ್ವಾತಂತ್ರ್ಯದ ಓಟ'ವೂ ಈ ಮಾತಿಗೆ ಹೊರತಲ್ಲ. ತಾನು ನಂಬಿದ ಸತ್ಯವನ್ನಷ್ಟೇ ಸತ್ಯವೆಂದು ವಾದಿಸುವವನೊಬ್ಬ, ತನ್ನದು ಸತ್ಯದ ಹುಡುಕಾಟವೆನ್ನುವುದು ಅಪ್ಪಟ ಸುಳ್ಳು. ಇದು, 'ನಾನು ಸತ್ಯವನ್ನೇ ಹೇಳುತ್ತೇನೆ, ನಾನು ಹೇಳುತ್ತಿರುವುದೆಲ್ಲ ಸತ್ಯ' ಎಂದು ಕಟಕಟೆಯಲ್ಲಿ ವಾದಿ–ಪ್ರತಿವಾದಿಗಳಿಬ್ಬರೂ ತಮ್ಮ ತಮ್ಮ ಧರ್ಮ ಗ್ರಂಥಗಳ ಮೇಲೆ ಕೈ ಇಟ್ಟು ಪ್ರಮಾಣ ಮಾಡಿದಂತೆ; ಸುಳ್ಳು ಹೇಳಲು ನಿರೀಕ್ಷಣಾ ಜಾಮೀನು ಪಡೆದಂತೆ. ಇಲ್ಲೇ ಒಂದು ಮಾತು ಸೇರಿಸಬೇಕು ಅನ್ನಿಸಿದೆ. 'ಸ್ವಾತಂತ್ರ್ಯದ ಓಟ' ಓದಿಕೊಂಡು ಸಾಮಾಜಿಕವಾಗಿ ಚರ್ಚಿಸಬೇಕಾದ ಸಮಾಜದವರು ಈಗಷ್ಟೇ ಓದು ಕಲಿಯಲು ಶುರುಮಾಡಿದ್ದಾರೆ. ಪುಸ್ತಕಗಳು ಕೊಳೆಯುವ ಮಾಲು ಅಲ್ಲದ್ದರಿಂದ ಮುಂದೆಂದಾದರೊಂದು ದಿನ ಅವರೂ ಓದುತ್ತಾರೆ; ನಂತರ ಅವರೂ ಸಾಮಾಜಿಕವಾಗಿ ಚರ್ಚಿಸುತ್ತಾರೆ. ಆಗ ನಾನಿರುವುದಿಲ್ಲವಾದ್ದರಿಂದ ನನ್ನ ಪ್ರಯತ್ನ ಅಪ್ರಸ್ತುತ.

• ಒಬ್ಬ ರಾಷ್ಟ್ರೀಯವಾದಿಯ ನೆಲೆಯ ಲೇಖಕರು ನೀವು. ಈ ಹಂತದಲ್ಲಿ ಏನಾದರೂ ಸಾಮಾಜಿಕ ಅಡ್ಡಿ ಆತಂಕ ಎದುರಿಸಬೇಕಾದ ಸಂದರ್ಭ ಬಂದಿದೆಯಾ?

ನಾನು 'ವಿಶ್ವವಾದಿ'ಯೆಂದು ಹೇಳಿದರೆ ಅದು ಹಾರಿಕೆಯ ಉತ್ತರವೆಂದು ನೀವು ನಗಬಹುದು. ಆದರೆ ಅದು ಸತ್ಯ. ಇದರ ಜೊತೆಗೇ ಇನ್ನೊಂದು ಮಾತು ಸೇರಿಸದಿದ್ದರೆ ಈ ದೇಶದ ಪ್ರಜೆಗಳಾಗಿರುವವರನ್ನು ಯಾವ ದೇವರೂ ಕ್ಷಮಿಸಲಿಕ್ಕಿಲ್ಲ. ಪ್ರತಿಯೊಬ್ಬರಿಗೂ ಅವರವರ ಧರ್ಮ, ದೇವರು, ಪೂಜೆ–ನಮಾಜುಗಳ ಅಧಿಕಾರವಿದೆ ಹೌದು. ಇದನ್ನು ಸಂವಿಧಾನವೂ ಸಮ್ಮತಿಸಿದೆ. ಆದರೆ ಸಂವಿಧಾನಕ್ಕಿಂತ ತಮ್ಮ ಸ್ವಂತ ನಂಬಿಕೆಗಳೇ ಮೇಲು ಎಂದು ಯಾರಾದರೂ ವಾದಿಸಿದರೆ ಅದು ಕ್ರಿಮಿನಲ್ ಕಲಮುಗಳಂತೆ ಅಪರಾಧವಾಗುತ್ತದೆ. ರಾಷ್ಟ್ರೀಯವಾದಿಯೇ ಇರಲಿ ಅಥವಾ ವಿಶ್ವವಾದಿಯೇ ಇರಲಿ, ಅವನಿಗೆ ಅಥವಾ ಅವಳಿಗೆ ರೇಷನ್ ಕಾರ್ಡ್ ಅಥವಾ ಪಾಸ್‌ಪೋರ್ಟ್ ಕೊಡಲು ಅಧಿಕಾರವಿರುವ ದೇಶದ ಲಿಖಿತ ಸಂವಿಧಾನಕ್ಕೆ, ದೇಶದ ಲಿಖಿತ ಕಾನೂನುಗಳಿಗೆ ಅವನು ಅಥವಾ ಅವಳು ತಗ್ಗಿಬಗ್ಗಿ ಶರಣಾಗಲೇಬೇಕು. ಇಲ್ಲದಿದ್ದರೆ ಜೈಲಿಗೆ ಹೋಗಬೇಕಾಗುತ್ತದೆ.

ಇನ್ನು ನಾನು ಎದುರಿಸಿದ್ದೇನೆಂದು ನೀವು ನಂಬುವ ಸಾಮಾಜಿಕ ಅಡ್ಡಿ ಆತಂಕಗಳ ಬಗ್ಗೆ ಅಂತಿಮ ಮಾತು: ಅಡ್ಡಿ ಆತಂಕಗಳನ್ನು ಎದುರಿಸಿದ್ದು ಹೌದು. ಆದರೆ ಅದು ನನ್ನ ಸಮಾಜದವರಿಂದ ಅಲ್ಲ. ನನಗೆ ಅಡ್ಡಿ ಆತಂಕಗಳನ್ನು ಒಡ್ಡುವವರನ್ನು ನನ್ನ ಸಮಾಜದವರೆಂದು ಹೇಳಲು ನಾನೇನು ಯೇಸು ಸ್ವಾಮಿಯೇ?

(ಸಂದರ್ಶನ : ಶ್ರೀಹರ್ಷ ಹೆಗಡೆ – ಸಾಭಾರ : ವಿಜಯ ಕರ್ನಾಟಕ)

* * *

ಶಿಕ್ಷಣ ಕ್ಷೇತ್ರದಲ್ಲೊಂದು ಸಾಹಸ ಪ್ರಯೋಗ

- ರವೀಂದ್ರ ಭಟ್ಟ

'ಆಕಾಶದೆತ್ತರಕ್ಕೆ ಬೆಳೆದಿದ್ದರೂ ಬೇರುಗಳು ಮೌಲ್ಯವೆಂಬ ಭೂಮಿಯಲ್ಲಿ ಗಟ್ಟಿಯಾಗಿರಬೇಕು'. ಗೋಪಾಲಕೃಷ್ಣ ಮತ್ತು ವಿಜಯಲಕ್ಷ್ಮಿ ತಮ್ಮ ಮಲೆಯಾಳಿ ಮಿಶ್ರಿತ ಇಂಗ್ಲಿಷ್‌ನಲ್ಲಿ ಗಟ್ಟಿಯಾಗಿಯೇ ಹೇಳಿದರು. ಭಾರತದ ಆಧುನಿಕ ಶಿಕ್ಷಣ ಪದ್ಧತಿಯನ್ನು ವಿರೋಧಿಸಿ ಕಳೆದ ೩೦ ವರ್ಷಗಳಿಂದ ಕೇರಳದ ಪಾಲಕ್ಕಾಡ್ ಜಿಲ್ಲೆಯ ಅಟ್ಟಪ್ಪಾಡಿ ಎಂಬ ಕುಗ್ರಾಮದಲ್ಲಿ ಪರ್ಯಾಯ ಶಾಲೆಯನ್ನು ನಡೆಸುತ್ತಿರುವ ಅವರು ಇತ್ತೀಚೆಗೆ ಮೈಸೂರಿಗೆ ಬಂದಿದ್ದರು. ನೈಸರ್ಗಿಕ ಕೃಷಿಯ ಜೊತೆಗೆ ಇಡೀ ನಮ್ಮ ಬದುಕೇ ಶಾಲೆ ಎನ್ನುವುದನ್ನು ಸಾಂಸ್ಕೃತಿಕ ರಾಜಧಾನಿಯ ಮಂದಿಗೆ ಹೇಳಿ ಹೋಗುವುದಕ್ಕೆ ಬಂದಿದ್ದರು.

ನೀವು ನಡೆಸುತ್ತಿರುವ ಪರ್ಯಾಯ ಶಾಲೆ ಯಶಸ್ವಿಯಾಗಿದೆಯಾ? ಎಂದು ಕೇಳಿದರೆ- "೧೯೮೨ರಲ್ಲಿ ಶಾಲೆ ಆರಂಭಿಸಿದಾಗ ೨೫ ಮಕ್ಕಳು ಇದ್ದರು. ಎಲ್ಲರೂ ಬಡವರ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು, ಅರ್ಧಕ್ಕೆ ಶಾಲೆ ಬಿಟ್ಟ ಮಕ್ಕಳು. ಈಗ ೭ ಮಕ್ಕಳು ಇದ್ದಾರೆ. ಯಶಸ್ಸನ್ನು ಅಳೆಯುವುದು ಹೇಗೆ" ಎನ್ನುವುದು ಅವರ ಮರು ಪ್ರಶ್ನೆ. ಅಂದಹಾಗೆ, ಶಾಲೆಯಲ್ಲಿ ಮಕ್ಕಳು ಕಡಿಮೆಯಾಗುವುದಕ್ಕೆ ಕಾರಣ ಏನು? ಎಂದರೆ- "ನಮ್ಮ ಪಾಲಕರು ತಮ್ಮ ಆಸ್ತಿಪಾಸ್ತಿ ಎಲ್ಲವನ್ನೂ ಬರೆದುಕೊಟ್ಟಾರು. ಆದರೆ ಮಕ್ಕಳ ಮೇಲೆ ಪ್ರಯೋಗ ಮಾಡಲು ಅವರು ಸುತಾರಾಂ ಸಿದ್ಧರಿಲ್ಲ" ಎಂದರು.

ಗೋಪಾಲಕೃಷ್ಣ ಮತ್ತು ವಿಜಯಲಕ್ಷ್ಮಿ ಇಬ್ಬರು ಒಂದು ಕಾಲದಲ್ಲಿ ಸರ್ಕಾರಿ ಶಿಕ್ಷಕರಾಗಿದ್ದವರು. ಗೋಪಾಲಕೃಷ್ಣ ಐದು ವರ್ಷಗಳ ಕಾಲ ಶಿಕ್ಷಕರಾಗಿದ್ದರೆ, ವಿಜಯಲಕ್ಷ್ಮಿ ಅವರಿಗೆ ಹನ್ನೊಂದು ವರ್ಷ ಪಾಠ ಹೇಳಿದ ಅನುಭವ ಇದೆ. ಆದರೆ ತಾವು ಮಾಡುತ್ತಿರುವ ಕೆಲಸ ಇಬ್ಬರಿಗೂ ನಿರಾಶೆ ಉಂಟುಮಾಡಿತು. ಸರ್ಕಾರದ ಶಿಕ್ಷಣ ಪದ್ಧತಿಯಲ್ಲಿ ಮೌಲ್ಯಗಳೇ ಇಲ್ಲ. ಮಕ್ಕಳಲ್ಲಿ ಮಾನವೀಯತೆ ಬೆಳೆಯುವುದಿಲ್ಲ. ದಿನ ನಿತ್ಯದ ಬದುಕಿಗೆ ಬೇಕಾಗುವ ಯಾವುದೇ ಅಂಶ ಈ ಶಿಕ್ಷಣ ಪದ್ಧತಿಯಲ್ಲಿ ಇಲ್ಲ. ಅತ್ಯಂತ ಅವೈಜ್ಞಾನಿಕವಾದ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಂಡಿರುವ ನಾವು ಅನುಪಯುಕ್ತ ಜನಾಂಗವನ್ನು ಸೃಷ್ಟಿ ಮಾಡುತ್ತಿದ್ದೇವೆ ಎಂದು ಈ ದಂಪತಿಗೆ ಅನ್ನಿಸಿದ್ದೇ ತಡ ಇಬ್ಬರೂ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದರು, ಪರ್ಯಾಯ ಶಾಲೆ ಆರಂಭಿಸಿದರು.

'ಸಾರಂಗ ಪರ್ಯಾಯ ಶಾಲೆ'ಯಲ್ಲಿ ಕೊಠಡಿಗಳಿಲ್ಲ. ತರಗತಿಗಳಿಲ್ಲ. ಪರೀಕ್ಷೆಗಳಿಲ್ಲ. ಯಾವುದೇ ಸರ್ಕಾರ ಅಥವಾ ಶೈಕ್ಷಣಿಕ ಸಂಸ್ಥೆ, ವಿಶ್ವವಿದ್ಯಾಲಯದ ಮಾನ್ಯತೆಯೂ ಇದಕ್ಕಿಲ್ಲ. ಈ ಶಾಲೆಯಿಂದ ಹೊರ ಬಂದ ಮಕ್ಕಳಿಗೆ ಸರ್ಕಾರ ಅಥವಾ ವಿಶ್ವವಿದ್ಯಾಲಯ ಪ್ರಮಾಣ ಪತ್ರವನ್ನು ನೀಡುವುದಿಲ್ಲ. ರ್‍ಯಾಂಕ್, ಅಂಕ ಯಾವುದೂ ಇಲ್ಲ. ಆದರೆ ಇಲ್ಲಿ ಶಿಕ್ಷಣ ಪಡೆದು ಬಂದವನು ಎಲ್ಲಿಯಾದರೂ ಬದುಕಬಲ್ಲ. ಸ್ವಾಭಿಮಾನಿಯಾಗಬಲ್ಲ. ತನ್ನ ಕಾಲ ಮೇಲೆ ತಾನು ನಿಂತು ಇನ್ನೂ ಕೆಲವು ಜನರ ಬದುಕಿಗೆ ಆಸರೆಯಾಗಬಲ್ಲ.

ಮನುಷ್ಯ ಎಂದರೆ ಹಣ ಸಂಪಾದಿಸುವ ಯಂತ್ರವಲ್ಲ. ಮಾನವೀಯತೆಯೇ

ಇಲ್ಲವಾದರೆ ಮನುಷ್ಯನ ಬದುಕಿಗೆ ಅರ್ಥ ಏನು? ಅದಕ್ಕೇ ನಾವು ಪದವೀಧರರನ್ನು ತಯಾರು ಮಾಡುವುದಿಲ್ಲ. ಮನುಷ್ಯರನ್ನು ತಯಾರು ಮಾಡುತ್ತೇವೆ. ಹಾಗೆ ನೋಡಿದರೆ, ನಮ್ಮ ಶಾಲೆಯಲ್ಲಿ ಮನುಷ್ಯರನ್ನು ತಯಾರು ಮಾಡುವುದಿಲ್ಲ. ಮಕ್ಕಳು ಇಲ್ಲಿ ಮನುಷ್ಯರಾಗಿ ತಾವೇ ಬೆಳೆಯುತ್ತಾರೆ ಎನ್ನುತ್ತಾರೆ ಈ ದಂಪತಿ. ಹನ್ನೆರಡು ಎಕರೆ ಜಮೀನು ಅವರ ಶಾಲೆ. ಅಲ್ಲಿ ನೈಸರ್ಗಿಕ, ಸಾವಯವ ಕೃಷಿ ಇದೆ. ಜೀವವೈವಿಧ್ಯದ ಪಾಠ ಇದೆ. ಇಲ್ಲಿನ ಪಠ್ಯಕ್ರಮದಲ್ಲಿ ಮೌಲ್ಯ, ಸಂಸ್ಕೃತಿ, ಜಲಾನಯನ, ಕಾಡಿನ ಬೆಂಕಿ ತಡೆ, ಮಣ್ಣಿನ ರಕ್ಷಣೆ, ಭೂಮಿ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ತಂತ್ರಜ್ಞಾನ, ಕಲೆ, ಸಾಹಸ ಕಲೆ, ಭಾಷೆ, ಪರಿಸರ ಸ್ನೇಹಿ ಇಂಧನ, ಮಾನವ ಭೌತವಿಜ್ಞಾನ, ಲೈಂಗಿಕ ಶಿಕ್ಷಣ, ಹದಿಹರೆಯ, ಪ್ರಾಥಮಿಕ ಔಷಧಿ, ಅಡುಗೆ, ಮನೆ ನಿರ್ವಹಣೆ, ಸಂಪನ್ಮೂಲಗಳ ಸಕಾರಾತ್ಮಕ ಬಳಕೆ, ರಾಜಕೀಯ, ಪ್ರಾಥಮಿಕ ಮೂಲ ಅರ್ಥಶಾಸ್ತ್ರ, ನಾಣ್ಯ, ಶಿಕ್ಷಣ ಎಲ್ಲವೂ ಇವೆ. ಮಕ್ಕಳ ಆತ್ಮವಿಶ್ವಾಸ ಅಭಿವೃದ್ಧಿಗೆ, ಸೃಜನಶೀಲತೆಗೆ ಮತ್ತು ಸಕಾರಾತ್ಮಕ ಆಲೋಚನೆಗಾಗಿ ಕಳರಿಪಯಟ್‌ನಂತಹ ಸಾಹಸ ಕಲೆಗಳನ್ನು ಕಲಿಸಿಕೊಡಲಾಗುತ್ತದೆ. ನೃತ್ಯ, ಯೋಗ, ಸಂಗೀತಗಳೂ ಇವೆ.

ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಪದವಿ ಪಡೆದ ಒಬ್ಬ ವ್ಯಕ್ತಿಯನ್ನು ಕಚೇರಿ ನಿರ್ವಹಣೆಗೆ ಸೇರಿಸಿದರೆ ಆತ ವಿಫಲನಾಗುತ್ತಾನೆ. ಒಬ್ಬನೇ ಹೋಗಿ ಬ್ಯಾಂಕ್ ಖಾತೆ ತೆರೆಯುವುದು ಆತನಿಗೆ ಗೊತ್ತಿರುವುದಿಲ್ಲ. ನೀರು, ವಾಯು, ಇಂಧನ ನಿರ್ವಹಣೆ ಗೊತ್ತಿರುವುದಿಲ್ಲ. ಬಿ.ಕಾಂ ಮಾಡಿದವನನ್ನು ಕರೆದು ತಂದು ಯಾವುದಾದರೂ ಕಚೇರಿಯ ಲೆಕ್ಕ ಪತ್ರ ನೋಡು ಎಂದರೆ ಆತ ಸುಮ್ಮನಾಗುತ್ತಾನೆ. ಕೃಷಿ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದು ಬಂದವನಿಗೆ ನೇಗಿಲು ಹಿಡಿಯಲು ಬರುವುದಿಲ್ಲ. ಪಶು ವೈದ್ಯನಾದವನಿಗೆ ಹಾಲು ಕರೆಯಲು ಬರುವುದಿಲ್ಲ. ಆತನ ಬಳಿ ಪದವಿ ಇದೆ. ಪ್ರಮಾಣ ಪತ್ರ ಇದೆ. ಆದರೆ ನಿಜವಾದ ಕೌಶಲವೇ ಇಲ್ಲ. ಸಾರಂಗ ಶಾಲೆ ಬದುಕುವ ಕೌಶಲವನ್ನು ಕಲಿಸಿಕೊಡುತ್ತದೆ. 'ಬದುಕು ಮತ್ತು ಬದುಕಲು ಬಿಡು' ಎನ್ನುವುದು ಸಾರಂಗ ಶಾಲೆಯ ಮುಖ್ಯ ತತ್ವ ಶಿಕ್ಷಣ ಎಲ್ಲ ಕಡೆ ಎಲ್ಲ ಕಾಲದಲ್ಲಿಯೂ ಸಿಗುತ್ತದೆ. ದಿನದ ೨೪ ಗಂಟೆ ೩೬೫ ದಿನಗಳ ಪ್ರತಿ ಕ್ಷಣ ಕೂಡ ಕಲಿಯುವುದಕ್ಕೆ ಒಂದು ಅವಕಾಶ. ನಾವು ನೋಡುವ, ಕೇಳುವ, ಮುಟ್ಟುವ, ಮೂಸುವ, ರುಚಿ ನೋಡುವ, ನಮ್ಮ ಸಂಪರ್ಕಕ್ಕೆ ಬರುವ ಎಲ್ಲದರಲ್ಲೂ ಶಿಕ್ಷಣ ಇದೆ. ಚಲನಚಿತ್ರ, ಜಾಹೀರಾತು, ಸುದ್ದಿ, ಮಾತು, ಅಭಿನಯ, ಜನ ಎಲ್ಲರಿಂದಲೂ ನಾವು ಕಲಿಯಬಹುದು ಅಥವಾ ಕಲಿಯಲೇ ಬೇಕು. ಇದನ್ನೆಲ್ಲಾ ನಮ್ಮ ಶಾಲೆಗಳು ಕಲಿಸುತ್ತವೆಯೇ? ಇದು ಬಹುದೊಡ್ಡ ಪ್ರಶ್ನೆ.

ಸಾರಂಗ ಶಾಲೆಯ ಮೊದಲ ಪ್ರಯೋಗ ನಡೆದಿದ್ದು ಗೋಪಾಲಕೃಷ್ಣ ಮತ್ತು ವಿಜಯಲಕ್ಷ್ಮಿ ದಂಪತಿಯ ಏಕೈಕ ಪುತ್ರ ಗೌತಮ್ ಸಾರಂಗ್ ಮೇಲೆ. ಗೌತಮ್ ಯಾವುದೇ ಶಾಲೆಗೆ ಹೋಗಲಿಲ್ಲ. ಯಾವ ವಿಶ್ವವಿದ್ಯಾಲಯದ ಪದವಿಯನ್ನೂ ಪಡೆಯಲಿಲ್ಲ. ಆದರೆ ಆತನಿಗೀಗ ಆರು ಭಾಷೆ ಗೊತ್ತು. ಆತನಿಗೆ ಕೂಲಿ ಕೆಲಸ ಮಾಡಿದ ಅನುಭವವಿದೆ. ಉತ್ತಮ ಛಾಯಾಗ್ರಾಹಕ, ಹಾಲು ಮಾರುವವ, ವಾಹನ ಚಾಲಕ, ನಟ, ವೆಬ್ ವಿನ್ಯಾಸಕಾರ– ಗೌತಮ್ ಎಲ್ಲವೂ ಹೌದು. ಸ್ವತಂತ್ರವಾಗಿ ಬದುಕುತ್ತಿರುವ ಆತನೇ ಈಗ ಸಾರಂಗ ಶಾಲೆಯ ಆಧಾರ ಸ್ತಂಭ. ದೇಶ ಸುತ್ತಿ ತನ್ನ ಅರಿವು ವಿಸ್ತರಿಸಿಕೊಂಡಿರುವ ಗೌತಮ್, ತನ್ನ ಏಳನೇ ವರ್ಷದಲ್ಲಿಯೇ ಪಶ್ಚಿಮ ಘಟ್ಟ ಉಳಿಸಿ ಆಂದೋಲನದಲ್ಲಿ

ಭಾಗಿಯಾಗಿದ್ದ. ಅಲ್ಲಿನ ತನ್ನ ಅನುಭವಗಳನ್ನೂ ಬರೆದು ಇಟ್ಟಿದ್ದ.

ಸಾರಂಗ ಶಾಲೆಯಲ್ಲಿ ಕಲಿತ ಬಹಳಷ್ಟು ವಿದ್ಯಾರ್ಥಿಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಪಾಲ್ಗೊಂಡು ಪ್ರಮಾಣ ಪತ್ರ, ಪದವಿಗಳನ್ನು ಗಳಿಸಿದ್ದಾರೆ. ಇಲ್ಲಿ ಕಲಿತವರು ಸರ್ಕಾರ ಅಥವಾ ವಿಶ್ವವಿದ್ಯಾಲಯಗಳು ನಡೆಸುವ ಪರೀಕ್ಷೆಯಲ್ಲಿ ಫೇಲ್ ಆಗುವುದಿಲ್ಲ. ಬದುಕೆಂಬ ನಿರಂತರ ಪರೀಕ್ಷೆಯಲ್ಲಂತೂ ಅನುತ್ತೀರ್ಣರಾಗುವ ಸಾಧ್ಯತೆಯೇ ಇಲ್ಲ ಎನ್ನುವುದು ಈ ದಂಪತಿಯ ವಿಶ್ವಾಸ.

ಶಾಲೆ ಎಂದರೆ ಮಕ್ಕಳಿಗೆ ಶೂಲವಾಗಬಾರದು. ಶಾಲೆ ಎಂದರೆ ಒಂದು ಪ್ರಜಾಪ್ರಭುತ್ವ ಇರುವ ಕುಟುಂಬದಂತೆ ಇರಬೇಕು. ಶಿಕ್ಷಕರು ತಂದೆ ತಾಯಿ ಆಗಬೇಕು. ಮಕ್ಕಳು ಅವರ ಮಕ್ಕಳೇ ಆಗಬೇಕು. ಮನೆಯೇ ಮೊದಲ ಪಾಠಶಾಲೆ ನಿಜ. ಆದರೆ ಪಾಠಶಾಲೆಯೂ ಮನೆಯಾಗಬೇಕು. ಮಕ್ಕಳು ಹೂವಿನಂತೆ ಅರಳಬೇಕು. ಅವರ ಸಾಹಸದ ಸುವಾಸನೆ ಎಲ್ಲ ಕಡೆ ಪಸರಿಸಬೇಕು. ಜೀವನದಲ್ಲಿ ಯಾವುದೇ ಸಂದರ್ಭ ಬಂದರೂ ಅದನ್ನು ಎದರಿಸಿ ನಿಲ್ಲುವ ಧೈರ್ಯವನ್ನು ನೀಡಬೇಕು.

"ನಮ್ಮ ಶಾಲೆಯಲ್ಲಿ ಎರಡು ವಿಭಾಗಗಳಿವೆ. ಒಂದು ಪ್ರಾಥಮಿಕ ಇನ್ನೊಂದು ಹದಿಹರೆಯ. ಚಿಕ್ಕ ಮಕ್ಕಳಲ್ಲಿ ನಾವು ಮೌಲ್ಯಗಳನ್ನು ತುಂಬುತ್ತೇವೆ. ಹರೆಯದ ಮಕ್ಕಳಲ್ಲಿ ಆದರ್ಶವನ್ನು ತುಂಬುತ್ತೇವೆ. ಲೈಂಗಿಕ ಶಿಕ್ಷಣವನ್ನೂ ನೀಡುತ್ತೇವೆ. ಇದರಿಂದ ಅವರು ಬದುಕನ್ನು ಇನ್ನಷ್ಟು ಅರ್ಥಪೂರ್ಣವಾಗಿ ಅಭ್ಯಾಸ ಮಾಡುತ್ತಾರೆ".

"ನಮ್ಮ ಶಾಲೆಯಲ್ಲಿ ನಿರಂತರ ತರಗತಿಗಳಿಲ್ಲ. ನಾವು ಮಕ್ಕಳಿಗೆ ಪಾಠ ಹೇಳಿಕೊಡುವುದಿಲ್ಲ. ಕುಕಿಂಗ್‌ನಿಂದ ಹಿಡಿದು ಕಂಪ್ಯೂಟರ್‌ವರೆಗೆ ಎಲ್ಲವೂ ಇಲ್ಲಿ ಶಿಕ್ಷಣದ ಭಾಗ. ಯಾವಾಗ ಆಟ ಆಡಬೇಕು, ಯಾವಾಗ ಪಾಠ ಓದಬೇಕು ಎನ್ನುವುದನ್ನು ಮಕ್ಕಳೇ ನಿರ್ಧರಿಸುತ್ತಾರೆ. ನಾಳೆ ಏನು ಊಟ, ಏನು ತಿಂಡಿ ಎನ್ನುವುದನ್ನೂ ಮಕ್ಕಳೇ ತೀರ್ಮಾನಿಸುತ್ತಾರೆ. ಅದಕ್ಕೆ ಬೇಕಾಗುವ ವಸ್ತುಗಳನ್ನು ಅವರೇ ಬೆಳೆಯುತ್ತಾರೆ. ಹಾಲು ಕರೆಯುತ್ತಾರೆ. ಕೊಟ್ಟಿಗೆ ಶುಚಿ ಮಾಡುತ್ತಾರೆ. ಇಲ್ಲಿ ಎಲ್ಲವೂ ಶಿಕ್ಷಣ. ಉತ್ತಮ ನಾಯಕತ್ವವನ್ನೂ ಕಲಿಸುತ್ತೇವೆ. ಪ್ರತಿ ವಾರ ಶಾಲೆಯ ನಾಯಕರು ಬದಲಾಗುತ್ತಾರೆ. ಶಾಲೆಯ ನಾಯಕನ ಮಾತಿಗೆ ಬೆಲೆ ಇದೆ. ನಮ್ಮ ದೇಶಕ್ಕೆ ಈಗ ಉತ್ತಮ ರಾಜಕಾರಣಿಗಳೂ ಬೇಕು. ಅವರನ್ನು ತಯಾರು ಮಾಡುವ ಹೊಣೆ ಕೂಡ ನಮ್ಮ ಮೇಲೇ ಇದೆ. ಅದನ್ನೂ ಇಲ್ಲಿ ಮಕ್ಕಳು ಕಲಿಯುತ್ತಾರೆ. ನಾವು ಮಕ್ಕಳಿಗೆ ತಂತ್ರಗಳನ್ನು ಹೇಳಿಕೊಡುತ್ತೇವೆ. ಜ್ಞಾನವನ್ನು ಅವರೇ ಗಳಿಸಿಕೊಳ್ಳಬೇಕು".

ಹೀಗೆ ಸಾಗುತ್ತದೆ 'ಸಾರಂಗ'ದ ರೂವಾರಿಗಳ ಚಿಂತನೆ.

ಸಾಕ್ಷರತೆ ಮಾತ್ರ ಶಿಕ್ಷಣವಲ್ಲ. ಬದುಕನ್ನು ಕಲಿಸುವುದೇ ನಿಜವಾದ ಶಿಕ್ಷಣ. ಶಾಲೆ ಎನ್ನುವುದು ಕಾರ್ಖಾನೆಯಲ್ಲ. ಶಿಕ್ಷಕರು ಕಾರ್ಮಿಕರಲ್ಲ. ವಿದ್ಯಾರ್ಥಿ ಮಾರಾಟದ ವಸ್ತುವೂ ಅಲ್ಲ. ಪೋಷಕರು ಉತ್ಪಾದಕರಲ್ಲ. ಇಷ್ಟು ತಿಳಿದುಕೊಂಡರೆ ನಮ್ಮ ಮುಂದಿನ ಜನಾಂಗ ಸುಖವಾಗಿರುತ್ತದೆ. ಇಲ್ಲವಾದರೆ ನಾವೇ ನಮ್ಮ ಕೈಯಾರೆ ಮಾನವ ಕುಲವನ್ನು ನಾಶ ಮಾಡುತ್ತೇವೆ ಎನ್ನುವುದು ಗೋಪಾಲಕೃಷ್ಣ – ವಿಜಯಲಕ್ಷ್ಮಿ ದಂಪತಿಯ ನಂಬಿಕೆ. 'ಸಾರಂಗ'ದ ಬಗೆಗಿನ ಹೆಚ್ಚಿನ ಮಾಹಿತಿಗೆ www.saranghills.org ನೋಡಬಹುದು.

(ಸಾಭಾರ : ಪ್ರಜಾವಾಣಿ)

ಜನಪದ ಸೇವಾ ಟ್ರಸ್ಟ್ ಸಮಾಚಾರ

ಪ್ರತಿವರ್ಷದಂತೆ ಬೇಸಿಗೆಯಲ್ಲಿ ಮಕ್ಕಳ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದ ಹೆಸರು 'ದೊಡ್ಡ ಮರದಾ ನೆರಳಿನಲಿ'. ಶಿಬಿರ ೧೫ ದಿನಗಳ ಅವಧಿಯದಾಗಿತ್ತು. ಈ ಸಲದ ಶಿಬಿರದ ವೈಶಿಷ್ಟ್ಯವೇನೆಂದರೆ ಶಿಬಿರದ ಸಂಘಟನೆ, ಕಾರ್ಯಕ್ರಮಗಳ ರೂಪುರೇಷೆ ತಯಾರಿಕೆ, ಮಕ್ಕಳಿಗೆ ತರಬೇತಿ ಇತ್ಯಾದಿ ಎಲ್ಲವನ್ನೂ ಹಿಂದಿನ ಶಿಬಿರಗಳಲ್ಲಿ ಭಾಗವಹಿಸಿ ಅನುಭವ ಪಡೆದು ಈಗ ಯುವಕರಾಗಿರುವ ಗಿರೀಶ್, ಪುನೀತ್, ಕಿಶೋರ್, ರವಿಕುಮಾರ, ಉದಯ, ಶರತ್, ಸುರೇಶ, ಮನು, ರಾಮಾನುಜ, ಸುಮನಸ್, ಹೇಮಂತ ಮುಂತಾದವರು ನಡೆಸಿದರು. ಒಂದರ್ಥದಲ್ಲಿ ಮಕ್ಕಳೇ ಮಕ್ಕಳಿಗಾಗಿ ಶಿಬಿರವನ್ನು ನಡೆಸಿದರು. ಶಿಬಿರದ ಮಕ್ಕಳು 'ಮಿಡಿಚಂಭಟ್ಟ' ಎಂಬ ನಾಟಕ, ಸಿದ್ದಿ ಕುಣಿತ ಎಂಬ ಅದಿವಾಸಿ ನೃತ್ಯ, ಕೋಲಾಟ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಒಂದು ರಾತ್ರಿ ಹೊಸ ಜೀವನ ದಾರಿ ಕೇಂದ್ರದಲ್ಲಿ ಕಳೆದರು. ನಂತರ ಬೆಳಿಗ್ಗೆ ಪಕ್ಷಿ ವೀಕ್ಷಣೆ ಮತ್ತು ಮರಗಿಡಗಳ ಪರಿಚಯ ಮಾಡಿಕೊಂಡರು. ಈ ಶಿಬಿರದಲ್ಲಿ ಒಟ್ಟು ೨೫ ಮಕ್ಕಳು ಭಾಗವಹಿಸಿದ್ದರು. ಶಿಬಿರದ ಮುಕ್ತಾಯ ಸಮಾರಂಭವನ್ನು ಪು.ತಿ.ನ ರಂಗಮಂದಿರದಲ್ಲಿ ಏರ್ಪಡಿಸಲಾಗಿತ್ತು. ಪು.ತಿ.ನ ಟ್ರಸ್ಟ್‌ನವರು ರಂಗಮಂದಿರವನ್ನು ಉಚಿತವಾಗಿ ನೀಡಿ ಸಹಕರಿಸಿದರು. ಅವರಿಗೆ ಟ್ರಸ್ಟ್ ಆಭಾರಿಯಾಗಿದೆ. ಗಿರೀಶ ಎಂಬ ಮೇಲುಕೋಟೆಯ ಯುವಕ ಸಾಣೆಹಳ್ಳಿಯಲ್ಲಿ ರಂಗಶಿಕ್ಷಣದಲ್ಲಿ ಡಿಪ್ಲಮೊ ಪಡೆದಂಥವನಾಗಿದ್ದಾನೆ. ಸಮಾರೋಪ ಕಾರ್ಯಕ್ರಮದಲ್ಲಿ ಟ್ರಸ್ಟಿನ ಕಾರ್ಯದರ್ಶಿ ಸಂತೋಷ್ ಕೌಲಗಿಯವರು ಮಾತನಾಡಿ ಶಿಬಿರಕ್ಕೆ ಮಕ್ಕಳನ್ನು ಕಳುಹಿಸುವುದರಲ್ಲಿ ಪೋಷಕರ ಪಾತ್ರದ ಮಹತ್ವವನ್ನು ತಿಳಿಹೇಳಿದರು. ನಗರದಲ್ಲಿ ನಡೆಯುವ ಶಿಬಿರಗಳಿಗಿಂತ ಈ ಶಿಬಿರ ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಸಿದರು. ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬಾರದೆ ಇರುವುದಕ್ಕೆ ಮಕ್ಕಳಿಗಿಂತ ತಂದೆತಾಯಿಗಳ ಉದಸೀನತೆ ಮತ್ತು ನಿರ್ಲಕ್ಷ್ಯವೇ ಕಾರಣವೆಂದು ಹೇಳಿದರು. ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಹಾಜರಿದ್ದರು. ಟ್ರಸ್ಟಿನ ಧರ್ಮದರ್ಶಿಯವರಾದ ಶ್ರೀ ಜನಾರ್ಧನ್ ಮಾತನಾಡಿ ಟ್ರಸ್ಟಿನ ಕಾರ್ಯಕಲಾಪಗಳ ಪರಿಚಯ ಮಾಡಿಕೊಟ್ಟರು. ಇನ್ನೊರ್ವ ಧರ್ಮದರ್ಶಿ ಶ್ರೀ ಜೆ.ಶ್ರೀನಿವಾಸ್‌ರವರು ತಮ್ಮ ಉತ್ತಮ ಹಾಡುಗಾರಿಕೆಯಿಂದ ಜನರನ್ನು ರಂಜಿಸಿದರು.

೨೦೧೨ ಮೇ ಮಾಹೆಯ ದಾನಿಗಳು

ಶ್ರೀ ಶೇಷಾದ್ರಿ ಶ್ರೀನಿವಾಸನ್, ಶ್ರೀ ಎಂ.ಆರ್.ಭಾರ್ಗವ, ಶ್ರೀ ಎಂ.ಕೆ.ಶಂಕರ್, ಶ್ರೀ ಸಿ.ಎಸ್.ಕೃಷ್ಣಗುಪ್ತ – ಬೆಂಗಳೂರು

ಶ್ರೀ ಅನಂತಮೂರ್ತಿ, ಶ್ರೀ ಜಿ.ವಿಶ್ವನಾಥ – ಮೈಸೂರು

ಶ್ರೀ ಟಿ.ನಾರಾಯಣಗೌಡ – ಕೋಲಾರ ಮತ್ತು ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೧೦೩

- ಸುರೇಂದ್ರ ಕೌಲಗಿ



ಸಮಾಜ ಸೇವಾ ಕ್ಷೇತ್ರದಲ್ಲಿ ಇಂದು ಮುಖ್ಯವಾಗಿ ಐದು ಬಗೆಯ ಸಂಸ್ಥೆಗಳು ಕಾಣಬರುತ್ತವೆ. ಒಂದನೆಯದು ಸರ್ಕಾರದ ಧನ ಸಹಾಯದಿಂದಲೇ ಸರ್ಕಾರದ ಕಾರ್ಯಕ್ರಮಗಳನ್ನೇ ಅದರ ನಿಯಮಾವಳಿಗೆ ಒಳಪಟ್ಟು ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಒ). ಎರಡನೆಯದು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ತಮ್ಮದೇ ಆದ ಉದ್ದೇಶಕ್ಕೆ ಅನುಗುಣವಾಗಿ ಕೆಲಸಮಾಡುವಂಥದ್ದು. ಮೂರನೆಯದು ಸರ್ಕಾರದ ತಪ್ಪು ನೀತಿಗಳ ವಿರುದ್ಧ ಮತ್ತು ಅದರಿಂದ ಉಂಟಾದ ಅನ್ಯಾಯದ ವಿರುದ್ಧ ಹೋರಾಟ ಮಾಡುವ ಸಂಸ್ಥೆ ಮತ್ತು ನಾಲ್ಕನೆಯದು ಸ್ವಯಂ ಸೇವಾ ಸಂಸ್ಥೆ ಅಂದರೆ ಯಾವುದೇ ಕೇಂದ್ರಿತ ವ್ಯವಸ್ಥೆಯಿಂದ ಹಣ ಪಡೆಯದೆ ತನ್ನ ಆದರ್ಶಕ್ಕೆ ಅನುಸಾರವಾಗಿ ಕೆಲಸ ಮಾಡುವಂಥ ಸಂಸ್ಥೆ. ಐದನೆಯದು ಬಚ್ಚಿಟ್ಟು ಕೊಂಡಿರುವ ತನ್ನದೇ ಅಜೆಂಡಾ ಅನುಸಾರವಾಗಿ ಕೆಲಸಮಾಡುವುದು. ಈ ಐದು ಪ್ರಕಾರದ ಸಂಸ್ಥೆಗಳಲ್ಲದೇ ಇನ್ನೂ ಹಲವಾರು ಪ್ರಕಾರದ ಸಂಸ್ಥೆಗಳು ಇರಲು ಸಾಧ್ಯ. ಮಠಗಳು, ಧಾರ್ಮಿಕ ವಿಚಾರ ಸಂಸ್ಥೆಗಳು ತಮ್ಮದೇ ಅದ ವಿಶಿಷ್ಟ ಸ್ಥಾನ ಪಡೆದುಕೊಂಡಿವೆ. ಇಂದು ದೇಶಾದ್ಯಂತ ನಾಲ್ಕನೇ ಪ್ರಕಾರದ ಅಂದರೆ ಶುದ್ಧ ಸ್ವಯಂ ಸೇವಾ ಸಂಸ್ಥೆಗಳನ್ನು ಬಿಟ್ಟು ಉಳಿದೆಲ್ಲ ಪ್ರಕಾರದ ಸಂಸ್ಥೆಗಳು ದೇಶದ ಉದ್ದಗಲ ಕೆಲಸಮಾಡುತ್ತಿವೆ. ಶುದ್ಧ ಸ್ವಯಂ ಸೇವಾ ಸಂಸ್ಥೆಗಳ ಸಂಖ್ಯೆ ಬೆರಳೆಣಿಕೆಯಷ್ಟಿರಬಹುದು. ಶುದ್ಧ ಸ್ವಯಂ ಸೇವಾ ಸಂಸ್ಥೆಯ ಇನ್ನೊಂದು ಲಕ್ಷಣ ಎಂದರೆ ಅದು ಸತ್ಯ ಮತ್ತು ಅಹಿಂಸೆಯಲ್ಲಿ ಅಚಲ ನಂಬಿಕೆ ಇಟ್ಟಿರುತ್ತದೆ. ಗಾಂಧೀಯವರು ಸ್ಥಾಪಿಸಿ ನಡೆಸಿದ ಫೀನಿಕ್ಸ್ ಆಶ್ರಮ, ಸಾಬರಮತಿ ಆಶ್ರಮ ಮತ್ತು ಸೇವಾಗ್ರಾಮ ಆಶ್ರಮ ಹಾಗೂ ವಿನೋಬಾ ಸ್ಥಾಪಿಸಿದ ಪವನಾರ್ ಆಶ್ರಮಗಳನ್ನು ಶುದ್ಧ ಸೇವಾ ಸಂಸ್ಥೆಗಳ ಪಟ್ಟಿಗೆ ಸೇರಿಸಬಹುದು ಎಂದು ಅನಿಸುತ್ತದೆ. ಆಶ್ರಮ ಸ್ವರೂಪ ಸಂಸ್ಥೆಗಳಿಗೆ ಸತ್ಯ ಮತ್ತು ಅಹಿಂಸೆಯಲ್ಲಿ ನಂಬಿಕೆ ಇದ್ದು ಅವುಗಳ ಪ್ರಯೋಗದಲ್ಲಿಯೇ ತೊಡಗಿಕೊಳ್ಳುವುದರ ಮೂಲಕ ಪರೋಕ್ಷವಾಗಿ ಸಮಾಜದ ಉನ್ನತಿಗೆ ಕೆಲಸ ಮಾಡುತ್ತಿದ್ದವು. ಫೀನಿಕ್ಸ್ ಆಶ್ರಮ ವಿವಿಧ ಜನಾಂಗ, ಜಾತಿ, ಭಾಷಿಕರನ್ನೆಲ್ಲ ಒಂದೆಡೆ ಸೇರಿಸಿ ಅವರಿಗೆ ಸತ್ಯ ಮತ್ತು ಅಹಿಂಸೆಯ ಬೋಧನೆ ಮಾಡಿ ಒಂದು ವಿಶಿಷ್ಟ ಉದ್ದೇಶ್ಯಕ್ಕೆ ಕೆಲಸಮಾಡಿತು. ಈ ಆಶ್ರಮದಲ್ಲಿ ಇದ್ದವರು ಜೀವನದಲ್ಲಿ ಕ್ರಾಂತಿಯೇ ಆಯಿತೆಂದು ಹೇಳಬಹುದು. ಮುಂದೆ ಅವರು ಎಲ್ಲಿಯೇ

ಯಾವ ಸನ್ನಿವೇಶದಲ್ಲಿಯೇ ಇದ್ದರೂ ಸಹ ಆಶ್ರಮದಲ್ಲಿ ಪಡೆದ ಮೌಲ್ಯಗಳನ್ನು ಪ್ರಚಾರ ಮಾಡಲು ಯತ್ನಿಸಿದ್ದಾರೆ. ಸಾಬರಮತಿ ಮತ್ತು ಸೇವಾಗ್ರಾಮ ಆಶ್ರಮದಲ್ಲಿ ಇದ್ದವರಂತೂ ದೇಶ ಸ್ವರೂಪಿ ಬೃಹತ್ ಸಮಾಜದ ಸರ್ವಾಂಗೀಣ ಉನ್ನತಿಗೆ ಪ್ರಯತ್ನ ಮಡಿದ್ದಂಥವರು. ಸಮಾಜ ಸುಧಾರಣೆ ಅಧಿಕಾರ ಬಲ ಮತ್ತು ಹಣಬಲ ಇದ್ದರೆ ಮಾತ್ರ ಸಾಧ್ಯ ಎಂಬುದನ್ನು ಸುಳ್ಳಾಗಿಸಿದವರು. ಬಂಗಾರದ ಪಾತ್ರೆಯಲ್ಲಿ ಅಡಗಿಕುಳಿತಿರುವ ಸತ್ಯಧರ್ಮವನ್ನು ಕಂಡುಕೊಳ್ಳಲು ಪ್ರಯತ್ನಿಸಿದರವು. ಇಂಥ ಶುದ್ಧ ಸೇವಾಸಂಸ್ಥೆಗಳಲ್ಲಿ ಕೆಲಸ ಮಾಡಿ ಹೊರಬಂದವರು ಕೇವಲ ಸಮಾಜ ಸುಧಾರಣೆಯ ಕೆಲಸವನ್ನು ಮಾಡಿಲ್ಲ ಅವರು ಸಾಮಾಜಿಕ ಕ್ರಾಂತಿಕಾರರೇ ಆಗಿ ರೂಪಗೊಂಡರು. ಅಂತರಂಗ ಮತ್ತು ಬಹಿರಂಗ ಜೀವನದಲ್ಲಿ ಯಾವುದೇ ವೈರುಧ್ಯವಿಲ್ಲದಂತೆ ಜೀವನ ನಡೆಸಿ ಸತ್ಯ ಮತ್ತು ಅಹಿಂಸಾಧಾರಿತ ಸಮಾಜ ರಚನೆಯಾಗಿ ಹೋರಡಿದವರು. ಇಷ್ಟೆಲ್ಲ ದೊಡ್ಡ ಕೆಲಸ ಮಾಡಿದರೂ ದೇಶದ ಇತಿಹಾಸದಲ್ಲಿ ಗಮನೀಯವಾಗಿ ಗಮನಕ್ಕೆ ಬರದಂಥವರು? ಆದರೇನಂತೆ ಅವರು ಸಾರ್ಥಕ ಜೀವನ ನಡೆಸಿದ್ದಂಥವರು. ಯಾವುದೇ ಭೌತಿಕ ಅಧಿಕಾರವನ್ನು ಒಪ್ಪದೇ ಭಗವಂತನ ಅಧಿಕಾರವನ್ನೇ ಒಪ್ಪಿದಂಥವರು. ಅಧಿಕಾರ ಇವರ ಬಳಿಗೆ ಸುಳಿದರೂ ಇದನ್ನು ಬಯಸದ ಸಮಾಜ ಸುಧಾರಕರು. ಇಂಥ ಸಮಾಜ ಸೇವಕರ ಪಟ್ಟಿ ದೊಡ್ಡದಾಗಿಯೇ ಇದೆ. ಅಂಥವರನ್ನು ಇಲ್ಲಿ ಹೆಸರಿಸಿದರೆ ತಪ್ಪಾಗಲಾರದು. ಆ ಪಟ್ಟಿಯನ್ನು ನೋಡಿದರೆ ಶುದ್ಧ ಸೇವಾ ಸಂಸ್ಥೆಯಲ್ಲಿ ಅಡಗಿರುವ ಶಕ್ತಿಯ ಮಹತ್ ಗೊತ್ತಾಗುವುದು. ಆ ಪ್ರಾತಃ ಸ್ಮರಣೀಯರ ಕೆಲವು ಹೆಸರುಗಳು ಈ ರೀತಿ ಇವೆ. ರವಿಶಂಕರ್ ವ್ಯಾಸ್, ಸ್ವಾಮಿ ಆನಂದ್, ಶಂಕರಲಾಲ್ ಬ್ಯಾಂಕರ್, ಜಯಪ್ರಕಾಶ್ ನಾರಾಯಣ್, ದಾದಾ ಧರ್ಮಾಧಿಕಾರಿ, ವಿನೋಬಾ ಭಾವೆ, ಶಂಕರರಾವ್ ದೇವ್, ಕಾಕಾ ಕಾಲೇಲ್‌ಕರ್, ಕೆ.ಕೇಳಪ್ಪನ್, ಗಂಗಾಧರರಾವ್ ದೇಶಪಾಂಡೆ, ಮಹದೇವ ದೇಸಾಯಿ, ಲಾಲಾ ಲಜಪತ್ ರಾಯ್, ಮದನ ಮೋಹನ ಮಾಲವೀಯ, ಜೆ.ಸಿ.ಕುಮಾರಪ್ಪ, ಅಮೃತಲಾಲ್ ಠಕ್ಕರ್, ಇವರಲ್ಲದೇ ಇವರೇ ತಮ್ಮ ಆದರ್ಶಕ್ಕೆ ಅನುಗುಣವಾಗಿ ತಯಾರಿಸಿದ ಕಾರ್ಯಕರ್ತರ ದೊಡ್ಡ ಪಡೆಯೇ ಇದೆ. ಆ ಕಾರ್ಯಕರ್ತರು ಒಂದೊಂದು ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ಅದಕ್ಕಾಗಿಯೇ ತಮ್ಮ ಪ್ರಾಣ ಅರ್ಪಿಸಿಕೊಂಡವರು.

ಇಂಥ ವಿಶಿಷ್ಟ ಪರಂಪರೆಯ ಸಮಾಜ ಕಾರ್ಯಕರ್ತರನ್ನು ತಯಾರಿಸಿ ಅವರು ಸಮಾಜಕ್ಕೆ ಮಾದರಿಯಾಗುವಂತೆ ಮಾಡಿದಂಥ ಸಂಸ್ಥೆಗಳು ಈ ಮೊದಲು ತಿಳಿಸಿದ ಐದು ಪ್ರಕಾರದ ಪಟ್ಟಿಯಲ್ಲಿ ಇಲ್ಲವೆಂದೇ ಹೇಳಬಹುದು. ಆಶ್ರಮ ಮಾದರಿಯ ಸಂಸ್ಥೆಗಳಲ್ಲದೇಯಿರುವ ವಿವಿಧ ಬಗೆಯ ಸಂಸ್ಥೆಗಳ ಶಕ್ತಿ ಹಣದಿಂದ ಪ್ರಾರಂಭವಾಗುತ್ತದೆ. ಅದರ ಮುನ್ನಡೆಗೆ ಹಣವೇ ಶಕ್ತಿ ಪ್ರದಾಯಕ. ಅದರ ಇರುವಿಕೆಗೆ ಹಣವೇ ಪ್ರಾಣವಾಯುವಾಗಿರುತ್ತದೆ. ಅದರ ಅವಸಾನ ಹಣದಲ್ಲಿಯೇ ಆಗುತ್ತದೆ. ಅಂತ್ಯಕ್ರಿಯೆ ಹಣದಿಂದಲೇ ಆಗುತ್ತದೆ.

(ಮುಂದುವರಿಯುವುದು...)

ಸರ್ವೋದಯ ಆಂದೋಲನದ ಮುನ್ನಡೆ

ಕರ್ನಾಟಕ ಸರ್ವೋದಯ ಮಂಡಲ ಬೆಂಗಳೂರು

ಅರ್ಧವಾರ್ಷಿಕ ಸಭೆ : - ೨೧/೦೫/೨೦೧೨

ರಾಜ್ಯ ಮೋಹವು ಎನಗೆ ಇಲ್ಲವು ಸ್ವರ್ಗದಾಸೆಯೆ ಇಲ್ಲವು।
ಮತ್ತೆ ಜನ್ಮವ ಪಡೆಯಬೇಕೆಂಬಿಚ್ಛೆಯೇ ಎನಗಿಲ್ಲವು॥
ದುಃಖಿಗಳ ಕಂಬನಿಗಳೆಲ್ಲ ನಶಿಸಲಿ।
ಆರ್ತನಾದಗಳೆಲ್ಲವಳಿಯಲಿ ಇದುವೆ ನನ್ನಯ ಬಯಕೆಯು॥

ಕಾರ್ಯವರದಿ

೨೦೧೨ ಮೇ ಸೋಮವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸರ್ವೋದಯ ಮಂಡಲಿ ಆವರಣದಲ್ಲಿ ನಡೆಯುತ್ತಿರುವ ಕರ್ನಾಟಕ ಸರ್ವೋದಯ ಮಂಡಲಿಯ ಅರ್ಧವಾರ್ಷಿಕ ಸಭೆಗೆ ತಮ್ಮೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ಈ ಸಭೆಯಲ್ಲಿ ಉಪಸ್ಥಿತರಿರುವ ಸರ್ವ ಸೇವಾ ಸಂಘದ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಶ್ರೀ ಚಂದನ್‌ಪಾಲ್‌ರವರನ್ನು ವಿಶೇಷವಾಗಿ ತಮ್ಮೆಲ್ಲರ ಪರವಾಗಿ ಸ್ವಾಗತಿಸುತ್ತೇನೆ. ಅಂತೆಯೇ ನಮ್ಮಗೆಲ್ಲ ಮಾರ್ಗದರ್ಶಕರಾಗಿರುವ ಹಿರಿಯರಾದ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರನ್ನು ಸಹ ಸ್ವಾಗತಿಸುತ್ತೇನೆ.

ಈಗ ಸೇವೆಸಲ್ಲಿಸುತ್ತಿರುವ ರಾಜ್ಯ ಆಡಳಿತ ಮಂಡಳಿಯು ೨೦೦೯ ಡಿಸಂಬರ್ ೨೩ರಂದು ಅಧಿಕಾರ ಸ್ವೀಕರಿಸಿ ಎರಡೂವರೆ ವರ್ಷಗಳಾದವು. ಈ ಅವಧಿಯಲ್ಲಿ ಮಂಡಲಿಯ ಕಾರ್ಯಕಾರಿ ಸಮಿತಿ ಸಭೆ ಹಲವಾರುಬಾರಿ ನಡೆಯಿತು. ಸಂಘಟನೆ ಮತ್ತು ಕಾರ್ಯಕ್ರಮದ ದೃಷ್ಟಿಯಿಂದ ರಾಜ್ಯ ಸರ್ವೋದಯ ಮಂಡಲಿಯು ತುಂಬಾ ದುರ್ಬಲವೇ ಎಂದು ಹೇಳಬಹುದು. ಹಣಕಾಸಿನ ಪರಿಸ್ಥಿತಿಯೂ ಸಹ ಎಳ್ಳಷ್ಟು ಸಮಾಧಾನಕರವಾಗಿರಲಿಲ್ಲ. ಇಂಥ ಅನುಕೂಲಕರವಲ್ಲದ ಪರಿಸ್ಥಿತಿಯಲ್ಲೂ ಸಂಘಟನೆಯನ್ನು ಬಲಪಡಿಸಲು ಹಾಗೂ ಸರ್ವೋದಯ ಆಂದೋಲನ ಕಟ್ಟಲು ಯಥಾಶಕ್ತಿ ಪರಿಶ್ರಮಿಸಲಾಗಿದೆ. ಈ ಪರಿಶ್ರಮದ ಫಲವಾಗಿ ಸಂಘಟನೆಯ ಕ್ಷೇತ್ರದಲ್ಲಿ ಮಂಡ್ಯ, ಹಾಸನ, ಮೈಸೂರು, ಬಳ್ಳಾರಿ, ಚಿತ್ರದುರ್ಗ, ಉಡುಪಿ, ದ.ಕನ್ನಡ ಈ ಏಳು ಜಿಲ್ಲೆಗಳಲ್ಲಿ ಸರ್ವೋದಯ ಮಿತ್ರ ಮಂಡಲಿಗಳನ್ನು ಅಲ್ಲದೇ ನಂಜನಗೂಡಿನಲ್ಲಿ ತಾಲ್ಲೂಕು ಮಿತ್ರ ಮಂಡಲಿ ಸ್ಥಾಪಿಸಲಾಯಿತು. ಪಿರಿಯಾಪಟ್ಟಣದಲ್ಲಿ ಆ ತಾಲ್ಲೂಕಿನ ಸರ್ವೋದಯ ಮಿತ್ರ ಮಂಡಲಿಯನ್ನು ಸ್ಥಾಪಿಸಲಾಗಿತ್ತಾದರೂ ಅಲ್ಲಿಯ ಸರ್ವೋದಯ ಮಿತ್ರರು ವಿಶೇಷವಾದ ಆಸ್ಥೆಯನ್ನು ತಾಳದೇ ಇದುದ್ದರಿಂದ ಅದು ಕ್ರಿಯಾಶೀಲವಾಗದೆ ಉಳಿದಿದೆ. ಇಂಥದೇ ಪರಿಸ್ಥಿತಿ ರಾಮನಗರ ಜಿಲ್ಲೆಯ ಮಿತ್ರ ಮಂಡಲಿಯದು ಆಯಿತು. ಆದರೂ ಕೂಡ ರಾಜ್ಯ ಸರ್ವೋದಯ ಮಂಡಲಿ ತಾಳ್ಮೆಯನ್ನು ಬಿಟ್ಟು ಕೊಡದೆ ನಿಷ್ಕ್ರಿಯವಾಗಿರುವ ಈ ಎರಡೂ ಮಿತ್ರ ಮಂಡಲಿಗಳನ್ನು ಸಕ್ರಿಯಗೊಳಿಸಲು ಪ್ರಯತ್ನಿಸುತ್ತಿದೆ. ಈಗ ಅಸ್ತಿತ್ವದಲ್ಲಿ ಇರುವ ಸರ್ವೋದಯ ಮಿತ್ರ ಮಂಡಲಿಗಳು ಇನ್ನೂ ಸಕ್ರಿಯಗೊಳ್ಳಬೇಕಾಗಿದೆ. ಅದಕ್ಕಾಗಿ ಎಲ್ಲ ಪ್ರಯತ್ನ ಮಾಡಲಾಗುತ್ತಿದೆ. ಹೊಳೇನರಸಿಪುರ ಮತ್ತು ಅರಕಲಗೂಡಿನಲ್ಲಿ ತಾಲ್ಲೂಕು ಮಟ್ಟದ ಮಿತ್ರ ಮಂಡಲಿ ರಚಿಸುವ ಪ್ರಕ್ರಿಯೆ ನಡೆದಿದೆ. ಒಟ್ಟು ಗುರಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಸರ್ವೋದಯ ಮಂಡಲಿಗಳನ್ನು ರಚಿಸುವುದಾಗಿದೆ. ತಾತ್ಕಾಲಿಕ ಮಂಡಲಿಯ ಸ್ಥಳದಲ್ಲಿ ಪೂರ್ಣ ಪ್ರಮಾಣದ ಮಂಡಲಿ ಅಸ್ತಿತ್ವಕ್ಕೆ ಬಂದ ಮೇಲೆ ಈ ಮೊದಲು ತಿಳಿಸಿದ ಸಂಘಟನೆಯ ಕಾರ್ಯಕ್ರಮಗಳು ನಡೆದವು.

ಸರ್ವಸೇವಾ ಸಂಘದ ಅರ್ಧವಾರ್ಷಿಕ ಅಧಿವೇಷನವನ್ನು ಆದಿಚುಂಚನಗಿರಿಯಲ್ಲಿ ೨೦೧೦ರಲ್ಲಿ ನಡೆಸಲಾಯಿತು, ಅಧಿವೇಶನ ಯಶಸ್ವಿಯಾಗಿ ನಡೆಯಿತು. ಅಧಿವೇಶನದ ವ್ಯವಸ್ಥೆಯಲ್ಲಿ ಶ್ರೀ ಆದಿಚುಂಚನಗಿರಿ ಸ್ವಾಮೀಜಿಯವರ ಪಾತ್ರ ಮುಖ್ಯವಾಗಿತ್ತು.

೨೦೧೧ರಲ್ಲಿ ಸರ್ವ ಸೇವಾ ಸಂಘವು ಸೇವಾಗ್ರಾಮ ಆಶ್ರಮದಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಯುವ ಶಿಬಿರದಲ್ಲಿ ಭಾಗವಹಿಸಲು ಕರ್ನಾಟಕದಿಂದ ಹತ್ತು ಜನ ಯುವತಿಯರನ್ನು ಕಳುಹಿಸಲಾಗಿತ್ತು. ಇವರೆಲ್ಲರೂ ರಾಯಚೂರು ಜಿಲ್ಲೆಯ ಸಿಂಧನೂರಿನ ಕಾಲೇಜಿನ ವಿದ್ಯಾರ್ಥಿನಿಯರು. ಇವರು ಶಿಬಿರದಿಂದ ತುಂಬಾ ಪ್ರಭಾವಿತರಾಗಿ ಬಂದಿದ್ದಾರೆ.

ಸರ್ವೋದಯ ಮಂಡಲಿಯ ಕಾರ್ಯದರ್ಶಿಯವರಾದ ಶ್ರೀ ಎಲ್.ನರಸಿಂಹಯ್ಯನವರು ಗಾಂಧೀ ಸ್ಮಾರಕ ನಿಧಿಯ ಆಶ್ರಯದಲ್ಲಿ ನಡೆದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಗಾಂಧೀ ವಿಚಾರ ಪ್ರಚಾರ ಮಾಡಿದ್ದಾರೆ.

ಮಂಡಲಿಯ ಯುವ ವಿಭಾಗದ ಸಂಯೋಜಕರಾಗಿದ್ದ ಶ್ರೀ ಹೆಚ್.ಎಸ್.ಸುರೇಶ್‌ರವರನ್ನು ಮುಂಬೈ ಸರ್ವೋದಯ ಮಂಡಲಿಯು ಕರ್ನಾಟಕ ರಾಜ್ಯಕ್ಕೆ ತನ್ನ ಪ್ರತಿನಿಧಿಯನ್ನಾಗಿ ನಿಯುಕ್ತಿ ಮಾಡಿದೆ.

ತಮಗೆಲ್ಲ ತಿಳಿದಿರುವಂತೆ ಸತ್ಯವ್ರತ ಕರ್ನಾಟಕದ ತ್ಯಾಗನಿಷ್ಠ, ಸೇವಾನಿಷ್ಠ ಮತ್ತು ವಿಚಾರನಿಷ್ಠ ಸರ್ವೋದಯ ಕಾರ್ಯಕರ್ತರಾಗಿದ್ದರು. ಅವರು ಅರವತ್ತು ವರ್ಷಗಳಷ್ಟು ದೀರ್ಘಕಾಲ ಸಮಾಜ ರಚನೆಗಾಗಿ ದುಡಿದಂಥವರು. ಇಂಥ ಸೇವಾ ಧುರೀಣ ಸರ್ವೋದಯ ಕಾರ್ಯಕರ್ತನ ನೆನಪಿನಲ್ಲಿ "ಸತ್ಯವ್ರತ ಸರ್ವೋದಯ ಶ್ರದ್ಧಾಳು" ಎಂಬ ಪುಸ್ತಕವನ್ನು ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಾಂಗದ ಸಹಾಯದಿಂದ ಪ್ರಕಟಿಸಲಾಯಿತು. ಸತ್ಯವ್ರತರ ನೆನಪು ಹಸಿರಾಗಿ ಉಳಿಯುವಂತೆ ಮಾಡುವ ಉದ್ದೇಶದಿಂದ ಸತ್ಯವ್ರತರ ಜನ್ಮತಿಂಗಳು ಅಕ್ಟೋಬರ್‌ನಲ್ಲಿ ಪ್ರತಿ ವರ್ಷ ಒಂದು ಕಾರ್ಯಕ್ರಮ ಸ್ಥಿರಗೊಳಿಸಲು ತೀರ್ಮಾನಿಸಲಾಯಿತು. ಆ ಕಾರ್ಯಕ್ರಮಕ್ಕೆ ಸರ್ವೋದಯ ಕಾರ್ಯಕರ್ತರ ಸ್ಮರಣೆಯ ದಿನವೆಂದು ಸಂಕೇತಿಸಲಾಯಿತು. ಆ ದಿನ ಸರ್ವೋದಯ ಸಮಾಜ ರಚನೆಗಾಗಿ ಕೆಲಸ ಮಾಡುತ್ತಿರುವವರನ್ನು ಗುರುತಿಸಿ ಸನ್ಮಾನಿಸುವುದು ಈ ಕಾರ್ಯಕ್ರಮದ ಉದ್ದೇಶ. ಈ ಕಾರ್ಯಕ್ರಮದ ಅಂಗವಾಗಿ ಕಳೆದ ವರ್ಷ ೨೦೧೧ ಅಕ್ಟೋಬರ್‌ನಲ್ಲಿ ಮೊದಲ ಕಾರ್ಯಕ್ರಮವನ್ನು ಸರ್ವೋದಯ ಮಂಡಲಿಯ ಆವರಣದಲ್ಲಿ ಆಯೋಜಿಸಲಾಗಿತ್ತು ಹಲವಾರು ವರ್ಷಗಳಿಂದ ಸರ್ವೋದಯ ಕೆಲಸ ಮಾಡುತ್ತಿರುವ ಶ್ರೀ ಅಶ್ವತ್ಥನಾರಾಯಣಗೌಡರನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮ ಪ್ರತಿವರ್ಷ ನಡೆಯುವುದಕ್ಕಾಗಿ ಪ್ರೇರಣೆ ಕೊಟ್ಟವರು ರಾಮನಗರದ ಸರ್ವೋದಯ ವಿಚಾರದ ಅಭಿಮಾನಿಯಾದ ಡಾ॥ಎಲ್. ತಿಮ್ಮಯ್ಯನವರು. ಇವರು ಸ್ವಪ್ರೇರಣೆಯೊಂದಿಗೆ ಹತ್ತು ಸಾವಿರ ರೂಪಾಯಿಗಳನ್ನು ಸಹ ದಾನವಾಗಿ ಕೊಟ್ಟರು. ಲಕ್ಷ್ಮೀಸತ್ಯವ್ರತರು ಸಹ ಐದು ಸಾವಿರ ರೂಪಾಯಿ ಕೊಟ್ಟರು.

ಕಳೆದ ಏಪ್ರಿಲ್ ತಿಂಗಳಲ್ಲಿ ಸರ್ವಸೇವಾ ಸಂಘದ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಜಿ.ವಿ.ಕೆ.ಪ್ರಸಾದ್‌ರವರು ಕರ್ನಾಟಕಕ್ಕೆ ಪ್ರವಾಸ ಬಂದರು. ಆಗ ಮಂಡ್ಯದಲ್ಲಿ ಆ ಜಿಲ್ಲೆಯ ಸರ್ವೋದಯ ಮಂಡಲಿಯ ಸಭೆಯನ್ನು ನಡೆಸಲಾಯಿತು. ಕರ್ನಾಟಕ ಸರ್ವೋದಯ ಮಂಡಲಿಗೆ ಸದ್ಯಕ್ಕೆ ತನ್ನದೇ ಆದ ಮುಖ ಪತ್ರಿಕೆಯಿಲ್ಲ. ಸತ್ಯವ್ರತರ ಅವಸಾನದ ನಂತರ ಮುಖ ಪತ್ರಿಕೆ "ಸರ್ವೋದಯಜಗತ್" ಪತ್ರಿಕೆ ನಿಂತುಹೋಯಿತು. ಅದನ್ನು ಮುನ್ನಡೆಸುವ ವ್ಯವಸ್ಥೆ ಆಗಲಿಲ್ಲ. ಆದ್ದರಿಂದ ಗಾಂಧೀವಿಚಾರ ಪ್ರಣೀತ ಮತ್ತು ಸರ್ವೋದಯ ವಿಚಾರಧಾರಿತ ಜನಪದ ಸೇವಾ ಟ್ರಸ್ಟ್ ಕಳೆದ ೧೨ ವರ್ಷಗಳಿಂದ ಪ್ರಕಟಿಸುತ್ತಿರುವ "ಜನಪದವಿಚಾರ"ವನ್ನು ತಾತ್ಕಾಲಿಕವಾಗಿ ಸರ್ವೋದಯ ಮಂಡಲಿಯ ಮುಖಪತ್ರಿಕೆ ಎಂದು

ಮಾನ್ಯ ಮಾಡಲಾಯಿತು. ಈಗ ಜನಪದ ವಿಚಾರದ ೪೦೦ ಪ್ರತಿಗಳು ಮುದ್ರಿತವಾಗುತ್ತಿವೆ. ಬಹಳಷ್ಟು ಸರ್ವೋದಯ ಮಿತ್ರರು ಚಂದಾದಾರರಾಗಬೇಕಿದೆ. ಜನಪದವಿಚಾರವು ಗಾಂಧೀ, ವಿನೋಬಾ, ಜೆ.ಪಿ.ಯವರ ವಿಚಾರಗಳಾಧಾರಿತ ಲೇಖನಗಳನ್ನು ಪ್ರಕಟಿಸುತ್ತಿದೆ. ಅಲ್ಲದೇ "ಸರ್ವೋದಯ ಆಂದೋಲನದ ಮುನ್ನಡೆ" "ಖಾದಿವಿಚಾರ"ಎಂಬ ಅಂಕಣಗಳನ್ನು ಸಹ ಪ್ರಕಟಿಸುತ್ತಿದೆ.

ಸರ್ವೋದಯ ಮಂಡಲಿಯ ಲೆಕ್ಕಪತ್ರಗಳು ೨೦೦೭ರಿಂದ ಆಡಿಟ್ ಆಗದೆ ಉಳಿದಿತ್ತು. ಈಗ ೨೦೧೦-೧೧ನೇ ಸಾಲಿನ ಲೆಕ್ಕವನ್ನು ಆಡಿಟ್ ಮಾಡಿಸಲಾಯಿತು. ೨೦೧೧-೧೨ನೇ ಸಾಲಿನ ಲೆಕ್ಕವನ್ನು ಆಡಿಟ್‌ಗೆ ಗುರಿಪಡಿಸಲಾಯಿತು. ಸರ್ವೋದಯ ಮಂಡಲಿಯ ಧೇಯ್ಯೋದ್ದೇಶಗಳನ್ನು ಆಸಕ್ತರಿಗೆ ಪರಿಚಯಿಸುವ ದೃಷ್ಟಿಯಿಂದ ಮಂಡಲಿಯ ಪರಿಚಯ ಪತ್ರಗಳನ್ನು ಮೊಟ್ಟ ಮೊದಲ ಬಾರಿಗೆ ತಯಾರಿಸಿ ಆಸಕ್ತರಿಗೆ ಹಂಚಲಾಯಿತು. ಇದರ ಪರಿಣಾಮವಾಗಿ ಹದಿನೈದು ಸನ್ಮಿತ್ರರು ತಲಾ ಒಂದು ಸಾವಿರ ರೂಪಾಯಿ ಕೊಟ್ಟು ಸರ್ವೋದಯ ಆಂದೋಲನದ ಪೋಷಕರಾದರು. ಹೀಗೆ ಸೇರಿದ ಹದಿನೈದು ಸಾವಿರ ರೂಪಾಯಿ ಮತ್ತು ಮಂಡಲಿಯ ಹೆಸರಿನಲ್ಲಿ ಮಲ್ಲೇಶ್ವರಂನ ಶ್ರೀರಾಮ ಕೋ. ಆಪರೇಟಿವ್ ಬ್ಯಾಂಕ್‌ನಲ್ಲಿದ್ದ ಹಣ ಹಾಗೂ ಮಾಧವನಗರದ ಮೈಸೂರು ಬ್ಯಾಂಕ್ ಶಾಖೆಯಲ್ಲಿದ್ದ ಹಣವನ್ನೆಲ್ಲ ಒಟ್ಟು ಸೇರಿಸಿ ಎಪ್ಪತ್ತೈದು ಸಾವಿರ ರೂಪಾಯಿ ಹಣವನ್ನು ನಿಗದಿತ ಠೇವಣಿಯಲ್ಲಿ ಇಡಲಾಗಿದೆ. ಇನ್ನು ಇಪ್ಪತ್ತೈದು ಸಾವಿರ ರೂಪಾಯಿ ಸೇರಿಸಿ ಅದನ್ನು ಒಂದು ಲಕ್ಷ ರೂಪಾಯಿಗೆ ಏರಿಸುವ ಪ್ರಯತ್ನ ನಡೆದಿದೆ. ನಿಗದಿತ ಠೇವಣಿಯಿಂದ ಬರುವ ಆದಾಯವನ್ನು ಮಂಡಲಿಯ ಅಗತ್ಯ ಖರ್ಚುಗಳಿಗಾಗಿ ಉಪಯೋಗಿಸಲಾಗುವುದು. ಈಗ ಆಗುತ್ತಿರುವ ಮುಖ್ಯ ಖರ್ಚುಗಳೆಂದರೆ ಮಂಡಲಿಯ ಕಛೇರಿಯ ಪೂರ್ಣಾವಧಿ ಕಾರ್ಯಕರ್ತರಾಗಿ ಕೆಲಸಮಾಡುತ್ತಿರುವ ಅಶೋಕ್‌ರವರಿಗೆ ಮಾಹೆಯಾನ ಒಂದು ಸಾವಿರ ರೂಪಾಯಿಗಳ ವೇತನ, ದೂರವಾಣಿ ಖರ್ಚು, ಅಂಚೆ ಖರ್ಚು ಮತ್ತು ಅಧ್ಯಕ್ಷರ ಪ್ರವಾಸ ಖರ್ಚು ಸೇರಿವೆ.

ಮಂಡಲಿಯ ಅಧ್ಯಕ್ಷರು ಸರ್ವಸೇವಾ ಸಂಘದ ಜೊತೆಗೆ ನಿಕಟ ಸಂಪರ್ಕವಿರಿಸಿಕೊಂಡಿದ್ದಾರೆ. ಸಂಘದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಇರುವುದರಿಂದ ಸಂಘದ ಸಭೆಗಳಿಗೆ ಹಾಜರಾಗಿರುತ್ತಾರೆ.

೨೦೧೨ ಜೂನ್ ತಿಂಗಳು ಒಂದರಿಂದ ಐದನೇ ತಾರೀಖಿನವರೆಗೆ ಶ್ರೀ ನಾರಾಯಣ ದೇಸಾಯಿಯವರ ಜನಪ್ರಿಯ "ಗಾಂಧಿ ಕಥಾ" ಎಂಬ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಮಿತ್ರಮಂಡಲಿಯ ಸಹಕಾರದೊಂದಿಗೆ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮವು ಮೈಸೂರು ನಗರದಲ್ಲಿಯ ವಿಜಯ ವಿಠಲ ಶಿಕ್ಷಣ ಸಂಸ್ಥೆಯಲ್ಲಿ ಐದು ದಿನ ನಡೆಯುವುದು ನೀವು ಯಾಥಾ ಸಂಭವ ಭಾಗವಹಿಸಿ ಲಾಭಪಡೆಯಬೇಕಾಗಿ ಆಹ್ವಾನಿಸಲಾಗಿದೆ.

ಭವಿಷ್ಯದ ಕಾರ್ಯಕ್ರಮ

ಮುಂದಿನ ಆರು ತಿಂಗಳಲ್ಲಿ ತಮ್ಮೆಲ್ಲರ ಸಹಕಾರದಿಂದ ಕೈಗೊಳ್ಳಬೇಕಾದ ಕಾರ್ಯಕ್ರಮಗಳು ಈ ರೀತಿ ಇವೆ.

೧. ಸಂಘಟನೆಯನ್ನು ಬೆಳೆಸುವ ದೃಷ್ಟಿಯಿಂದ ರಾಜ್ಯದ ಮುವತ್ತು ಜಿಲ್ಲೆಗಳಲ್ಲೂ ಸರ್ವೋದಯ ಮಿತ್ರಮಂಡಲಿ ಸ್ಥಾಪಿಸುವುದು. ಈ ಕೆಲಸ ೨೦೧೨ ಆಗಸ್ಟ್ ಮಾಹೆಯ ಕೊನೆಯೊಳಗೆ ಮುಗಿಯಬೇಕು. ಈ ಕಾರ್ಯ ನಿಗದಿತ ಅವಧಿಯೊಳಗಾಗಿ ಕೈಗೊಳ್ಳಬೇಕಾದರೆ ಸರ್ವೋದಯ ಮಂಡಲಿ ಸದಸ್ಯರು ಸರ್ವೋದಯ ಮಿತ್ರರು ಮತ್ತು ಅಭಿಮಾನಿಗಳು ಪೂರ್ಣ ರೂಪದಲ್ಲಿ ಸಹಕರಿಸಬೇಕು.

೨. ಯಾವ ಜಿಲ್ಲೆಗಳಲ್ಲಿ ಈಗಾಗಲೇ ಸರ್ವೋದಯ ಮಿತ್ರ ಮಂಡಲಿ ರಚನೆಯಾಗಿದೆಯೊ ಆಯಾ ಜಿಲ್ಲೆಯ ತಾಲ್ಲೂಕು ಮಟ್ಟದಲ್ಲಿ ಮಿತ್ರ ಮಂಡಲಿ ರಚನೆಯಾಗಬೇಕು.

೩. ರಾಜ್ಯದ ಖಾದಿ ಸಂಸ್ಥೆಗಳು ಸರ್ವೋದಯ ಮಂಡಲಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಮತ್ತು ಭುಜಕ್ಕೆ ಭುಜಕೊಟ್ಟು ಕೆಲಸಮಾಡುವಂತೆ ಪ್ರಯತ್ನ ಮಾಡಬೇಕು. ಇದಕ್ಕಾಗಿ ಖಾದಿ ಸಂಸ್ಥೆಗಳ ಪ್ರತಿನಿಧಿಗಳ ಮತ್ತು ಸರ್ವೋದಯ ಕಾರ್ಯಕರ್ತರ ಸಂಯುಕ್ತ ಸಭೆಯೊಂದು ೨೦೧೨ ಅಕ್ಟೋಬರ್ ಮಾಹೆಯ ಕೊನೆಯೊಳಗೆ ನಡೆಯಬೇಕು.

೪. ರಾಜ್ಯಮಟ್ಟದ ಇನ್ನೊಂದು ಸಂಘಟನೆಯಾದ ಭಾರತ ಸೇವಾ ದಳವೂ ಸಹ ಮಂಡಲಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಸೇವಾದಳದ ಪದಾಧಿಕಾರಿಗಳ ಮನವೊಲಿಸಬೇಕು.

೫. ಸರ್ವೋದಯ ಆಂದೋಲನ ಪ್ರಸ್ತುತವಾಗಬೇಕಾದರೆ ಸ್ಥಾನೀಯ ಸಮಸ್ಯೆಗಳನ್ನು ಎತ್ತಿಕೊಂಡು ಚಳುವಳಿ ನಡೆಸಬೇಕು ಇಲ್ಲವೇ ಇಂಥ ಚಳುವಳಿ ನಡೆಸುವ ಸಮಾನ ಮನಸ್ಕ ಸಂಸ್ಥೆಗಳೊಂದಿಗೆ ಸೇರಿಕೊಂಡು ಕೆಲಸಮಾಡಬೇಕು.

೬. ಸರ್ವೋದಯ ಆದೋಲನದ ಸಂದೇಶ ವಾಹಕವಾದ 'ಜನಪದ ವಿಚಾರ'ದ ಚಂದಾದಾರರ ಸಂಖ್ಯೆಯನ್ನು ಒಂದುಸಾವಿರವನ್ನಾದರೂ ಮಾಡಬೇಕು. ಇದು ೨೦೧೨ ನವೆಂಬರ್ ತಿಂಗಳ ಒಳಗಾಗಿ ಆಗಬೇಕು.

೭. ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಯುವಕ ಶಿಬಿರವಾದರೂ ನಡೆಯಬೇಕು. ಈ ಯುವಶಿಬಿರದ ಕಾರ್ಯಕ್ರಮಗಳು ಅಕ್ಟೋಬರ್ ಕೊನೆಯೊಳಗೆ ನಡೆಯಬೇಕು. ಈ ಶಿಬಿರದ ವ್ಯವಸ್ಥೆಯನ್ನು ಆಯಾ ಜಿಲ್ಲೆಯ ಕಾರ್ಯಕರ್ತರು ಮಾಡಬೇಕು. ಅವರಿಗೆ ರಾಜ್ಯ ಸರ್ವೋದಯ ಮಂಡಲಿ ಸಹಕರಿಸುವುದು.

೮. ೨೦೧೨ ನವೆಂಬರ್ ಕೊನೆಯ ವಾರದಲ್ಲಿ ಕರ್ನಾಟಕ ರಾಜ್ಯ ಸರ್ವೋದಯ ಮೇಳವನ್ನು ಸೂಕ್ತಸ್ಥಳದಲ್ಲಿ ಆಯೋಜಿಸಬೇಕು.

೯. ೨೦೧೨ ನವೆಂಬರ್ ಕೊನೆಯ ವಾರದಲ್ಲಿ ಜಿಲ್ಲೆಗೆ ಹತ್ತು ಲೋಕಸೇವಕರಂತೆ ಮುನ್ನೂರು ಜನ ಲೋಕ ಸೇವಕರನ್ನಾದರೂ ನೊಂದಾಯಿಸಿಕೊಳ್ಳಬೇಕು. ಇದು ನವೆಂಬರ್ ಮೊದಲವಾರದಲ್ಲಿ ಮಾಡಬೇಕು.

೧೦. ೨೦೧೨ ಡಿಸೆಂಬರ್ ಮಧ್ಯಭಾಗದಲ್ಲಿ ಸರ್ವೋದಯ ಮಂಡಲಿಯ ಸರ್ವಸದಸ್ಯರ ಸಭೆಯನ್ನು ಕರೆಯುವುದು.

೧೧. ಕರ್ನಾಟಕ ಸರ್ವೋದಯ ಮಂಡಲಿ ಸ್ಥಾಪಿತವಾಗಿ ೫೦ ವರ್ಷಗಳಾದವು ಮಂಡಲಿಯ ಸ್ವರ್ಣ ಮಹೋತ್ಸವನ್ನು ಸೂಕ್ತರೀತಿಯಲ್ಲಿ ಮತ್ತು ಸಂಘಟನೆಯ ಹಾಗೂ ಸರ್ವೋದಯ ಆಂದೋಲನದ ಸಂಬಲವರ್ಧನೆಗೆ ಅನುಕೂಲ ವಾಗುವಂತೆ ಆಚರಿಸಬೇಕಿದೆ.

ಮೇಲ್ಕಾಣಿಸಿದ ಮುಂದಿನ ಆರು ತಿಂಗಳ ಕಾರ್ಯಕ್ರಮ ಕಾರ್ಯಗತವಾಗುವುದಕ್ಕೆ ನಿಮ್ಮೆಲ್ಲರ ಸಹಕಾರ ಮುಖ್ಯವಾಗಿದೆ. ಆ ಸಹಕಾರ ನಿಮ್ಮಿಂದ ದೊರೆಯುವುದೆಂಬ ನಿರೀಕ್ಷೆಯಿದೆ. ನೀವೆಲ್ಲರೂ ಮಂಡಲಿ ಆಹ್ವಾನದ ಮೇರೆಗೆ ಈ ಸಭೆಗೆ ಬಂದು ಸಹಕರಿಸಿದ್ದಕ್ಕಾಗಿ ಎಲ್ಲರಿಗೂ ಕೃತಜ್ಞತೆಗಳು.

ಎಲ್ಲರೂ ಶಾಂತಿಯಲ್ಲಿ ಬಾಳಲಿ। ಪ್ರಜೆಗಳಾಳಲಿ ನ್ಯಾಯದಿ॥
ಸುಜನವೃಂದವು ಸುಖದಿ ನಲಿಯಲಿ। ಗೋಗಳಿಗೆ ಹಿತವಾಗಲಿ॥

– *ಸುರೇಂದ್ರ ಕೌಲಗಿ*

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎನ್.ಕಲ್ಲಪ್ಪ
ಶ್ರೀಮತಿ ಗೀತಾ ಪಾರ್ಥಸಾರಥಿ – ಬೆಂಗಳೂರು;

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಬಿ.ವಿಶ್ವನಾಥ
ಪ್ರೊ॥ ಸುಗೀತಾ ಸುವರ್ಣ
ಡಾ॥ ಬಿ.ಎಸ್.ಚಂದ್ರಶೇಖರ್
ಶ್ರೀಮತಿ ಬಿ.ಆರ್.ಜ್ಯೋತಿಲಕ್ಷ್ಮೀ – ಚನ್ನೈ;
ಶ್ರೀ ಎ.ಆನಂದ – ಹುಣಸೂರು;
ಶ್ರೀ ರವಿತೇಜ.ವಿ.ಅಬ್ಬಿಗೇರಿ – ಕುಕನೂರು;
ಶ್ರೀ ಸಂಜು ಶೆಟ್ಯಾಳಕರ್ – ನೀಲವಾಣಿ;
ಪ್ರೊ॥ ಎಂ.ಜಿ.ಶಿವರಾಂ – ಬೆಂಗಳೂರು;

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh Mudrana, Melkote.